ಭಾನುವಾರ, ಮೇ 1, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಯ್ಯೋ ಬಿಸಿಲು...

ಅಮೃತಸರದಲ್ಲಿ ಶನಿವಾರ ಸ್ಕೂಟರ್ ಸವಾರರು ಬಿಸಿಲಿನ ಬೇಗೆಯಿಂದ ರಕ್ಷಣೆ ಪಡೆದುಕೊಳ್ಳಲು ಶಾಲಿನಿಂದ ತಲೆ, ಮುಖವನ್ನು ಮುಚ್ಚಿಕೊಂಡು ಸಾಗಿದರು

ಜೋಯಾಲುಕ್ಕಾಸ್
ಮಂಗಳಕರ
ಶುಭಾರಂಭ

ಅಕ್ಷಯ ತೃತೀಯ
ಶುಭಾಶಯ

ವಿಶೇಷ ಗಿಫ್ಟ್ ವೋಚರ್‌ಗಳೊಂದಿಗೆ
ಉಜ್ವಲ ಆರಂಭವನ್ನು ಸಂಭ್ರಮಾಚರಿಸಿ.

ಉಚಿತ
₹500
ಗಿಫ್ಟ್ ವೋಚರ್
ರೂ.10,000 ಮತ್ತು
ಅಧಿಕ ಮೊತ್ತದ ಬೆಳ್ಳಿ ಆಭರಣ
ಖರೀದಿಯ ಮೇಲೆ

ಉಚಿತ
₹1000
ಗಿಫ್ಟ್ ವೋಚರ್
ರೂ.50,000 ಮತ್ತು
ಅಧಿಕ ಮೊತ್ತದ ಚಿನ್ನಾಭರಣ
ಖರೀದಿಯ ಮೇಲೆ

ಉಚಿತ
₹2000
ಗಿಫ್ಟ್ ವೋಚರ್
ರೂ.50,000 ಮತ್ತು ಅಧಿಕ
ಮೊತ್ತದ ವಜ್ರ, ಅನ್‌ಕಟ್ ವಜ್ರ
ಮತ್ತು ಅನರ್ಘ್ಯ ರತ್ನದ
ಆಭರಣ ಖರೀದಿಗೆ

*T&C Apply. Not applicable for Gold coins & bars.

ಈ ಕೊಡುಗೆ 3 ಮೇ 2022ರ ವರೆಗೆ ಅನ್ವಯ

TODAY'S GOLD RATE ₹4740
1gm, 22ct

5% EXTRA CASHBACK* SBI card
*Min. Trxn.: ₹25,000; Max. Cashback: ₹2,500 per credit card account.
Validity: 22 Apr-3 May'22. T&C Apply

SHOP ONLINE @
joyalukkas.in

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY
KAMMANAHALLI | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANGERE

‘ದುಃಸ್ವಪ್ನದಂತೆ ಕಾಡುವ ವಲಸೆ ವಿಭಾಗದ ಪ್ರಕ್ರಿಯೆ’

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ: ಚಹರೆ ಗುರುತಿಸುವ ತಂತ್ರಜ್ಞಾನ ಅಳವಡಿಕೆಗೆ ಕಿರಣ್ ಮಜುಂದಾರ್ ಶಾ ಸಲಹೆ

ಪ್ರಜಾವಾಣಿ ವಾರ್ತೆ

ಕಿರಣ್ ಮಜುಂದಾರ್

ಬೆಂಗಳೂರು: ‘ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈಗ ವಲಸೆ ವಿಭಾಗದ ಪ್ರಕ್ರಿಯೆ ದುಃಸ್ವಪ್ನದಂತೆ ಕಾಡುತ್ತಿದೆ. ದಕ್ಷತೆಗೆ ಹೆಸರುವಾಸಿಯಾಗಿದ್ದ ನಮ್ಮ ನಗರದ ಗೌರವಕ್ಕೆ ಇದು ಚ್ಯುತಿ ತರುವಂತಿದೆ’ ಎಂದು ‘ಬಯೋಕಾನ್’ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶನಿವಾರ ಈ ಕುರಿತು ಟ್ವೀಟ್ ಮಾಡಿರುವ ಅವರು, ‘ವಲಸೆ ವಿಭಾಗದ ಪರಿಶೀಲನಾ ಪ್ರಕ್ರಿಯೆಗಳು ಡಿಜಿಟಲೀಕರಣಗೊಂಡು ಸ್ಮಾರ್ಟ್ ಆಗಬೇಕಿವೆ. ಚಹರೆ ಗುರುತಿಸುವ ತಂತ್ರಜ್ಞಾನ ಹಾಗೂ ಬಯೊಮೆಟ್ರಿಕ್‌ಗಳನ್ನು ಬಳಸುವ ಮೂಲಕ ಪ್ರವೇಶ ಮತ್ತು ನಿರ್ಗಮನ ಪ್ರಕ್ರಿಯೆಯನ್ನು ಇನ್ನಷ್ಟು ದಕ್ಷವಾಗಿರುವಂತೆ ರೂಪಿಸಬೇಕು’ ಎಂದೂ ಸಲಹೆ ನೀಡಿದ್ದಾರೆ. ಈ ಟ್ವೀಟ್‌ಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆ (ಬಿಐಎಎಲ್) ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹರಿ ಮಾರಾರ್ ಅವರನ್ನು ಟ್ಯಾಗ್ ಮಾಡಿದ್ದಾರೆ. ಇದಕ್ಕೆ ತನ್ನ ಅಧಿಕೃತ ಟ್ವಿಟರ್ ಖಾತೆ ಮೂಲಕ ಪ್ರತಿಕ್ರಿಯಿಸಿರುವ ವಿಮಾನ ನಿಲ್ದಾಣ ಸಂಸ್ಥೆಯು, ‘ಕಿರಣ್ ಅವರೇ, ಈ ವಿಚಾರವನ್ನು ತಿಳಿಸಿದ್ದಕ್ಕೆ ಧನ್ಯವಾದ. ನಿಮ್ಮ ಪ್ರತಿಕ್ರಿಯೆಗಳನ್ನು ನಮ್ಮ ಕಾರ್ಯಾಚರಣೆ ವಿಭಾಗದ ಗಮನಕ್ಕೆ ತರುತ್ತೇವೆ’ ಎಂದು ತಿಳಿಸಿದೆ. ಈ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಅನೇ ಕರು ಕಿರಣ್ ಮಜುಂದಾರ್ ಶಾ ಅವರ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

‘ಒಮ್ಮೆ ಬ್ರಿಟನ್‌ಗೆ ತೆರಳುವ ಸಲುವಾಗಿ ನಾನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವಲಸೆ ವಿಭಾಗದಲ್ಲಿ ಪರಿಶೀಲನೆಗೆ ಒಳಪಡಬೇಕಾಯಿತು. ವಲಸೆ ಅಧಿಕಾರಿಯೊಬ್ಬರು (ತುಸು ಅಸಹಜ ನಡವಳಿಕೆ ಹೊಂದಿದ್ದರು) ನಾನು ಲಂಡನ್ ತಲುಪಿದ ಬಳಿಕ ಭಾರತದಲ್ಲಿ ಬಳಸುವ ನನ್ನ ಮೊಬೈಲ್ ನಂಬರ್‌ಗೆ ಖಾಸಗಿಯಾಗಿ ಸಂದೇಶ ಕಳುಹಿಸಿದರು. ಡೇಟಾ ಖಾಸಗಿತನದ ಕತೆ ಏನಾಯಿತು?’ ಎಂದು ಚಂದ್ರಲೇಖ ರಾಮಲಿಂಗಮ್ ಅವರು ಟ್ವೀಟ್ ಮಾಡಿದ್ದಾರೆ.

‘ನಿಮಗಿಲ್ಲಿ ಗಣ್ಯಾತಿಗಣ್ಯರಂತೆ ಉಪಚಾರ ಸಿಗದಿದ್ದಾಗ ಈ ರೀತಿ ಹೊಟ್ಟೆ ಉರಿಯುವುದು ಸಹಜ. ಇಲ್ಲೇನೊ ಬೇರೆಯೇ ವಾಸನೆ ಇದೆ’ ಎಂದು ಬಿಂದು ಆದರ್ಶ್ ಅವರು ಪ್ರತಿಕ್ರಿಯಿಸಿದ್ದಾರೆ.

‘ಒಬ್ಬರು ದೇಶದಿಂದ ಹೊರಗೆ ಹೋಗುವಾಗಲೂ ವಲಸೆ ಪರಿಶೀಲನೆ ಪ್ರಕ್ರಿಯೆಗೆ ಒಳಪಡುವ ಅಗತ್ಯವಾದರೂ ಏನು?, ಕಸ್ಟಮ್ಸ್ ವಿಭಾಗದಲ್ಲಂತೂ ಇನ್ನಷ್ಟು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ನಗರಕ್ಕೆ ಬರುವ ಎಲ್ಲ ಪ್ರಯಾಣಿಕರೆಲ್ಲರೂ ಒಂದೇ ಎಕ್ಸ್–ರೇ ಯಂತ್ರದ ಮೂಲಕ ಪರಿಶೀಲನೆಗೆ ಒಳಪಡಬೇಕು. ಎಲ್ಲರನ್ನೂ ಕಳ್ಳಸಾಗಣೆ ಮಾಡುವವರಂತೆ ನೋಡಲಾಗುತ್ತದೆ. ಹೆಚ್ಚು ಯಂತ್ರಗಳನ್ನು ಹಾಗೂ ಅಧಿಕಾರಿಗಳನ್ನು ಒದಗಿಸಬಹುದಲ್ಲವೇ’ ಎಂದು ಅಮಿತ್ ತ್ಯಾಗಿ ಅವರು ಪ್ರಶ್ನಿಸಿದ್ದಾರೆ.

‘ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಎಂ.ಸಿಂಧಿಯಾ ಮತ್ತು ರಾಜ್ಯ ಸಚಿವ ಜನರಲ್ ವಿ.ಕೆ. ಸಿಂಗ್ ಅವರು ಪ್ರಯಾಣವನ್ನು ಇನ್ನಷ್ಟು ಸುಗಮಗೊಳಿಸುವಂತೆ ವಿಮಾನಯಾನ ಸಚಿವಾಲಯದಲ್ಲಿ ಸುಧಾರಣೆ ತರುವ ಮೂಲಕ ಅಸ್ತಿತ್ವವನ್ನು ತೋರಿಸಬೇಕು. ಎಲ್ಲದರಲ್ಲೂ ರಾಜಕೀಯ ಮಾಡುವ ಬದಲು ಸರ್ಕಾರದ ಮೌಲ್ಯವನ್ನು ಹೆಚ್ಚಿಸುವಂತಹ ಕಾರ್ಯದಕ್ಷತೆಯನ್ನು ತೋರುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಸಚಿವರಿಗೆ ಸೂಚಿಸಬೇಕು’ ಎಂದು ಶ್ರೀಧರ್ ಡಿಪಿಎಸ್ ಅವರು ಸಲಹೆ ನೀಡಿದ್ದಾರೆ.

‘ನಾನಿದನ್ನು ಸಂಪೂರ್ಣ ಒಪ್ಪುತ್ತೇನೆ. 30 ವರ್ಷಗಳ ಹಿಂದೆ ನಾನು ದುಬೈಗೆ ಮೊದಲ ಬಾರಿ ಹೋಗಿದ್ದೆ. ಹಾಗೂ ಈಗ ಅಲ್ಲಿನ ವಲಸೆ ವಿಭಾಗದವರು ನನ್ನ ಕಣ್ಣುಗಳನ್ನು ಸ್ಕ್ಯಾನ್ ಮಾಡಿ ಇಡೀ ಪ್ರಕ್ರಿಯೆಯನ್ನು 50 ಸೆಕೆಂಡ್‌ಗಳಿಗೂ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸುತ್ತಾರೆ. ಜನರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಭಾರತವೂ ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಇದು ಸೂಕ್ತ ಸಮಯ’ ಎಂದು ಗಿರೀಶ್ ನಾರಾಯಣನ್ ಅವರು ಅನುಭವ ಹಂಚಿಕೊಂಡಿದ್ದಾರೆ.

ಗಮನ ಸೆಳೆದ ಟ್ವೀಟ್‌ಗಳು

ಕಳೆದ ವಾರ ಪುಣೆಗೆ ವಿಮಾನದಲ್ಲಿ ತೆರಳಿ ಮರಳಿದೆ. ಟೇಕ್ ಆಫ್ ಆಗಲು ಒಂದನೇ ರನ್‌ವೇಯ ಒಂದು ತುದಿಯಿಂದ ಎರಡನೇ ರನ್‌ವೇಯ ಇನ್ನೊಂದು ತುದಿ ತಲುಪಲು 20 ನಿಮಿಷಗಳು ಬೇಕಾದವು. ಇಲ್ಲಿ ಬಂದಿಳಿಯುವಾಗಲೂ ಅಂತಹದ್ದೇ ಅನುಭವವಾಯಿತು. ಇದರಿಂದ ಸಮಯ ಮತ್ತು ಇಂಧನ ಎರಡೂ ವ್ಯರ್ಥ. ಅತ್ಯಂತ ದಕ್ಷ ಎಂದು ಕರೆಯಿಸಿಕೊಳ್ಳುವ ವಿಮಾನನಿಲ್ದಾಣದಲ್ಲಿ ಇದನ್ನು ನಿರೀಕ್ಷೆ ಮಾಡಲಾಗದು. ಶೌಚಾಲಯಗಳೂ ಕೆಟ್ಟವಾಸನೆಯಿಂದ ಕೂಡಿದ್ದವು

ಶಶಿಧರ ರಾವ್

ವಲಸೆ ವಿಭಾಗದಲ್ಲಿ ತಗುಲುವ ಸಮಯಕ್ಕೂ ನಿರ್ದಿಷ್ಟ ಸಮಯದಲ್ಲಿ ಎಷ್ಟು ವಿಮಾನಗಳು ಹಾರಾಟ ನಡೆಸುತ್ತವೆ ಎಂಬುದಕ್ಕೂ ನೇರ ಸಂಬಂಧವಿದೆ. ಕೆಲವೊಮ್ಮೆ ನಾನು ಗಂಟೆಗಟ್ಟಲೆ ಕಾದಿದ್ದೇನೆ. ಕೆಲವೊಮ್ಮೆ ಹತ್ತೇ ನಿಮಿಷಗಳಲ್ಲಿ ಎಲ್ಲ ಪ್ರಕ್ರಿಯೆಗಳೂ ಮುಗಿದಿವೆ. ಇವೆಲ್ಲವೂ ಅದೃಷ್ಟವನ್ನು ಅವಲಂಬಿಸಿದೆ. ಜಗತ್ತಿನಾದ್ಯಂತ ಇದೇ ರೀತಿ ಇದೆ

ರಾನಕ್ ಮಹಾಜನ್

ಖಂಡಿತ! ಅಂತರರಾಷ್ಟ್ರೀಯ ಕಾರ್ಯಾಚರಣೆಯನ್ನು ವಿಸ್ತರಿಸುವ ನಮ್ಮ ಮಹತ್ವಾಕಾಂಕ್ಷೆಯ ಯೋಜನೆಯ ಸಂದರ್ಭದಲ್ಲಂತೂ ಇದು ತುರ್ತು ಅಗತ್ಯ.

ಬಿನು ಎಂ.ಆರ್

ಸುದ್ದಿ 2 ನಿಮಿಷ

10 ತಿಂಗಳಿನಲ್ಲಿ 100 ಲ್ಯಾಪ್‌ಟಾಪ್ ಕಳವು: ಭದ್ರತಾ ಅಧಿಕಾರಿ ಬಂಧನ

ಬೆಂಗಳೂರು: ಕೆಲಸಕ್ಕಿದ್ದ ಕಂಪನಿಯ ಲ್ಯಾಪ್‌ಟಾಪ್‌ಗಳನ್ನು ಕದಿಯುತ್ತಿದ್ದ ಆರೋಪದಡಿ ಚಿನ್ನಬಥಿನಿ ಜಾನ್ ಪೌಲ್ (35) ಎಂಬುವರನ್ನು ಮಾರತ್ತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ತೆಲಂಗಾಣದ ಚಿನ್ನಬಥಿನಿ, ಕೆಲಸ ಅರಸಿ ನಗರಕ್ಕೆ ಬಂದು ಭದ್ರತಾ ಏಜೆನ್ಸಿಯೊಂದಕ್ಕೆ ಸೇರಿದ್ದ. ಈತನನ್ನು ಕಾಡುಬಿಸನಹಳ್ಳಿ ಬಳಿಯ ಒರ್‍ಯಾಕಲ್ ಇಂಡಿಯಾ ಕಂಪನಿಯ ಭದ್ರತಾ ಅಧಿಕಾರಿಯಾಗಿ ನಿಯೋಜಿಸಲಾಗಿತ್ತು. ಅದೇ ಕಂಪನಿಯಲ್ಲಿದ್ದ ಲ್ಯಾಪ್‌ಟಾಪ್‌ಗಳನ್ನು ಕಳ್ಳತನ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿಯಿಂದ ವಿವಿಧ ಕಂಪನಿಗಳ 67 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ. ಕದ್ದ ಲ್ಯಾಪ್‌ಟಾಪ್ ಮಾರಾಟದಿಂದ ಬಂದಿದ್ದ ಹಣದಲ್ಲಿ ಖರೀದಿಸಿದ್ದ ಚಿನ್ನಾಭರಣ ಹಾಗೂ ಕಾರನ್ನೂ ಸುಪರ್ದಿಗೆ ಪಡೆಯಲಾಗಿದೆ’ ಎಂದೂ ತಿಳಿಸಿದರು.

ಒಎಲ್‌ಎಕ್ಸ್, ಫೇಸ್‌ಬುಕ್‌ನಲ್ಲಿ ಮಾರಾಟ: ‘ಕದ್ದ ಲ್ಯಾಪ್‌ಟಾಪ್‌ಗಳ ಫೋಟೊವನ್ನು ಒಎಲ್‌ಎಕ್ಸ್ ಜಾಲತಾಣ ಹಾಗೂ ಫೇಸ್‌ಬುಕ್ ಮಾರ್ಕೆಟ್‌ಪ್ಲೇಸ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ಕಂಪನಿ ಬಳಕೆ ಮಾಡಿದ ಲ್ಯಾಪ್‌ಟಾಪ್ ಎಂಬುದಾಗಿ ಹೇಳಿ ಗ್ರಾಹಕರಿಗೆ ಮಾರುತ್ತಿದ್ದ’ ಎಂದು ಪೊಲೀಸರು ಹೇಳಿದರು.



‘ಚರ್ಚ್‌ಗಳಿಗೆ ದೊರಕದ ಅನುದಾನ’

ಬೆಂಗಳೂರು: ‘ಅಲ್ಪಸಂಖ್ಯಾತರ ಇಲಾಖೆಯಲ್ಲಿ ದಲ್ಲಾಳಿಗಳು ಹೆಚ್ಚಾಗಿದ್ದು, ಚರ್ಚ್‌ಗಳಿಗೆ ನ್ಯಾಯಯುತವಾಗಿ ಅನುದಾನ ಸಿಗುತ್ತಿಲ್ಲ’ ಎಂದು ಅಖಿಲ ಭಾರತ ಕ್ರೈಸ್ತ ಮಹಾಸಭಾದ ಸಂಸ್ಥಾಪಕ ಅಧ್ಯಕ್ಷ ಪ್ರಜ್ವಲ್‌ಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಕ್ರೈಸ್ತ ಸಮುದಾಯಕ್ಕೆ ಸರ್ಕಾರ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಚರ್ಚ್ ಮತ್ತಿತರ ಕಾರ್ಯಗಳಿಗೆ ಬಳಕೆ ಮಾಡುತ್ತಿಲ್ಲ. ಮಧ್ಯವರ್ತಿಗಳ ಜತೆ ಅಧಿಕಾರಿಗಳೂ ಕೈ ಜೋಡಿಸಿ ಅನ್ಯಾಯ ಮಾಡುತ್ತಿದ್ದಾರೆ. ಅಂತಹ ಅಧಿಕಾರಿಗಳನ್ನು ಕೆಲಸದಿಂದ ವಜಾಗೊಳಿಸಿ ಬಂಧಿಸಬೇಕು’ ಎಂದು ಆಗ್ರಹಿಸಿದರು.

ಪಕ್ಷಾಂತರ ಮಾಡಿ ತಪ್ಪು ಮಾಡಿದೆ: ಎಂ.ಟಿ.ಬಿ ನಾಗರಾಜ್

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ‘ಒಂದು ಪಕ್ಷ ತೊರೆದು ಇನ್ನೊಂದು ಪಕ್ಷ ಸೇರಿರುವುದು ರಾಜಕೀಯ ಜೀವನದಲ್ಲಿ ನಾನು ಮಾಡಿದ ಮೊದಲ ತಪ್ಪು’ ಎಂದು ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಟಿ.ಬಿ. ನಾಗರಾಜ್ ಅವರು ಬಹಿರಂಗವಾಗಿ ಪಶ್ಚಾತ್ತಾಪಪಟ್ಟರು.

ಪುರಸಭಾ ಸಭಾಂಗಣದಲ್ಲಿ ಶುಕ್ರವಾರ ರಾತ್ರಿ ಹಮ್ಮಿಕೊಂಡಿದ್ದ ಅಧಿಕಾರಿಗಳ ಹಾಗೂ ಆಡಳಿತ ಮಂಡಳಿ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

‘ರಾಜಕೀಯದಲ್ಲಿ ನಾನು ಹಣ ಮಾಡಬೇಕು ಎಂದೇನಿಲ್ಲ. ಆ ವಿಷಯದಲ್ಲಿ ನಾನು ಇಂದಿಗೂ ಪರಿಶುದ್ಧನಾಗಿದ್ದೇನೆ. ರಾಜಕೀಯ ಜೀವನದಲ್ಲಿ ನಾನು ಮಾಡಿದ ಒಂದೇ ಒಂದು ತಪ್ಪು ಎಂದರೆ, ಒಂದು ಪಕ್ಷ ಬಿಟ್ಟು ಮತ್ತೊಂದು ಪಕ್ಷಕ್ಕೆ ಸೇರಿರುವುದು. ಅದರ ಅರಿವು ಈಗ ಆಗುತ್ತಿದೆ. ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಕಡೆಯವರೇ ನನ್ನನ್ನು ಪಕ್ಷದಿಂದ ಹೊರಗೆ ಕಳುಹಿಸಿದರು’ ಎಂದು ಸುಬ್ಬಾರೆಡ್ಡಿ ಅವರತ್ತ ತಿರುಗಿ ಹೇಳಿದರು.

ಘಟಿಕೋತ್ಸವದಲ್ಲಿ ಚಿನ್ನದ ಪದಕಕ್ಕೆ ಅರ್ಹರಾದವರು: ಬಲಭಾಗದಿಂದ ಶಮೀಯತ್ ನುಸೈಬಾ, ವೀಣಾ ಸುರೇಶ್ ಸಿಂಗ್ ಶಿಗ್ಗಾವಿ, ಎನ್.ಶ್ವೇತಾ, ಅಭಿಷೇಕ್ ಪಾಂಡೆ, ಸನ್ನಿಧಿ, ವಿ. ಶಶಿಕಲಾ, ಸುಮನ್ ಬಿ ಗೋದಿ (ಕುಳಿತವರು) (ಎಡಚಿತ್ರ) ಫಾರ್ಮ ಡಿ ಕೋರ್ಸ್‌ನಲ್ಲಿ ಚಿನ್ನದ ಪದಕ ಪಡೆದ ಚಾಂದಿನಿ ನಾಯರ್ (ಅಂಗವಿಕಲೆ) ಅವರಿಗೆ ಮುತ್ತಿಕ್ಕಿದ ಪೋಷಕರು – ಪ್ರಜಾವಾಣಿ ಚಿತ್ರಗಳು

‘ವೈದ್ಯಕೀಯ ಶಿಕ್ಷಣದಲ್ಲಿ ಕೌಶಲಕ್ಕೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೌಶಲ ಹಾಗೂ ಹೆಚ್ಚಿನ ಪ್ರಾಯೋಗಿಕ ತರಬೇತಿ ಆಧಾರಿತವಾಗಿ ವೈದ್ಯಕೀಯ ಶಿಕ್ಷಣದ ಪಠ್ಯಕ್ರಮ ಬದಲಿಸಬೇಕಿದೆ’ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಡಾ. ಭಾರತೀ ಪ್ರವೀಣ್ ಪವಾರ್ ಹೇಳಿದರು.

ಶನಿವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) 24ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ಡಿಜಿಟಲ್ ಕಲಿಕೆ ಮೂಲಕ ತಂತ್ರಜ್ಞಾನ ಸದ್ಬಳಕೆ, ಮೂಲಸೌಕರ್ಯ ಹೆಚ್ಚಿಸುವುದು, ಸಾಮರ್ಥ್ಯ ಆಧಾರಿತ ಕೌಶಲ, ಸಾಂದರ್ಭಿಕವಾಗಿ ಅಥವಾ ಸಮಸ್ಯೆ ಪರಿಹರಿಸುವ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಿದೆ’ ಎಂದರು.

‘ಕೋವಿಡ್‌ಮತ್ತು ಎರಡನೇ ಅಲೆಯ ತೀವ್ರತೆಯಿಂದ ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯ ಹೆಚ್ಚಳವಾಯಿತು. ಅದರಲ್ಲೂ ಸಾಂಕ್ರಾಮಿಕ ವಿರುದ್ಧದ ಹೋರಾಟದಲ್ಲಿ ಲಸಿಕೆ ವಿತರಣೆ ಬಹುಮುಖ್ಯ ಪಾತ್ರ ವಹಿಸಿತು. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತ ಅತ್ಯಂತ ಯಶಸ್ವಿಯಾಗಿ ಲಸಿಕೆ ವಿತರಿಸಿದೆ. ಈ ವಿಚಾರದಲ್ಲಿ ಕರ್ನಾಟಕ ಕೂಡ ಮುಂದಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ವೈದ್ಯಕೀಯ ಸೇವೆಯು ಮಾನವೀಯ ಮತ್ತು ದೈವಿಕ ಸೇವೆಯಾಗಿದೆ. ಈ ಕ್ಷೇತ್ರಕ್ಕೆ ಬರುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ಮಾನವೀಯ ಸೇವೆಗೆ ಮುಡಿಪಾಗಿಸಿಕೊಳ್ಳಬೇಕು’ ಎಂದರು.

43,883 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ನಿಮ್ಹಾನ್ಸ್ ನಿವೃತ್ತ ನಿರ್ದೇಶಕ ಡಾ. ಬಿ.ಎನ್. ಗಂಗಾಧರ್ ಮತ್ತು ಧಾರವಾಡದ ಮಕ್ಕಳ ತಜ್ಞ ಡಾ. ರಾಜನ್ ದೇಶಪಾಂಡೆ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಗೈರು ಹಾಜರಾಗಿದ್ದರು.

ಒಟ್ಟು 83 ವಿದ್ಯಾರ್ಥಿಗಳಿಗೆ 100 ಚಿನ್ನದ ಪದಕ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ 82 ಪಿಎಚ್.ಡಿ, 146 ಸೂಪರ್ ಸ್ಪೆಷಾಲಿಟಿ, 6,796 ಸ್ನಾತಕೋತ್ತರ, 787 ಸ್ನಾತಕೋತ್ತರ ಡಿಪ್ಲೊಮಾ ಪದವಿ, 362 ಫೆಲೋಷಿಪ್ ಕೋರ್ಸ್, 10 ಸರ್ಟಿಫಿಕೇಟ್ ಕೋರ್ಸ್, 36,409 ಸ್ನಾತಕ ಅಭ್ಯರ್ಥಿಗಳು ಸೇರಿ ವಿವಿಧ ವಿಷಯಗಳಲ್ಲಿ 43,883 ಅಭ್ಯರ್ಥಿಗಳಿಗೆ ಪದವಿ ಪ್ರಮಾಣಪತ್ರ ಪಡೆಯಲು ಅರ್ಹರಾಗಿದ್ದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಕುಲಪತಿ ಡಾ.ಎಂ.ಕೆ. ರಮೇಶ್, ಕುಲಸಚಿವ ಎಂ.ಆರ್. ರವಿಕುಮಾರ್, ಮೌಲ್ಯಮಾಪನ ಕುಲಸಚಿವ ಡಾ. ರಾಮಕೃಷ್ಣ ರೆಡ್ಡಿ ಇದ್ದರು.

ಉದಕಮಂಡಲ ರೇಸ್

ಪಾವರೊಟ್ಟಿ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ 2000 ಗಿನ್ನೀಸ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಾವರೊಟ್ಟಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವಾರ್‌ಂಡ 8, ವಂಡರ್ ಬ್ಲೇಝ್ 1, ಪ್ರೋಟಿಯಾ 2

2ನೇ ರೇಸ್: ಈಝಿ ರೈಡರ್ 2, ಟ್ರೆಮಂಡಸ್ ಪ್ರಿನ್ಸೆಸ್ 1, ಟರ್ಫ್ ಬ್ಯೂಟಿ 3

3ನೇ ರೇಸ್: ಮೈ ಒಪಿನಿಯನ್ 2, ಎಂಜೆಲಿಕಾಜಿ 4, ಹಿಸ್ಟೋರಿಯನ್ 1

4ನೇ ರೇಸ್: ಕರಡೆನಿಜ್ 2, ಡೆಸ್ಪಾಸಿಟೊ 3, ಸನಾಕ್ಷ 1

5ನೇ ರೇಸ್: ಪಾವರೊಟ್ಟಿ 5, ಸ್ಟಾರ್ ಗ್ಲೋರಿ 7, ಸ್ಟಿಲ್ ಐ ರೈಸ್ 9

6ನೇ ರೇಸ್: ಪ್ರೊಪೊಸ್ಡ್ 3, ಏರ್ ಮಾರ್ಷಲ್ 4, ಈಗಲ್ ಬ್ಲಫ್ 5

ಉತ್ತಮ ಬೆಟ್: ಈಝಿ ರೈಡರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

‘ಹೆಂಡತಿಗಾಗಿ ಯೌವನ ಕಾಪಾಡಿಕೊಂಡಿರುವೆ’

ಮನೆಯಂಗಳದಲ್ಲಿ ಮಾತುಕತೆ

ಬೆಂಗಳೂರು: ‘ಹೆಂಡತಿಯನ್ನು ನೋಡಿದರೆ ವಯಸ್ಸಾಗಿದೆ ಎಂದು ಅನಿಸುವುದೇ ಇಲ್ಲ. ಆಕೆಗಾಗಿಯೇ ನಾನೂ ಯೌವನವನ್ನು ಕಾಪಾಡಿಕೊಂಡು ಬರುತ್ತಿದ್ದೇನೆ’ ಎಂದು ಸಾಹಿತಿ ಬಿ.ಆರ್. ಲಕ್ಷ್ಮಣ ರಾವ್ ಹಾಸ್ಯ ಚಟಾಕಿ ಹಾರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿದ್ದ ಅವರು ತಮ್ಮ ಬದುಕಿನ ಹಲವು ನೆನಪುಗಳನ್ನು ಬಿಚ್ಚಿಟ್ಟರು.

ವಯಸ್ಸಿನ ಕುರಿತ ಪ್ರಶ್ನೆಗೆ, ‘ವಯಸ್ಸಾ|ಯಿತೆಂದು ಯಾವತ್ತೂ ಅಂದುಕೊಂಡೇ ಇಲ್ಲ. ನನ್ನೊಳಗಿನ ಕಾವ್ಯ ಕನ್ನಿಕೆಯನ್ನು ಉಳಿಸಿಕೊಳ್ಳುವುದಕ್ಕಾದರೂ ಸದಾ ಕಾಲ ಯೌವನಸ್ಥನಾಗಿರಬೇಕು. ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ’ ಎಂದು ನಗೆ ಬೀರಿದರು.

‘ಬಾಲ್ಯದಿಂದಲೇ ನನಗೆ ಎಲ್ಲಾ ಕ್ಷೇತ್ರಗಳಲ್ಲೂ ಆಸಕ್ತಿ ಇತ್ತು. ಏಕಾಂಗಿ ಸಾಹಸಗಳನ್ನು ಹೆಚ್ಚು ಮಾಡುತ್ತಿದ್ದೆ. ತಾಯಿ ತವರೂರು ಶಿಡ್ಲಘಟ್ಟದ ಚಿ.ಮಂಗಲದಲ್ಲಿದ್ದಾಗ ಕಾಗದದ ದೋಣಿ ಮಾಡಿ ಅದನ್ನು ಬಿಡಲು ಕೆರೆಗೆ ಹೋಗಿದ್ದೆ. ದೋಣಿ ಬಿಟ್ಟ ನಂತ ಅದರ ಹಿಂದೆಯೇ ಹೋಗಿ ನೀರಿನಲ್ಲಿ ಮುಳುಗಿದ್ದೆ. ಅದನ್ನು ನೋಡಿದವರೊಬ್ಬರು ನನ್ನ ಜೀವ ಉಳಿಸಿದ್ದರು’ ಎಂದರು.

‘ಅಪ್ಪನನ್ನು ನೋಡಿ ಸಂಗೀತದಲ್ಲೂ ಆಸಕ್ತಿ ಬೆಳೆಸಿಕೊಂಡಿದ್ದೆ. ಮನೆಯಲ್ಲಿ ಸಾಹಿತ್ಯದ ವಾತಾವರಣ ಇರಲಿಲ್ಲ. ಹೀಗಿದ್ದರೂ ಈ ಕ್ಷೇತ್ರದೆಡೆ ಹೇಗೆ ಹೊರಳಿದೆ ಎಂಬುದು ಗೊತ್ತಿಲ್ಲ. ಗ್ರಂಥಾಲಯದಿಂದ ಕಾದಂಬರಿಗಳನ್ನು ಎರವಲು ಪಡೆಯುತ್ತಿದ್ದ ಅಮ್ಮ, ಅವುಗಳನ್ನು ಮನೆಗೆ ತಂದು ಓದುತ್ತಿದ್ದರು. ಅವುಗಳನ್ನು ‘ಶಾಲಾ ದಿನಗಳಲ್ಲಿ ಮುಖ್ಯಶಿಕ್ಷಕರ ತರಗತಿಗೇ ‘ಚಕ್ಕರ್’ ಹೊಡೆದು ಸ್ನೇಹಿತರೊಂದಿಗೆ ಸಿನಿಮಾಗೆ ಹೋಗುತ್ತಿದ್ದೆ. ಅವರು ನಮ್ಮ ತಂದೆ ಬಳಿ ದೂರು ನೀಡುತ್ತಿದ್ದರು. ಹೇಗೋ ಅನುತ್ತೀರ್ಣನಾಗುತ್ತೇನೆ. ಫೋಟೊ ಸ್ಟುಡಿಯೊ ನೋಡಿಕೊಳ್ಳಲು ನಿಯೋಜಿಸಿದರಾಯಿತು ಎಂದು ಅಪ್ಪ ಭಾವಿಸಿದ್ದರು. ಆದರೆ ನಾನು ಸೆಂಟರ್‌ಗೆ ಎರಡನೇ ಸ್ಥಾನದೊಂದಿಗೆ ಪಾಸಾಗಿದ್ದೆ’ ಎಂದು ನೆನಪಿನ ಪುಟ ತಿರುವಿದರು.

‘ಕಾಲೇಜಿನಲ್ಲಿದ್ದಾಗ ಪ್ರಕಾಶ್ ಎಂಬ ಆತ್ಮೀಯ ಗೆಳೆಯನಿದ್ದ. ಆತನಿಂದಾಗಿ ಪದ್ಯ ಬರೆಯಲು ಶುರುಮಾಡಿದ್ದೆ. ಬೆಂಗಳೂರಿಗೆ ಬಂದ ನಂತರ ಕೆ.ಎಸ್. ನಿಸಾರ್ ಅಹಮದ್ ಅವರ ಪರಿಚಯವಾಯಿತು. ಅವರು ಪದ್ಯಗಳನ್ನು ಮೆಚ್ಚಿದ್ದರು. ಲಂಕೇಶರನ್ನು ಪರಿಚಯ ಮಾಡಿಕೊಳ್ಳುವಂತೆಯೂ ತಿಳಿಸಿದ್ದರು. ಪಿ.ಲಂಕೇಶ್ ಹಾಗೂ ವೈ.ಎನ್.ಕೆ. ಅವರು ನನ್ನನ್ನು ಸಾಹಿತಿಯನ್ನಾಗಿ ರೂಪಿಸಿದರು’ ಎಂದರು.

‘ಸಾಹಿತ್ಯಯಾನದಲ್ಲಿ ನಾನು ಮತ್ತು ಎಚ್.ಎಸ್.ವೆಂಕಟೇಶಮೂರ್ತಿ ಜೊತೆ ಜೊತೆಯಾಗಿ ಹೆಜ್ಜೆ ಇಟ್ಟಿದ್ದೇವೆ. ಭಾವಗೀತೆ ಪಯಣದಲ್ಲೂ ಜೊತೆಗಿದ್ದೆವು. ಆಗ ನಮ್ಮನ್ನೆಲ್ಲಾ ಕ್ಯಾಸೆಟ್ ಕವಿಗಳು ಎಂದು ಮೂದಲಿಸುತ್ತಿದ್ದರು. ಕಾವ್ಯದಿಂದ ಭಾವಗೀತೆಗೆ ಬಂದಾಗಲೂ ನಮ್ಮತನ ಬಿಟ್ಟುಕೊಟ್ಟರಲಿಲ್ಲ. ಜನರ ಪ್ರೀತಿ ಧಾರಾಳವಾಗಿ ಸಿಕ್ಕಿದೆ. ಅದಕ್ಕಿಂತ ದೊಡ್ಡ ಪ್ರಶಸ್ತಿ ಮತ್ಯಾವುದೂ ಬೇಕಿಲ್ಲ. ಕೆಲ ಪ್ರಶಸ್ತಿಗಳಿಗಾಗಿ ಯುದ್ಧ ರಂಗದ ಹಾಗೆ ಜೀವನ ರಂಗದಲ್ಲೂ ನಮ್ಮ ಸರತಿಗಾಗಿ ಕಾಯಬೇಕು. ಅಂತಹ ಪ್ರಶಸ್ತಿಗಳ ಬಗ್ಗೆ ನನಗೇನೂ ಆಸಕ್ತಿ ಇಲ್ಲ’ ಎಂದು ಹೇಳಿದರು.

ಅಧಿಕಾರಿಗಳ ಕರ್ತವ್ಯಲೋಪದಿಂದ ನ್ಯಾಯದಾನ ವಿಳಂಬ: ಸಿಜೆಐ ರಮಣ

ನವದೆಹಲಿ (ಪಿಟಿಐ): ‘ಅಧಿಕಾರಿಗಳು ಪೂರ್ಣಪ್ರಮಾಣದಲ್ಲಿ ಕರ್ತವ್ಯ ನಿರ್ವಹಿಸದ ಕಾರಣ, ನ್ಯಾಯದಾನ ಪ್ರಕ್ರಿಯೆ ವಿಳಂಬವಾಗುತ್ತಿದೆ. ಪಡಿತರ ಚೀಟಿ ವಿತರಣೆಯಂತಹ ಕೆಲಸ ಗಳನ್ನು ತಹಶೀಲ್ದಾರ್ ಸೂಕ್ತವಾಗಿ ನಿಭಾಯಿಸಿದ್ದರೆ, ರೈತ ಕೋರ್ಟ್ ಮೆಟ್ಟಿಲೇರುತ್ತಿರಲಿಲ್ಲ. ಕಂದಾಯ ಅಧಿಕಾರಿಗಳು ಕಾನೂನಿನ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆ ನಡೆಸದ ಕಾರಣ, ಕೋರ್ಟ್‌ಗೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹೇಳಿದ್ದಾರೆ.

ಮುಖ್ಯಮಂತ್ರಿಗಳು ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಜಂಟಿ ಸಮಾವೇಶ ಉದ್ದೇಶಿಸಿ ಅವರು ಶನಿವಾರ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ಸಮಾವೇಶವನ್ನು ಉದ್ಘಾಟಿಸಿದರು.

‘ನೀತಿ ರೂಪಿಸುವುದು ನ್ಯಾಯಾಂಗದ ಪರಿಧಿಯಲ್ಲಿಲ್ಲ. ಸರ್ಕಾರದ ಈ ಕೆಲಸದಲ್ಲಿ ನಾವು ಮಧ್ಯಪ್ರವೇಶಿಸುವುದಿಲ್ಲ. ಆದರೆ ನ್ಯಾಯದ ನಿರೀಕ್ಷೆಯಿಂದ ಕೋರ್ಟ್‌ಗೆ ಎಡತಾಕುವ ಜನರಿಗೆ ನಾವು ಆಗುವುದಿಲ್ಲ ಎಂದು ಹೇಳಲು ಬರುವುದಿಲ್ಲ’ ಎಂದು ಅವರು ಹೇಳಿದರು.

‘ನ್ಯಾಯದಾನದಲ್ಲಿ ಭಾರತೀಕರಣವನ್ನು ನಾನು ಪ್ರಬಲವಾಗಿ ಪ್ರತಿಪಾದಿಸುತ್ತೇನೆ. ಎಲ್ಲರಿಗೂ ನ್ಯಾಯಾಂಗದ ಸವಲತ್ತು ಸಿಗಬೇಕಾದರೆ, ಭಾರತೀಯ ನಾಗರಿಕರ ಅಗತ್ಯಗಳಿಗೆ ತಕ್ಕಂತೆ ನ್ಯಾಯದಾನ ವ್ಯವಸ್ಥೆಯಲ್ಲಿ ಬದಲಾವಣೆ ತರುವುದು ಭಾರತೀಕರಣ ಎನಿಸಿಕೊಳ್ಳುತ್ತದೆ. ಭಾಷೆಗಳ ಬೇಲಿಯನ್ನು ದಾಟುವುದು, ಎಲ್ಲರನ್ನೂ ಒಳಗೊಳ್ಳುವುದು, ಪ್ರಕ್ರಿಯೆಯಲ್ಲಿ ಸುಧಾರಣೆ ತರುವುದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಮೊದಲಾದ ವಿಚಾರಗಳನ್ನು ಇದು ಒಳಗೊಂಡಿದೆ’ ಎಂದು ವಿವರಿಸಿದ್ದಾರೆ.

ಮಾನವೀಯ ಸ್ಪರ್ಶಕ್ಕೆ ಕರೆ: ವಿಚಾರಣಾಧೀನ ಕೈದಿಗಳ ಬಿಡುಗಡೆಗೆ ಮಾನವೀಯತೆಯ ಆಧಾರದಲ್ಲಿ ಆದ್ಯತೆ ನೀಡುವಂತೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಿಗೆ ಪ್ರಧಾನಿ ಮೋದಿ ಮನವಿ ಮಾಡಿದರು. ‘ಜೈಲಿನಲ್ಲಿರುವ ವಿಚಾರಣಾಧೀನ ಕೈದಿಗಳ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಂಡು, ಅವರನ್ನು ಬಿಡುಗಡೆ ಮಾಡಬೇಕು. ನ್ಯಾಯಾಂಗ ಸುಧಾರಣೆ ಎಂದರೆ ಕೇವಲ ನೀತಿ ನಿರೂಪಣೆಗಷ್ಟೇ ಸಂಬಂಧಿಸಿರುವುದಲ್ಲ’ ಎಂದರು.

‘ನ್ಯಾಯಮೂರ್ತಿಗಳ ಭರ್ತಿಗೆ ಕಾಲಮಿತಿ’

ನವದೆಹಲಿ: ಮಂಜೂರಾಗಿರುವ ನ್ಯಾಯಮೂರ್ತಿಗಳ ಹುದ್ದೆಗಳ ಶೀಘ್ರ ಭರ್ತಿಗೆ ಕೇಂದ್ರ ಸೂಚಿಸಿದೆ. ಈ ಸಂಬಂಧ ಕಾಲಮಿತಿಯನ್ನೂ ನಿಗದಿಪಡಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ಇಲ್ಲಿ ನಡೆದ ಮುಖ್ಯಮಂತ್ರಿಯವರು ಮತ್ತು ಮುಖ್ಯ ನ್ಯಾಯಮೂರ್ತಿಯವರ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ನ್ಯಾಯಮೂರ್ತಿಯವರ ಹುದ್ದೆ ಖಾಲಿಯಾದ 6 ತಿಂಗಳೊಳಗೆ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸಮ್ಮೇಳನದಲ್ಲಿ ಸ್ಪಷ್ಟ ಸೂಚನೆ ನೀಡಲಾಗಿದೆ. ಜಿಲ್ಲಾ ನ್ಯಾಯಾಲಯ, ಹೈಕೋರ್ಟ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಹುದ್ದೆ ಭರ್ತಿಗೆ ಇಂತಿಷ್ಟು ದಿನ ಎಂಬಂತೆ ಕಾಲಮಿತಿ ನಿಗದಿ ಮಾಡಲಾಗಿದೆ. ಇಲಾಖೆಯಲ್ಲಿನ ಕೆಳಹಂತದ ಅಧಿಕಾರಿಗಳ ಹುದ್ದೆ ಭರ್ತಿಗೂ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದರು.

ಕಳ್ಳತನ: ಕೆಲಸಕ್ಕಿದ್ದ ಮಹಿಳೆ ಸೆರೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಸುಮಾ (40) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಸುಮಾ, ಕೆಲಸ ಹುಡುಕಿಕೊಂಡು ಪತಿ ಹಾಗೂ ಮಗನ ಜೊತೆ ನಗರಕ್ಕೆ ಬಂದಿದ್ದರು. ಪತಿ ಆರೋಗ್ಯ ಸಮಸ್ಯೆಯಿಂದಾಗಿ ಮನೆಯಲ್ಲೇ ಇರುತ್ತಿದ್ದರು. ಮನೆ ಕೆಲಸಕ್ಕೆ ಹೋಗುತ್ತಿದ್ದ ಸುಮಾ, ಅದರ ದುಡಿಮೆಯಲ್ಲೇ ಜೀವನ ನಡೆಸುತ್ತಿದ್ದರು.

‘ಮಗನಿಗೆ ಐ–ಫೋನ್ ಕೊಡಿಸಬೇಕು ಹಾಗೂ ಐಷಾರಾಮಿ ಜೀವನ ನಡೆಸಲು ಸುಮಾ, ಕಳ್ಳತನ ಮಾಡಲು ಯೋಚಿಸಿದ್ದರು. ಕೆಲಸ ಮಾಡುತ್ತಿದ್ದ ಫ್ಲ್ಯಾಟ್‌ನಲ್ಲೇ ವಜ್ರದ ಆಭರಣ ಹಾಗೂ ಚಿನ್ನಾಭರಣ ಕದ್ದಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಡಾ. ಅಂಬೇಡ್ಕರ್ ಜಯಂತಿ ಹಾಗೂ ಕಾರ್ಮಿಕರ ದಿನಾಚರಣೆ: ಭಾಗವಹಿಸುವವರು–ಅಲಿಬಾಬಾ, ಮಾವಳ್ಳಿ ಶಂಕರ್, ಆಯೋಜನೆ–ಡಾ.ಬಿ.ಆರ್. ಅಂಬೇಡ್ಕರ್ ಸೇನಾ ಸಮಿತಿ, ಸ್ಥಳ–ಎಂ.ವಿ.ಜಿ.ಎ.ಎನ್. ಕಲ್ಯಾಣ ಮಂಟಪ, ಮಾರಿಯಮ್ಮ ದೇವಸ್ಥಾನದ ರಸ್ತೆ, ನೀಲಸಂದ್ರ–ಬೆಳಿಗ್ಗೆ 10.

ನುಡಿ ಸಂಕಥನ ಪುಸ್ತಕ ಬಿಡುಗಡೆ: ಬಿಡುಗಡೆ ಮಾಡುವವರು–ನಟರಾಜ್ ಹುಳಿಯಾರ್, ಪುಸ್ತಕದ ಕುರಿತು–ನೆಲ್ಲಕುಂಟೆ ವೆಂಕಟೇಶಯ್ಯ, ಆಯೋಜನೆ–ಬಡವನಹಳ್ಳಿ ಪ್ರಕಾಶ್ ಗೆಳೆಯರು, ಸ್ಥಳ–ಎಚ್.ಎನ್. ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ–ಬೆಳಿಗ್ಗೆ 10.30.

ರಾಜ್ಯಮಟ್ಟದ ‘ಕಾಯಕಯೋಗಿ–2022’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ–ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ–ಎ.ಎಸ್.ಕಿರಣ್‌ಕುಮಾರ್, ಅಧ್ಯಕ್ಷತೆ–ಹುಲಿಕಲ್ ನಟರಾಜ್, ಆಯೋಜನೆ–ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ಸ್ಥಳ–ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ–ಬೆಳಿಗ್ಗೆ 10.30.

ಸಿ.ಹಯವದನ ರಾವ್ ಸ್ಮಾರಕ ದತ್ತಿ ಉಪನ್ಯಾಸ: ಬಾಬು ಕೃಷ್ಣಮೂರ್ತಿ, ವಿಷಯ: ‘ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪತ್ರಕರ್ತರ ಪಾತ್ರ’; ಆಯೋಜನೆ–ದಿ ಮಿಥಿಕ್ ಸೊಸೈಟಿ, ಸ್ಥಳ–ಶತಮಾನೋತ್ಸವ ಸಭಾಂಗಣ, 2ನೇ ಮಹಡಿ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ–ಬೆಳಿಗ್ಗೆ 10.30.

ಕಾರ್ಮಿಕರ ದಿನಾಚರಣೆ ಪ್ರಯುಕ್ತ ‘ಕಾರ್ಮಿಕರ ಹಬ್ಬ’ ಹಾಗೂ ‘ಪವರ್ ಸ್ಟಾರ್’ ಪ್ರಶಸ್ತಿ ಪ್ರದಾನ: ಆಯೋಜನೆ–ಗೌತಮ ಬುದ್ಧ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ವಿದ್ಯಾ ನಿಕೇತನ ಶಾಲೆ ಹತ್ತಿರ, ಉಲ್ಲಾಳ ಮುಖ್ಯರಸ್ತೆ–ಬೆಳಿಗ್ಗೆ 11.

ವಿಸ್ಮಯ ಜಗತ್ತು, ಮಕ್ಕಳಿಗಾಗಿ ವಿಜ್ಞಾನ ಪ್ರಯೋಗ: ಭಾಗವಹಿಸುವವರು–ಶಿವಪ್ಪ ಕಾಟವಾಳು, ಆಯೋಜನೆ–ರಾಗಿ ಕಣ ‘ಸಂತೆ’, ಸ್ಥಳ–ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಆವರಣ, ಬನ್ನೇರುಘಟ್ಟ ರಸ್ತೆ ಬಳಿ–ಬೆಳಿಗ್ಗೆ 11.

ಜೆ.ಶಾಂತಕುಮಾರ್ ಕೆನಡಿಯವರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ–ಆರ್.ಅಶೋಕ, ಅಭಿನಂದನಾ ನುಡಿ–ಸೈಮನ್ ಬರ್ತಲೋಮಿಯೊ, ಅಧ್ಯಕ್ಷತೆ–ಟಿ.ಎಸ್. ನಾಗಾಭರಣ, ಆಯೋಜನೆ–ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಸಂಘ ಹಾಗೂ ಕರ್ನಾಟಕ ಕ್ರೈಸ್ತರ ಕನ್ನಡಾಭಿಮಾನಿಗಳ ಒಕ್ಕೂಟ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಅಕ್ಕಮಹಾದೇವಿ ಸಭಾಂಗಣ, ಚಾಮರಾಜಪೇಟೆ–ಬೆಳಿಗ್ಗೆ 11.30.

ಸುಚೇಂದ್ರ ಪ್ರಸಾದ್

ಸುಚೇಂದ್ರ ಪ್ರಸಾದ್–50: ಅಧ್ಯಕ್ಷತೆ–ದೊಡ್ಡರಂಗೇಗೌಡ, ಉದ್ಘಾಟನೆ–ಶ್ರೀನಿವಾಸ ಜಿ.ಕಪ್ಪಣ್ಣ, ಉಪಸ್ಥಿತಿ–ದತ್ತಣ್ಣ, ಪಟ್ಟಣಗೆರೆ ಜಯಣ್ಣ, ಆಯೋಜನೆ–ಸುಚೇಂದ್ರ ಪ್ರಸಾದ್ ಶಿಷ್ಯ ವೃಂದ, ಸ್ಥಳ–ಸುಚಿತ್ರ ಪುರವಂಕರ ಸಭಾಂಗಣ, ಶಿವರಾಮ ಕಾರಂತ ರಸ್ತೆ, ಬನಶಂಕರಿ 2ನೇ ಹಂತ–ಸಂಜೆ 5.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ‘ಕೃತಜ್ಞತಾ ಸಮಾರಂಭ’: ಸಾನ್ನಿಧ್ಯ–ಹಿಂದುಳಿದ ದಲಿತ ಮಠಾಧೀಶರು, ಅಧ್ಯಕ್ಷತೆ–ನಿರಂಜನಾನಂದಪುರಿ ಸ್ವಾಮೀಜಿ, ಆಯೋಜನೆ–ಹಿಂದುಳಿದ ದಲಿತ ಮಠಾಧೀಶರ ಒಕ್ಕೂಟ, ಸ್ಥಳ–ರಾಮಾನುಜ ಮಠ, ಕೆಂಗೇರಿ ರಸ್ತೆ–ಮಧ್ಯಾಹ್ನ 1.

ಶೃಂಗಾರ ಕಾರ್ತವೀರ್ಯ ಹಾಗೂ ಕೃಷ್ಣಾರ್ಜುನರ ಕಾಳಗ ಪೌರಾಣಿಕ ಯಕ್ಷಗಾನ ಪ್ರದರ್ಶನ: ಆಯೋಜನೆ–ಯಕ್ಷಗಾನ ತಪಸ್ಸಂಘ, ಸ್ಥಳ–ಉದಯಭಾನು ಕಲಾ ಸಂಘ, ಗವಿಪುರ–ಮಧ್ಯಾಹ್ನ 3.

ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ರಾಮಕೃಷ್ಣರವರ 86ನೇ ವರ್ಷದ ಜನ್ಮದಿನಾಚರಣೆ ಮತ್ತು ‘ಇಸ್ಕೂಲಪ್ಪ’ ಅಭಿನಂದನಾ ಗ್ರಂಥ ಬಿಡುಗಡೆ: ಸಾನ್ನಿಧ್ಯ–ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ, ಅಭಿನಂದನಾ ಗ್ರಂಥ ಬಿಡುಗಡೆ–ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಎಂ.ಲಕ್ಷ್ಮಿನಾರಾಯಣ, ಉದ್ಘಾಟನೆ–ಗೋವಿಂದ ಕಾರಜೋಳ, ಮುಖ್ಯ ಅತಿಥಿ–ಎಲ್.ನಾರಾಯಣಸ್ವಾಮಿ, ಬಿ.ವೀರಪ್ಪ, ಕೃಷ್ಣ ಎಸ್.ದೀಕ್ಷಿತ್, ಆರ್.ದೇವದಾಸ್, ಅಭಿನಂದನಾ ಗ್ರಂಥದ ಕುರಿತು–ಜಾಂಬವ ಎಂ. ಗಂಗಾಧರ್, ಆಯೋಜನೆ–ಆದಿಜಾಂಬವ ಜಾಗೃತಿ ಪಾಕ್ಷಿಕ ಪತ್ರಿಕೆ, ಸ್ಥಳ–ರವೀಂದ್ರ ಕಲಾಕ್ಷೇತ್ರ–ಸಂಜೆ 4.

ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಮತ್ತು ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭ: ಭಾಗವಹಿಸುವವರು–ಎಚ್.ಎಸ್.ಸಚ್ಚಿದಾನಂದಮೂರ್ತಿ, ಅಧ್ಯಕ್ಷತೆ–ಗಿರಿಧರ ಕಜೆ, ಆಯೋಜನೆ–ಅಖಿಲ ಹವ್ಯಕ ಮಹಾಸಭಾ, ಸ್ಥಳ–ಹವ್ಯಕ ಭವನ, 11ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಲ್ಲೇಶ್ವರ–ಸಂಜೆ 4.

ಪೇಜಾವರ ಶ್ರೀಗಳ ಗುರುವಂದನಾ ಹಾಗೂ ಆಶೀರ್ವಚನ ಕಾರ್ಯಕ್ರಮ: ಉಪಸ್ಥಿತಿ–ರವೀಂದ್ರ

ಅನುಶ್ರೀ ಭಟ್

ಅನುಶ್ರೀ ಭಟ್ ‘ಭರತನಾಟ್ಯ ರಂಗಪ್ರವೇಶ’: ಉಪಸ್ಥಿತಿ–ಉಷಾ ದಾತರ್, ಆನೂರು ಅನಂತಕೃಷ್ಣ ಶರ್ಮಾ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ–ಪರಮೇಶ್ವರಿ ಮತ್ತು ನಾರಾಯಣ ಭಟ್, ಸ್ಥಳ–ಜೆಎಸ್‌ಎಸ್ ಸಭಾಂಗಣ, 1ನೇ ಮುಖ್ಯರಸ್ತೆ, 8ನೇ ಹಂತ, ಜಯನಗರ–ಸಂಜೆ 6.

ವರ್ಣ, ಆಯೋಜನೆ–ಹಿಂದೂ ಜಾಗೃತಿ ಉತ್ಸವ ಸಮಿತಿ, ಸ್ಥಳ–ಸರ್ಕಾರಿ ಪ್ರೌಢಶಾಲೆ ಮೈದಾನ, ಅಬ್ಬಿಗೆರೆ–ಸಂಜೆ 4.

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಮೈಸೂರು ಸುಮಂತ್ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ, ಪಂಡಿತ್ ವೆಂಕಟೇಶ್ ಕುಮಾರ್, ಸತೀಶ್ ಕೊಲ್ಲಿ ಮತ್ತು ಕೇಶವ ಜೋಶಿ ಅವರಿಂದ ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 4.30ರಿಂದ.

ಆರ್.ಎನ್.ಶೆಟ್ಟಿ ಅವರ ಪ್ರತಿಮೆ ಅನಾವರಣ ಮತ್ತು ಬಿಸು (ಯುಗಾದಿ) ಆಚರಣೆ: ಮುಖ್ಯ ಅತಿಥಿ–ಎನ್.ಸಂತೋಷ್ ಹೆಗ್ಡೆ, ಕೆ.ಪ್ರಕಾಶ್ ಶೆಟ್ಟಿ, ಉಪೇಂದ್ರ ಶೆಟ್ಟಿ, ಆಯೋಜನೆ–ಬೆಂಗಳೂರು ಬಂಟರ ಸಂಘ, ಸ್ಥಳ–ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ–ಸಂಜೆ 4.30.

ಅಕ್ಷತಾ ಪಾಂಡವಪುರ ಅವರ ಕಥಾ ಸಂಕಲನ ‘ಲೀಕ್ ಔಟ್’ ಕೃತಿ ಬಿಡುಗಡೆ ಹಾಗೂ ರಂಗಪ್ರಸ್ತುತಿಗೆ ಚಾಲನೆ: ಪಾಲ್ಗೊಳ್ಳುವವರು–ಎಚ್.ಎಲ್.ಪುಷ್ಪ, ಎಚ್. ಆರ್.ಸುಜಾತಾ, ಚುಕ್ಕಿ ನಂಜುಂಡಸ್ವಾಮಿ, ಕವಿರಾಜ್, ಆಯೋಜನೆ–ಚಾರುಮತಿ ಪ್ರಕಾಶನ, ಸ್ಥಳ–ಸುಭಾಷ್ ಭವನ, 17ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ–ಸಂಜೆ 5.

ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ ಮತ್ತು ಡಾ.ವಿಜಯಾ ಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ– ಅಗ್ರಹಾರ ಕೃಷ್ಣಮೂರ್ತಿ, ಆಯೋಜನೆ–ಬಿ.ಎಂ.ಶ್ರೀ.ಪ್ರತಿಷ್ಠಾನ, ಸ್ಥಳ–ಎಂ.ವಿ.ಸೀ.ಸಭಾಂಗಣ, ಬಿ.ಎಂ.ಶ್ರೀ.ಕಲಾಭವನ, ಎನ್.ಆರ್.ಕಾಲೊನಿ–ಸಂಜೆ 5.

ನಿರ್ಣಯಗಳು ಕೋರ್ಟ್ ಅಂತಿಮ ಆದೇಶಕ್ಕೆ ಬದ್ಧ

ಕಸಾಪ ವಿಶೇಷ ಸಭೆಗೆ ಕೋರ್ಟ್ ಅಂಕುಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಮೇ 1ರಂದು ಕರೆಯಲಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ವಿಶೇಷ ಸಭೆ ಮತ್ತು ಮಹಾಸಭೆಯಲ್ಲಿ ಕೈಗೊಳ್ಳಲಾಗುವ ಯಾವುದೇ ನಿರ್ಣಯಗಳು ಸಿಟಿ ಸಿವಿಲ್ ಕೋರ್ಟ್‌ನಲ್ಲಿ ದಾಖಲಾಗಿರುವ ಅಸಲು ದಾವೆಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ಸಿಟಿ ಸಿವಿಲ್ ಕೋರ್ಟ್‌ನ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

‘ಕಾಗಿನೆಲೆಯ ಶ್ರೀ ಕನಕ ಕಲಾಭವನದಲ್ಲಿ ಸರ್ವ ಸದಸ್ಯರ ವಿಶೇಷ ಸಭೆ ನಡೆಸಲು 2022ರ ಮಾರ್ಚ್ 25ರಂದು ಹೊರಡಿಸಲಾದ ತಿಳಿವಳಿಕೆ ಪತ್ರವನ್ನು ತಡೆಹಿಡಿಯಬೇಕು’ ಎಂದು ಕೋರಿ ಕಾಮಾಕ್ಷಿಪಾಳ್ಯದ ಎನ್.ಹನುಮೇಗೌಡ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ರಜಾ ಕಾಲದ ಸೆಷನ್ಸ್ ನ್ಯಾಯಾಧೀಶೆ ಶೈಲಾ ಅವರು ಶನಿವಾರ ತುರ್ತು ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ರಮೇಶ್ ಬಾಬು, ‘ಕಸಾಪ ಅಧ್ಯಕ್ಷರು ಪರಿಷತ್ತಿನ ನಿಬಂಧನೆಗಳಿಗೆ ವಿರುದ್ಧವಾಗಿ ತಮ್ಮ ಸ್ವಹಿತಾಸಕ್ತಿಗಾಗಿ ಈ ವಿಶೇಷ ಸಭೆಯನ್ನು ಕರೆದಿದ್ದಾರೆ. ಇದಕ್ಕೆ ಕಾರ್ಯಕಾರಿ ಸಮಿತಿಯ ಅನುಮೋದನೆ ಇಲ್ಲ. ವಿಶೇಷ ಸಭೆಯ ಕಾರ್ಯಸೂಚಿಯನ್ನು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಲು ಅವಕಾಶವಿದ್ದಾಗಲೂ ವಿನಾಕಾರಣ ವಿಶೇಷ ಸಭೆ ನಡೆಸುವುದು ಆರ್ಥಿಕ ನಷ್ಟದ ಜೊತೆಗೆ ನಿಯಮ ಬಾಹಿರ. ಹೀಗಾಗಿ, ಉದ್ದೇಶಿತ ಸರ್ವ ಸದಸ್ಯರ ಸಭೆ ನಡೆಸಲು 2022ರ ಮಾರ್ಚ್ 25ರಂದು ಹೊರಡಿಸಲಾದ ತಿಳಿವಳಿಕೆ ಪತ್ರವನ್ನು ಅಸಿಂಧು ಎಂದು ಘೋಷಿಸಬೇಕು’ ಎಂದು ಮನವಿ ಮಾಡಿದರು.

ಪ್ರತಿವಾದಿ ಕಸಾಪ ಅಧ್ಯಕ್ಷರ ಬದಲಿಗೆ ಕಾರ್ಯದರ್ಶಿ ಪರ ವಕೀಲರು ವಕಾಲತ್ತು ಸಲ್ಲಿಸಿದ್ದನ್ನೂ ರಮೇಶ್ ಬಾಬು ಇದೇ ವೇಳೆ ಆಕ್ಷೇಪಿಸಿದರು. ಈ ಆಕ್ಷೇಪಣೆಯನ್ನು ಪರಿಗಣಿಸಿದ ನ್ಯಾಯಾಧೀಶರು ಸೂಕ್ತ ರೀತಿಯಲ್ಲಿ ಪ್ರತಿವಾದಿಯನ್ನು ಪ್ರತಿನಿಧಿಸುವಂತೆ ಆದೇಶಿಸಿದರಲ್ಲದೆ, ‘ಮೇ 1ರಂದು ಕಾಗಿನೆಲೆಯಲ್ಲಿ ನಡೆಯಲಿರುವ ಸರ್ವ–ಸದಸ್ಯರ ವಿಶೇಷ ಸಭೆಯ ನಿರ್ಣಯಗಳು ಮೂಲ ದಾವೆಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ಆದೇಶಿಸಿ ಮಧ್ಯಂತರ ಅರ್ಜಿಯನ್ನು ವಿಲೇವಾರಿ ಮಾಡಿದರು.

ಕಸಾಪ ಅಧ್ಯಕ್ಷರಿಗೆ ಹೊಸ ಇನೋವಾ ಕಾರು!

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಹೊಸ ಇನೋವಾ ಕಾರು ಖರೀದಿಸಲು ಹಣಕಾಸು ಸಲಹಾ ಸಮಿತಿ ಸಭೆ ಒಪ್ಪಿಗೆ ನೀಡಿದೆ.

ಏಪ್ರಿಲ್ 18ರಂದು ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

'ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ವಿಸ್ತಾರಗೊಳಿಸಲು ವಿವಿಧ ಜಿಲ್ಲೆಗಳಿಗೆ ಪ್ರವಾಸ ತೆರಳಬೇಕಾಗುತ್ತದೆ. ಅಧ್ಯಕ್ಷರು ಈಗ ಉಪಯೋಗಿಸುವ ಇನೋವಾ ಕಾರು ಆರು ವರ್ಷಗಳ ಹಳೆಯದಾಗಿದ್ದು, ಪದೇ ಪದೇ ದುರಸ್ತಿಗೆ ಬರುತ್ತಿದೆ. ಹೀಗಾಗಿ, ಹೊಸ ಇನೋವಾ ಕಾರು ಖರೀದಿಸುವುದು ಅನಿವಾರ್ಯ’ ಎಂದು ಸಭೆಯ ನಡಾವಳಿಯಲ್ಲಿ ಉಲ್ಲೇಖಿಸಲಾಗಿದೆ. ಪರಿಷತ್ತಿನ ಅಧ್ಯಕ್ಷರ ಪ್ರವಾಸದ ಅವಧಿಯ ದಿನ ಭತ್ಯೆಯನ್ನು ₹2ಸಾವಿರದಿಂದ ₹3ಸಾವಿರಕ್ಕೆ ಹೆಚ್ಚಿಸಲು ಈ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ. ಕಾರ್ಯಕಾರಿ ಸಮಿತಿ ಸದಸ್ಯರ ಸಭಾಭತ್ಯೆಯನ್ನು ಸಹ ₹2 ಸಾವಿರದಿಂದ ₹3ಸಾವಿರಕ್ಕೆ ಹೆಚ್ಚಿಸಲು ಜನವರಿಯಲ್ಲಿ ಒಪ್ಪಿಗೆ ನೀಡಲಾಗಿತ್ತು.

ಭಾನುವಾರ, ಮೇ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 120 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾರ್ಮಿಕರ ದಿನದ ಶುಭಾಶಯಗಳು

ಜಪಾನ್‌ನ ಅಕಾನೆ ಎದುರು ಸೋಲು
ಏಷ್ಯಾ ಬ್ಯಾಡ್ಮಿಂಟನ್: ಸಿಂಧುಗೆ ಕಂಚಿನ ಪದಕ 9

ಭಾನುವಾರದ ಪುರವಣಿ
ಬೆವರಿಳಿಯುವ ಬೇಸಿಗೆಯಲ್ಲಿ ತಂಪೆನಿಸುವ ಕೆಲವು ಪ್ರದೇಶಗಳತ್ತ ಇಣುಕುನೋಟ

ಸರ್ಕಾರಿ ವಿಶ್ವವಿದ್ಯಾಲಯಗಳ 'ಆಟ'ಕ್ಕೆ ಸಿಗದ ಬೆಳವಣಿಗೆ ಭಾಗ್ಯ

ಹೆಚ್ಚಿದ ವಿ.ವಿ; ಸೊರಗಿದ ಕ್ರೀಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ನಾಲ್ಕೂವರೆ ದಶಕಗಳ ಹಿಂದಿನ ಮಾತು. ಅಂಕೋಲಾದ ಉದಯ ಕೆ. ಪ್ರಭು ಏಷ್ಯನ್ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಪದಕ ಸಾಧನೆ ಮಾಡಿದರು. ಅಷ್ಟೇ ಅಲ್ಲ. 400 ಮೀಟರ್ಸ್ ಓಟದಲ್ಲಿ ದಾಖಲೆಗಳನ್ನು ಸ್ಥಾಪಿಸಿದ ಕೀರ್ತಿಯನ್ನೂ ತಮ್ಮದಾಗಿಸಿಕೊಂಡರು.

ಅವರು ಈ ಮಟ್ಟಕ್ಕೆ ಬೆಳೆಯಲು ಚಿಮ್ಮುಹಲಗೆಯಾಗಿದ್ದು ಕರ್ನಾಟಕ ವಿಶ್ವವಿದ್ಯಾಲಯದ ಕ್ರೀಡಾಕೂಟಗಳು. ಜಿ.ಸಿ. ಕಾಲೇಜಿನ ಬಿ.ಎಸ್ಸಿ ವಿದ್ಯಾರ್ಥಿಯಾಗಿದ್ದಾಗಲೇ ಅಂತರ ವಿಶ್ವವಿದ್ಯಾಲಯ ಕೂಟದಲ್ಲಿ ಬೆಳ್ಳಿ ಪದಕ ಗೆದ್ದು ಬಂದಿದ್ದರು. ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಯುವ ಆತ್ಮವಿಶ್ವಾಸ ವೃದ್ಧಿಯಾಗಲು ಅಂದಿನ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿದ್ದ ಅಪಾರ ಪೈಪೋಟಿಯೇ ಕಾರಣವಾಗಿತ್ತು.

ಹತ್ತು ವರ್ಷಗಳ ಹಿಂದೆ ಲಂಡನ್ ಒಲಿಂಪಿಕ್ಸ್‌ನ ಮಹಿಳೆಯರ ಹೈಜಂಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಮಂಗಳೂರಿನ ಹುಡುಗಿ ಸಹನಾ ಕುಮಾರಿ ಅವರ ಪ್ರತಿಭೆ ಹರಳುಗಟ್ಟಿದ್ದು ಕೂಡ ಕಾಲೇಜು ದಿನಗಳಲ್ಲಿಯೇ. ಮಂಗಳೂರಿನ ಗೋಕರ್ಣನಾಥೇಶ್ವರ ಕಾಲೇಜಿನಲ್ಲಿ ಮಾಡಿದ ಸಾಧನೆಗಳು ಅವರನ್ನು ಅಂತರ ವಿಶ್ವವಿದ್ಯಾಲಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ್ದನ್ನು ಅವರೇ ಹಲವು ಬಾರಿ ನೆನಪಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳ ಕ್ರೀಡೆಯ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಇಂತಹ ಹಲವಾರು ಕ್ರೀಡಾಪಟುಗಳ ಸಾಧನೆ ಸಿನಿಮಾ ರೀಲಿನಂತೆ ಸಾಗಿಹೋಗುತ್ತದೆ. ಬೆಂಗಳೂರು, ಮಂಗಳೂರು, ಮೈಸೂರು ವಿಶ್ವವಿದ್ಯಾಲಯಗಳ ಅಂಗಳದಿಂದ ಪ್ರವರ್ಧಮಾನಕ್ಕೆ ಬಂದ ಖ್ಯಾತನಾಮರು ಹಲವರು. ಆದರೆ, ಕಳೆದ ಎರಡು ದಶಕಗಳಲ್ಲಿ ಈ ಪರಿಸ್ಥಿತಿ ಇಲ್ಲ. ವಿಶ್ವವಿದ್ಯಾಲಯಗಳು ಕಾಲೇಜುಗಳ ಸಂಖ್ಯೆ ಮತ್ತು ವಿಷಯವಾರು ವಿಭಜನೆಯಾದ ಮೇಲೆ ಕ್ರೀಡೆ ಕಳೆಗುಂದಿತು. ವಿವಿಗಳ ಸಂಖ್ಯೆ ಹೆಚ್ಚಿದರೂ ಕ್ರೀಡಾಪಟುಗಳ ಸಂಖ್ಯೆ ವೃದ್ಧಿಸಲಿಲ್ಲ. ಹೆಚ್ಚು ವಿವಿಗಳು ಸ್ಥಾಪನೆಯಾಗುವುದರಿಂದ ಕ್ರೀಡೆಗೆ ಉತ್ತೇಜನ ಹೆಚ್ಚಲಿದೆ ಎಂಬ ನಿರೀಕ್ಷೆ ಬಹುತೇಕ ಹುಸಿಯಾಗಿದೆ.

ಒಳನೋಟ
ವಿ.ವಿ ಕ್ರೀಡೆಗೆ ಬೇಕಿದೆ ಬಲ
ಪ್ರತಿಕ್ರಿಯಿಸಿ: 9606038256
feedback@prajavani.co.in

ಪಠ್ಯ ಮುನ್ನೆಲೆಗೆ; ಆಟ ಹಿನ್ನೆಲೆಗೆ

'ನಾವು ಕಾಲೇಜಿನಲ್ಲಿದ್ದಾಗ ಕ್ರೀಡೆಗೆ ಸುವರ್ಣ ಕಾಲ ಅದು. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಯುವ ವಿಶ್ವಾಸವನ್ನು ಹೆಚ್ಚಿಸಿದ್ದು ಕಾಲೇಜಿನ ಕ್ರೀಡಾಂಗಣಗಳೇ. ಪ್ರತಿಯೊಬ್ಬ ಕ್ರೀಡಾಪಟುವಿಗೆ 16 ರಿಂದ 24 ವರ್ಷಗಳವರೆಗಿನ ವಯಸ್ಸು ಬಹಳ ಮಹತ್ವದ್ದು. ಆದ್ದರಿಂದ ಪಿಯುಸಿ, ಪದವಿ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸಾಧನೆ ಮಾಡಲು ಸಾಧ್ಯ. ಪದವಿಪೂರ್ವ ವಿಭಾಗದಲ್ಲಿ ಕ್ರೀಡೆಗೆ ಉತ್ತೇಜನವಿಲ್ಲ. ವೃತ್ತಿಪರ ಕೋರ್ಸ್‌ಗಳಿಗೆ ಸೀಟು ಗಿಟ್ಟಿಸುವ ಪೈಪೋಟಿಯಲ್ಲಿ ಗೆಲ್ಲುವುದೇ ಮುಖ್ಯವಾಗುತ್ತದೆ. ಕ್ರೀಡಾ ಕೋಟಾದಲ್ಲಿ ಪದವಿಯಲ್ಲಿ ಸೀಟು ಪಡೆದವರಲ್ಲಿ ಶೇ 80ರಷ್ಟು ಮಕ್ಕಳು ಕ್ರೀಡೆಯನ್ನು ಮುಂದುವರಿಸುವುದೇ ಇಲ್ಲ. ಆದ್ದರಿಂದ ವಿಶ್ವವಿದ್ಯಾಲಯದ ಕ್ರೀಡೆ ಸೊರಗಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ರಾಜೀವಗಾಂಧಿ ವೈದ್ಯಕೀಯ ವಿವಿ ಸೇರಿದಂತೆ ಹಲವು ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ದೊಡ್ಡ ಮೊತ್ತದ ಬಹುಮಾನ, ಪರೀಕ್ಷೆಯ ದಿನಾಂಕಗಳ ಮರುಹೊಂದಾಣಿಕೆ ಮತ್ತು ಗ್ರೇಸ್ ಮಾರ್ಕ್ಸ್ ಕೂಡ ನೀಡಲಾಗುತ್ತಿದೆ' ಎಂದು ಉದಯ ಪ್ರಭು ಅವರು ವಿವಿ ಕ್ರೀಡೆಯಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸುತ್ತಾರೆ.

ಆದರೆ, ಪದವಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆಯನ್ನು ಬೆಳೆಸುವ ಕುರಿತು ಆಡಳಿತಗಾರರಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಕೆಲವು ವರ್ಷಗಳ ಹಿಂದೆ ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಧಾರವಾಡದ ವಸತಿ ನಿಲಯ ಮತ್ತು ಕ್ರೀಡಾಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಜಮೀನು ನೀಡುವಂತೆ ವಿಶ್ವವಿದ್ಯಾಲಯವನ್ನು ಕೋರಿತ್ತು. ಸಂಸದರು, ಕೇಂದ್ರ ಸಚಿವರೂ ಶಿಫಾರಸು ಮಾಡಿದ್ದರು. ಆದರೆ, ವಿಶ್ವವಿದ್ಯಾಲಯ ಮನಸ್ಸು ಮಾಡಲಿಲ್ಲ. ಒಂದೊಮ್ಮೆ ಜಮೀನು ಕೊಟ್ಟಿದ್ದರೆ ವಿಶ್ವವಿದ್ಯಾಲಯದ ಕ್ರೀಡಾಪಟುಗಳಿಗೂ ಸಾಯ್ ಸೌಲಭ್ಯಗಳು ಸಿಗುತ್ತಿದ್ದವು ಎಂದು ಇಲ್ಲಿಯ ಹಲವು ಹಿರಿಯ ಕ್ರೀಡಾಪಟುಗಳು ಬೇಸರ ವ್ಯಕ್ತಪಡಿಸುತ್ತಾರೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಬೆಂಗಳೂರಿನಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ ಮಹಿಳೆಯರ 100 ಮೀ. ಓಟದಲ್ಲಿ ಚಿನ್ನ ಗೆದ್ದ ದ್ಯುತಿ ಚಾಂದ್(ಮಧ್ಯ). ಅವಂತಿಕಾ(ಬಲ) ಮತ್ತು ಪ್ರೀತಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು
– ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ವಿದೇಶಗಳಲ್ಲಿ ವಿವಿ ಕ್ರೀಡೆಗಳಿಗೆ ಆದ್ಯತೆ

ವಿದೇಶಗಳಲ್ಲಿ ಕ್ರೀಡೆಗಳ ಬೆಳವಣಿಗೆಗೆ ವಿಶ್ವವಿದ್ಯಾಲಯಗಳೇ ಮೂಲಸೆಲೆ. ವಿದ್ಯಾರ್ಥಿಗಳ ಆಸಕ್ತಿ ಮತ್ತು ಸಾಮರ್ಥ್ಯಕ್ಕನುಗುಣವಾಗಿ ಕ್ರೀಡೆಗಳಲ್ಲಿ ತೊಡಗಿಕೊಳ್ಳಲು ಅಲ್ಲಿ ಅವಕಾಶ ನೀಡಲಾಗುತ್ತದೆ. ಕ್ರೀಡೆ ಮತ್ತು ಓದು ಸಮಾನ ಆದ್ಯತೆಯೊಂದಿಗೆ ಸಾಗುತ್ತವೆ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಯುರೋಪ್ ದೇಶಗಳ ಅಥ್ಲೀಟ್‌ಗಳನ್ನು ನೋಡಿ. ಅವರೆಲ್ಲರೂ ವಿವಿಗಳ ವಿದ್ಯಾರ್ಥಿಗಳೇ.

ಉದಯ ಕೆ ಪ್ರಭು, ಅಂತರರಾಷ್ಟ್ರೀಯ ಅಥ್ಲೀಟ್, ಕೋಚ್

ಕ್ರೀಡಾ ಬೋಧಕರ ನೇಮಕಕ್ಕೆ ಕ್ರಮ

ಉನ್ನತ ಶಿಕ್ಷಣದಲ್ಲಿಯೂ ಕ್ರೀಡೆಗೆ ಆದ್ಯತೆ ನೀಡುವುದು ನಮ್ಮ ಗುರಿ. ನೂತನ ಶಿಕ್ಷಣ ನೀತಿಯಲ್ಲಿಯೂ ಒತ್ತು ನೀಡಲಾಗಿದೆ. ಯಾವುದೇ ವಿಷಯದಲ್ಲಿ ಪದವಿ ಮಾಡುವವರು ಕ್ರೀಡೆ, ಯೋಗ ಮತ್ತು ಆರೋಗ್ಯದ ವಿಷಯ ಓದಬೇಕು. ಅದಕ್ಕೆ 25 ಅಂಕಗಳನ್ನು ನೀಡಲಾಗುತ್ತದೆ. ಅಲ್ಲದೇ ಕ್ರೀಡೆಯನ್ನು ತಮ್ಮ ಮುಖ್ಯ ಪಠ್ಯದ ಜೊತೆಗೆ ಒಂದು ವಿಷಯವನ್ನಾಗಿ ಓದಲು ಆಯ್ಕೆ ಮಾಡಿಕೊಳ್ಳಬಹುದು. ಸದ್ಯ ವಿಶ್ವವಿದ್ಯಾಲಯ ಮತ್ತು ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 136 ಕ್ರೀಡಾ ಬೋಧಕರ ಹುದ್ದೆಗಳ ನೇಮಕಕ್ಕೆ ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಇದಲ್ಲದೇ ಬೇರೆ ವಿಷಯಗಳಲ್ಲಿರುವಂತೆ ಕ್ರೀಡೆಗೂ ಅತಿಥಿ ದೈಹಿಕ ಶಿಕ್ಷಕರನ್ನು ನೇಮಕ ಮಾಡುವ ಉದ್ದೇಶವೂ ಇದೆ. ಉನ್ನತ ಶಿಕ್ಷಣದಲ್ಲಿ ಕ್ರೀಡಾ ನೀತಿಯನ್ನು ಜಾರಿಗೊಳಿಸುವ ಚಿಂತನೆ ಇದೆ. ಹಂತ ಹಂತವಾಗಿ ಕ್ರೀಡಾಭಿವೃದ್ಧಿಯನ್ನು ಮಾಡಲಾಗುವುದು.

ಡಾ. ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯ ಉನ್ನತ ಶಿಕ್ಷಣ ಸಚಿವ

ರಾಜ್ಯದ ವಿವಿ, ಕಾಲೇಜುಗಳ ವಿವರ

23	ಸರ್ಕಾರಿ ಸ್ವಾಮ್ಯದ ವಿವಿ
20	ಖಾಸಗಿ ವಿವಿಗಳು
11	ಡೀಮ್ಡ್ ವಿವಿಗಳು
430	ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು
321	ಖಾಸಗಿ ಅನುದಾನಿತ ಕಾಲೇಜುಗಳು

ಆಧಾರ: ರಾಜ್ಯ ಉನ್ನತ ಶಿಕ್ಷಣ ಇಲಾಖೆ ವೆಬ್‌ಸೈಟ್

ನ್ಯಾಯಾಲಯದಲ್ಲಿ ಸ್ಥಳೀಯ ಭಾಷೆ ಬಳಕೆ

ಪ್ರಧಾನಿ ನರೇಂದ್ರ ಮೋದಿ, ಸಿಜೆಐ ರಮಣ ಪ್ರತಿಪಾದನೆ

ನವದೆಹಲಿ (ಪಿಟಿಐ): ಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಕೆಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಅವರು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. 'ಹಿಂದಿ ಹೇರಿಕೆ' ವಿಚಾರವಾಗಿ ದೇಶದಲ್ಲಿ ತೀವ್ರ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿಯೇ ಈ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಕೆಯಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರಿಗೆ ನಂಬಿಕೆ ಹೆಚ್ಚುತ್ತದೆ. ಜೊತೆಗೆ ವ್ಯವಸ್ಥೆಯ ಜೊತೆಗೆ ಸಂಪರ್ಕ ಸಾಧಿಸಲು ಅವರಿಗೆ ಸಾಧ್ಯವಾಗುತ್ತದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಸ್ಥಳೀಯ ಭಾಷೆಗಳ ಬಳಕೆ ಆರಂಭಿಸಲು ಇದು ಸಕಾಲ ಎಂದು ಸಿಜೆಐ ರಮಣ ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಜಂಟಿ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ಶನಿವಾರ ಮಾತನಾಡಿದರು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎರಡು ರೀತಿಯ ಭಾಷಾ ಬಳಕೆ ಇದೆ. ಕಾನೂನು ಪರಿಭಾಷೆಗಳುಳ್ಳ ಭಾಷೆಯದ್ದು ಒಂದು ಮಾದರಿ. ಮತ್ತೊಂದು ಮಾದರಿಯು ಸಾಮಾನ್ಯ ಜನರು ಅರ್ಥ ಮಾಡಿಕೊಳ್ಳುವ ಸರಳ ಭಾಷೆಯಾಗಿದೆ. ಹಲವು ದೇಶಗಳಲ್ಲಿ ನಡೆಯುತ್ತಿರುವ ನ್ಯಾಯದಾನ ವಿಧಾನಗಳನ್ನು ಗಮನಿಸಿದರೆ, ಎರಡೂ ರೀತಿಯ ಮಾದರಿಗಳು ಕಾನೂನುಪ್ರಕಾರ ಸ್ವೀಕಾರಾರ್ಹವಾಗಿವೆ ಎಂದು ಪ್ರಧಾನಿ ವಿವರಿಸಿದರು.

ಭಾಷಾ ಪ್ರಾವೀಣ್ಯವೇ ಮುಖ್ಯವಲ್ಲ: ಪ್ರಧಾನಿ ಭಾಷಣಕ್ಕೂ ಮುನ್ನ ಮಾತನಾಡಿದ ಸಿಜೆಐ ರಮಣ ಅವರು ಸ್ಥಳೀಯ ಭಾಷೆಗಳ ಪರವಾಗಿ ದನಿ ಎತ್ತಿದರು. ಸಾಂವಿಧಾನಿಕ ನ್ಯಾಯಾಲಯಗಳ ಮುಂದೆ ಮಂಡಿಸುವ ವಾದವು ಬುದ್ಧಿವಂತಿಕೆ ಮತ್ತು ಕಾನೂನಿನ ತಿಳಿವಳಿಕೆಯ ಆಧಾರದಲ್ಲಿ ಇರಬೇಕು. ಭಾಷಾ ಪ್ರಾವೀಣ್ಯವಷ್ಟೇ ಇಲ್ಲಿ ಮುಖ್ಯವಲ್ಲ ಎಂದು ರಮಣ ಹೇಳಿದ್ದಾರೆ.

'ಪ್ರಜಾಪ್ರಭುತ್ವದ ಇತರ ಸಂಸ್ಥೆಗಳ ರೀತಿಯಲ್ಲೇ ನ್ಯಾಯಾಂಗ ಸಹ ಸಮಾಜ ಮತ್ತು ಭೌಗೋಳಿಕ ವೈವಿಧ್ಯವನ್ನು ಪ್ರತಿಬಿಂಬಿಸಬೇಕು. ಹೈಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಸಬೇಕು ಎಂಬ ಬಗ್ಗೆ ನನಗೆ ಸಾಕಷ್ಟು ಅಹವಾಲುಗಳು ಬಂದಿವೆ. ಈ ಬೇಡಿಕೆ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಿದೆ' ಎಂದು ರಮಣ ಹೇಳಿದರು.

ಮಧ್ಯಸ್ಥಿಕೆ ವಹಿಸಿದ್ದ 'ಪಾಟೀಲ' ಸಹೋದರರು

ಪಿಎಸ್‌ಐ: ದೊಡ್ಡವರಿಗೂ ಪಾಲು!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 545 ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ಲಕ್ಷಾಂತರ ರೂಪಾಯಿ ಹಣದಲ್ಲಿ ದೊಡ್ಡವರಿಗೂ ಪಾಲು ಸಂದಾಯ ಆಗಿದೆ ಎಂದು ಸಂಶಯಪಟ್ಟಿರುವ ಸಿಐಡಿ ಅಧಿಕಾರಿಗಳ ತಂಡ, ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳಿಗಾಗಿ ಶೋಧ ನಡೆಸುತ್ತಿದೆ.

'ಪ್ರಕರಣದ ಪ್ರಮುಖ ಆರೋಪಿಗಳು ಎನ್ನಲಾದ ರುದ್ರಗೌಡ ಡಿ. ಪಾಟೀಲ ಹಾಗೂ ಮಹಾಂತೇಶ ಪಾಟೀಲ ಸಹೋದರರನ್ನು ಸಿಐಡಿ ಪೊಲೀಸರು ಈಗಾಗಲೇ ಬಂಧಿಸಿದ್ದು, ಅವರಿಬ್ಬರು ಅಕ್ರಮ ಜಾಲದ ಬಗ್ಗೆ ಮಹತ್ವದ ಮಾಹಿತಿಗಳನ್ನು ಬಾಯ್ಬಿಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಆರೋಪಿಗಳು ನೀಡಿದ್ದ ಮಾಹಿತಿಯನ್ನೇ ಸಿಐಡಿ ಅಧಿಕಾರಿಗಳು, ಗೃಹ ಸಚಿವ ಹಾಗೂ ಮುಖ್ಯಮಂತ್ರಿಗೆ ತಿಳಿಸಿದ್ದಾರೆ.

2ನೇ ಪುಟ ನೋಡಿ

'ಹಲವು ವರ್ಷಗಳಿಂದ ಕೃತ್ಯ'

ಪಾಟೀಲ ಸಹೋದರರು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಸುವ ಕೃತ್ಯದಲ್ಲಿ ಹಲವು ವರ್ಷಗಳಿಂದ ತೊಡಗಿದ್ದರು. 'ದೊಡ್ಡವರು' ಹಾಗೂ 'ಹಿರಿಯ ಸರ್'ಗಳನ್ನು ಯಾರ ಮೂಲಕ ಪರಿಚಯ ಮಾಡಿಕೊಳ್ಳಬೇಕು ? ಅವರಿಗೆ ಹಣ ಸಂದಾಯ ಹೇಗೆ ಮಾಡಬೇಕು ? ಎಂಬುದನ್ನು ಪಾಟೀಲ ಸಹೋದರರು ಕರಗತ ಮಾಡಿಕೊಂಡಿರುವುದಾಗಿ ಸಿಐಡಿ ಮೂಲಗಳು ಹೇಳಿವೆ.

ಪಿಎಸ್‌ಐ ಅಕ್ರಮ ನೇಮಕ ಪ್ರಕರಣ ಭೇದಿಸುತ್ತಿದ್ದಂತೆ, ಇತರೆ ಪರೀಕ್ಷೆಗಳ ಸುಳಿವು ಸಹ ಲಭ್ಯವಾಗುತ್ತಿವೆ. ಸದ್ಯ ಪಿಎಸ್‌ಐ ಅಕ್ರಮಕ್ಕಷ್ಟೇ ಸೀಮಿತವಾಗಿ ಸಿಐಡಿ ತನಿಖೆ ಮುಂದುವರಿಸಿರುವುದಾಗಿ ಮೂಲಗಳು ತಿಳಿಸಿವೆ.

ವರ್ಗಾವಣೆ: ಸಚಿವರಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎ, ಬಿ, ಸಿ ಮತ್ತು ಡಿ ದರ್ಜೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಾವಣೆಗೆ ಸರ್ಕಾರ ಚಾಲನೆ ನೀಡಿದೆ.

ವಿಧಾನಸಭೆ ಚುನಾವಣೆಗೆ ಒಂದು ವರ್ಷವಷ್ಟೇ ಬಾಕಿ ಇದ್ದು, ಈ ಸರ್ಕಾರದ ಅವಧಿಯಲ್ಲಿ ನಡೆಯುತ್ತಿರುವ ಕೊನೆಯ ಸಾರ್ವತ್ರಿಕ ವರ್ಗಾವಣೆಯಾಗಿದೆ. ವರ್ಗಾವಣೆಯ ಅಧಿಕಾರವನ್ನು ಇಲಾಖೆಯ ಉಸ್ತುವಾರಿ ಹೊತ್ತ ಸಚಿವರಿಗೆ ನೀಡಲಾಗಿದೆ.

ಮೇ 1ರಿಂದ (ಭಾನುವಾರ) ಜೂನ್ 15ರವರೆಗೂ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ. ಆಯಾ ಇಲಾಖೆಗಳ ಒಂದು ಜ್ಯೇಷ್ಠತಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಒಟ್ಟು ಸಂಖ್ಯೆಯಲ್ಲಿ ಶೇ 6ರಷ್ಟು ಮಂದಿಯನ್ನು ಮಾತ್ರ ವರ್ಗಾವಣೆ ಮಾಡಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

2ನೇ ಪುಟ ನೋಡಿ

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸೋಮವಾರವೇ ರಂಜಾನ್ ರಜೆ

ಬೆಂಗಳೂರು: ಖುತುಬ್-ಎ- ರಂಜಾನ್ ಹಬ್ಬದ ಪ್ರಯುಕ್ತ ಸೋಮವಾರ (ಮೇ 2) ರಾಜ್ಯದಾದ್ಯಂತ ಸಾರ್ವತ್ರಿಕ ರಜೆ ಘೋಷಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರ ಹಿಂದೆ ಪ್ರಕಟಿಸಿದ್ದ ರಜಾ ದಿನಗಳ ಪಟ್ಟಿಯಲ್ಲಿ ಮೇ3 ರಂದು ರಂಜಾನ್ ಹಾಗೂ ಬಸವ ಜಯಂತಿಗೆ ರಜೆ ಘೋಷಿಸಲಾಗಿತ್ತು. ಆದರೆ, 'ಮೂನ್ ಕಮಿಟಿ' ನಿರ್ಧರಿಸಿರುವುದರಿಂದ ಮೇ 2ರಂದು ರಜೆ ಘೋಷಿಸಲಾಗಿದೆ ಎಂದು ಸರ್ಕಾರದ ಆದೇಶ ಹೇಳಿದೆ. ಮಂಗಳವಾರ ಬಸವ ಜಯಂತಿ ರಜೆ ಇದೆ.

'ಹಬ್ಬದ ದಿನ ಖಚಿತವಾಗಿಲ್ಲ': ಈ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಶಾಫಿ ಸ ಅದಿ,'ಶನಿವಾರ 'ಮೂನ್ ಕಮಿಟಿ' ಸಭೆ ಸೇರಲು ಅವಕಾಶವಿಲ್ಲ. ಭಾನುವಾರ ಮೂನ್ ಕಮಿಟಿ ಸಭೆ ನಡೆಯಲಿದೆ. ಭಾನುವಾರ ಚಂದ್ರದರ್ಶನವಾದರೆ ಸೋಮವಾರ ಈದ್ ಆಚರಣೆ ನಡೆಯಲಿದೆ. ಭಾನುವಾರ ಚಂದ್ರದರ್ಶನ ಆಗದಿದ್ದರೆ ಮಂಗಳವಾರ ಈದ್ ಆಚರಣೆ ನಡೆಯಲಿದೆ' ಎಂದು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜ್ಞಾನಪೀಠ ಪುರಸ್ಕೃತ ಸಾಹಿತಿಗಳ ಉಬ್ಬು ಚಿತ್ರಗಳು ● ಸಾಂಸ್ಕೃತಿಕ–ಸಾಹಿತ್ಯಿಕ ಕಾರ್ಯಕ್ರಮಗಳಿಗಾಗಿ ತೆರೆದ ಸಭಾಂಗಣ

ಐತಿಹಾಸಿಕ ಕುರುಹು ಈ 'ಕಹಳೆ ಬಂಡೆ'



ದಳಪತಿ ಕಹಳೆ ಊದುತ್ತಿರುವ ಕಂಚಿನ ಪ್ರತಿಮೆ

● ಶಿವರಾಜ ರಾಮನಾಳ

ಬೆಂಗಳೂರು ನಮ್ಮ ಹೆಮ್ಮೆ...

ಬೆಂಗಳೂರು: ದಕ್ಷಿಣದ ಬೆಂಗಳೂರಿನ ಎತ್ತರ ಪ್ರದೇಶದಲ್ಲಿರುವ ಬಸವನಗುಡಿ ಹಲವು ಐತಿಹ್ಯಗಳ ತಾಣ. ನಗರದ ನಿರ್ಮಾತೃ ಕೆಂಪೇಗೌಡರು ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ಕಾವಲು ಗೋಪುರಗಳಲ್ಲಿ ಒಂದಾದ 'ಕಹಳೆ ಬಂಡೆ' ಇಲ್ಲಿನ ಪ್ರಮುಖ ಆಕರ್ಷಣೆ. ಇದನ್ನು 'ಬ್ಯೂಗಲ್ ರಾಕ್' ಎಂದೂ ಕರೆಯುತ್ತಾರೆ.

ದೊಡ್ಡ ಬಸವಣ್ಣನ ದೇವಸ್ಥಾನದ (ಬುಲ್ ಟೆಂಪಲ್) ಸನಿಹವೇ ಉಬ್ಬು, ತಗ್ಗು ಬಂಡೆಗಳು ಮನ ಸೆಳೆಯುತ್ತವೆ. ಈ ದಾರಿಯಲ್ಲಿ ಸಾಗಿದರೆ ಮನ ಮುದಗೊಳಿಸುವ ವೈವಿಧ್ಯಮಯ ಮರಗಳ ಹಸಿರು, ಬಾವಲಿ– ಹಕ್ಕಿಗಳ ಚಿಲಿಪಿಲಿಯೂ ಇದೆ. ಇದರ ನಡುವೆ ಕಲ್ಲಿನ ಕಾವಲು ಗೋಪುರ ಆಕರ್ಷಿಸುತ್ತದೆ. ಕಲ್ಲಿನ ಮೆಟ್ಟಿಲುಗಳ ಮೂಲಕ ಗೋಪುರ ಏರಿ ಕೊಂಚ ವಿರಮಿಸಬಹುದು. ಇಲ್ಲಿಂದ ಈ ಪ್ರದೇಶದ ಪಕ್ಷಿನೋಟವನ್ನು ಕಣ್ತುಂಬಿಕೊಳ್ಳಬಹುದು.

16 ಎಕರೆ ಪ್ರದೇಶದಲ್ಲಿ ಈ ಪ್ರದೇಶ ವಿಸ್ತರಿಸಿದೆ. ಆಲ, ಅರಳಿ, ಬಾದಾಮಿ, ಮಹಾಗನಿ, ಮಾವು, ಅತ್ತಿ ಮೊದಲಾದ 200 ಕ್ಕೂ ಹೆಚ್ಚು ಪ್ರಭೇದಗಳ ಮರಗಳು ಇಲ್ಲಿವೆ. ಇಲ್ಲಿಯ ಬಂಡೆಗಳು ಭೂಮಿಯ ಅತ್ಯಂತ ಹಳೆಯ ಸಂರಚನೆಗಳಲ್ಲಿ ಒಂದು ಎನ್ನಲಾಗಿದೆ. ಭೂಗೋಳತಜ್ಞರಿಗೆ ಇದು ಅಧ್ಯಯನಕ್ಕೆ ಹೇಳಿ ಮಾಡಿಸಿದ ತಾಣ.

ಕಹಳೆ ಬಂಡೆಯ ನೋಟ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಮೂರು ದಶಕಗಳ ಹಿಂದೆ ಇಲ್ಲಿ ಅಭಿವೃದ್ಧಿಪಡಿಸಿದ ಉದ್ಯಾನದ ನಿರ್ವಹಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹೊತ್ತಿದೆ. ತೋಟಗಾರಿಕೆ ಇಲಾಖೆ ವೈವಿಧ್ಯಮಯ ಸಸ್ಯಗಳನ್ನು ಬೆಳೆಸುವ ಮೂಲಕ ಈ ಪ್ರದೇಶದ ಮೆರಗು ಹೆಚ್ಚಿಸಿದೆ. ದಿವಂಗತ ಟಿ.ಆರ್.ಶಾಮಣ್ಣ ಗೌರವಾರ್ಥ ಉದ್ಯಾನಕ್ಕೆ ಅವರ ಹೆಸರಿಡಲಾಗಿದೆ.

ಗೋಪುರ ನಿರ್ಮಿಸುವ ವೇಳೆ ಕಟ್ಟಿದ ತೊಟ್ಟಿ ಈಗಲೂ ಇದೆ. ಸೈನಿಕರಿಗೆ ಇಲ್ಲಿಂದಲೇ ನೀರು ಪೂರೈಕೆಯಾಗುತ್ತಿತ್ತು ಎನ್ನುತ್ತಾರೆ ಸ್ಥಳೀಯರು.

ವೃತ್ತಾಕಾರದ ತೊಟ್ಟಿಯ ಗೋಡೆಯ ಮೇಲೆ ಜ್ಞಾನಪೀಠ ಪುರಸ್ಕೃತ ಸಾಹಿತಿಗಳು, ವಿಶ್ವೇಶ್ವರಯ್ಯ ಮೊದಲಾದ ಗಣ್ಯರ ಉಬ್ಬು ಚಿತ್ರಗಳಿವೆ. ಅವರ ಬಗ್ಗೆ ಮಾಹಿತಿಯನ್ನು ಕೆತ್ತಲಾಗಿದೆ.

'ಈಗ ಇಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಸುಂದರ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿದ್ದು, ವಾಯುವಿಹಾರಿಗಳ ನೆಚ್ಚಿನ ತಾಣವಾಗಿದೆ. ನಿತ್ಯ 750ರಿಂದ 1,000 ಜನ ಕಹಳೆ ಬಂಡೆಗೆ ಭೇಟಿ ನೀಡುತ್ತಾರೆ. ಇಲ್ಲಿನ ತೆರೆದ ಸಭಾಂಗಣದಲ್ಲಿ ನಾನಾ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳು ನಡೆಯುತ್ತವೆ. 300 ಜನರು ಕುಳಿತು ನೋಡಬಹುದು. ಉದ್ಯಾನದಲ್ಲಿ ಸ್ವಚ್ಛತೆ ಕಾಪಾಡಲಾಗಿದೆ' ಎನ್ನುತ್ತಾರೆ ಸ್ಥಳೀಯ ನಿವಾಸಿ ಅನಿಲ್.

ಕಹಳೆ ಬಂಡೆಗೆ ಭೇಟಿ ನೀಡುತ್ತಿದ್ದ ಡಿ.ವಿ. ಜಿ., ಮೈಸೂರು ಅನಂತಸ್ವಾಮಿ, ಪಿ.ಕಾಳಿಂಗರಾಯರ ಪ್ರತಿಮೆಗಳನ್ನು ನಿರ್ಮಿಸಲಾಗಿದೆ. ವ್ಯಾಯಾಮಕ್ಕಾಗಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ

ಕಟ್ಟೆ ಸತ್ಯನಾರಾಯಣ, ಮಾಜಿ ಮೇಯರ್

ಉದ್ಯಾನದಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳಲು, ಓದಲು ಆಸನ, ನೀರಿನ ವ್ಯವಸ್ಥೆ ಮಾಡಲಾಗಿದೆ. ವಿವಿಧ ಮರಗಳನ್ನು ಬೆಳೆಸಲಾಗುತ್ತಿದೆ

ಭೂದೇವಿ, ತೋಟಗಾರಿಕೆ ನಿರೀಕ್ಷಕರು

ಪಹರೆ ಕಾಯುವ ತಾಣ

'ಕೆಂಪೇಗೌಡರು 1560–70ರ ಅವಧಿಯಲ್ಲಿ ಬೆಂಗಳೂರು ದಕ್ಷಿಣಕ್ಕಿರುವ ಬಸವನಗುಡಿಯ ಕಾರಂಜಿ ಕೆರೆ ಬಳಿ ಕಾವಲು ಗೋಪುರ ನಿರ್ಮಿಸಿದರು. ದಳಪತಿಗಳು ಇಲ್ಲಿ ಸರದಿ ಪ್ರಕಾರ ಪಹರೆ ಕಾಯುತ್ತಿದ್ದರು. ಸಂಜೆಯ ನಂತರ ಬಂಡೆಗಳಲ್ಲಿನ ತಗ್ಗು ಭಾಗಗಳಲ್ಲಿ ಹರಳೆಣ್ಣೆ ಹಾಕಿ ದೀಪ ಹಚ್ಚುತ್ತಿದ್ದರು. ಬೇರೆಡೆ ಬೆಳಕು ಕಂಡರೆ ದಳಪತಿ ಕಹಳೆ ಊದಿ ಎಚ್ಚರಿಕೆ ನೀಡುತ್ತಿದ್ದರು. ನಂತರ ದೀಪ ಇರುವೆಡೆ ಹೋಗಿ ಅಲ್ಲಿರುವವರನ್ನು ವಿಚಾರಣೆ ನಡೆಸುತ್ತಿದ್ದರು. ಹಾಗಾಗಿಯೇ ಇದಕ್ಕೆ ಕಹಳೆ ಬಂಡೆ ಎಂಬ ಹೆಸರು ಬಂದಿದೆ' ಎನ್ನುತ್ತಾರೆ ಇತಿಹಾಸಕಾರ ಧರ್ಮೇಂದ್ರ ಕುಮಾರ್.

ಡಿ.ವಿ.ಜಿಗೂ ನಂಟು

ಡಿ.ವಿ.ಗುಂಡಪ್ಪ ಅವರು ಈ ಬಂಡೆ ಮೇಲೆ ಕುಳಿತು ಸಾಹಿತಿಗಳೊಂದಿಗೆ ಚರ್ಚೆ ನಡೆಸುತ್ತಿದ್ದರು. 2002–03ರಲ್ಲಿ ಅವರ ಗೌರವಾರ್ಥ ಡಿ.ವಿ.ಜಿ ಪ್ರತಿಮೆಯನ್ನೂ ಇಲ್ಲಿ ಸ್ಥಾಪಿಸಲಾಗಿದೆ. ಮಾಸ್ತಿ, ಬೆಳ್ಳಾವೆ ವೆಂಕಟನಾರಾಯಣಪ್ಪ, ವಿ.ಸೀತಾರಾಮಯ್ಯ, ಪತ್ರಕರ್ತ ಟಿ.ಆರ್. ರಾಮಯ್ಯ, ಕಲಾವಿದ ಎ.ಎನ್.ಸುಬ್ಬರಾವ್ ಮೊದಲಾದ ಗಣ್ಯರು ಇಲ್ಲಿಗೆ ಭೇಟಿ ನೀಡುತ್ತಿದ್ದರು.

AIR FORCE SCHOOL HEBBAL
HQTC(U) AF, JC Nagar Post, Bengaluru-06
(Under the aegis of the IAF Educational & Cultural Society)

Interested candidates may apply for the following vacancies:
Regular - TGT Social Studies - 02, Helpers (MTS) - (02 male)
Contractual - PGT Political Science & Psychology - 01
Empanelment - PGT History - 01
Last date for submission of application along with all copies of testimonials (educational and experience certificates) is **15 May 2022.**
For QRs, application, pay scale & more details please log on to **www.afshebbal.ac.in**
CHAIRMAN

ಮದ್ಯ ಖರೀದಿ ಬಹಿಷ್ಕಾರಕ್ಕೆ ನಿರ್ಧಾರ

ಬೆಂಗಳೂರು: ಇ–ಇಂಡೆಂಟ್ ವ್ಯವಸ್ಥೆ ವಿರೋಧಿಸಿ ಮೇ 6ರಂದು ಪಾನೀಯ ನಿಗಮದಿಂದ ಮದ್ಯ ಖರೀದಿ ಬಹಿಷ್ಕರಿಸಲು ಮದ್ಯದ ಅಂಗಡಿ ಮಾಲೀಕರು ನಿರ್ಧರಿಸಿದ್ದಾರೆ.

'ಹೊಸ ಪದ್ಧತಿ ಜತೆಗೆ ಹಳೇ ಪದ್ಧತಿಯನ್ನು ಕನಿಷ್ಠ ಮೂರು ತಿಂಗಳಾದರೂ ಉಳಿಸಿಕೊಳ್ಳಬೇಕು ಎಂಬ ಮನವಿಗೆ ಪಾನೀಯ ನಿಗಮದ (ಕೆಎಸ್‌ಬಿಸಿಎಲ್) ಅಧಿಕಾರಿಗಳು ಸ್ಪಂದಿಸುತ್ತಿಲ್ಲ' ಎಂದು ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ಹೆಗ್ಡೆ ಹೇಳಿದ್ದಾರೆ.

ರಾತ್ರಿ 9ರಿಂದ ಬೆಳಿಗ್ಗೆ 9ರ ಅವಧಿಯಲ್ಲಷ್ಟೇ ಬೇಡಿಕೆ ಪಟ್ಟಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಇದು ಸೇರಿದಂತೆ ಹೊಸ ಪದ್ಧತಿಯಲ್ಲಿ ಹಲವು ದೋಷಗಳಿವೆ ಎಂದು ಅವರು ತಿಳಿಸಿದ್ದಾರೆ.

'ಹಲವು ಬಾರಿ ಮನವಿ ಸಲ್ಲಿಸಿ ಪ್ರತಿಭಟನೆ ನಡೆಸಿದ್ದರೂ ವ್ಯವಸ್ಥೆ ಬದಲಾಗಿಲ್ಲ. ಆದ್ದರಿಂದ ಮದ್ಯ ಮತ್ತು ಬಿಯರ್ ಖರೀದಿ ಬಹಿಷ್ಕರಿಸಿ ಹೋರಾಟ ನಡೆಸಲು ನಿರ್ಧರಿಸಿದ್ದೇವೆ' ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

fabindia 60 YEARS OF CELEBRATING INDIA ESTABLISHED 1960

CLEARANCE SALE
FLAT 50%OFF* ON SELECT MERCHANDISE

Venues:
Rajajinagar, Raja Rajeshwari Kalyana Mantapa, 2nd Block, Dr. Rajkumar Road, Bangalore (Sale till 5th May 2022)
Safina Plaza, No.84/85, Infantry Road, Bangalore (Sale till 8th May 2022)

fabfamily | fabindia.com | ALL COVID-19 PROTOCOLS WILL BE TAKEN CARE OF *T&C Apply
Surya Agency Private Limited

DH DECCAN HERALD ಪ್ರಜಾವಾಣಿ

ನಮ್ಮ ಕಂಪನಿಯ ಕೆಳಕಂಡ ವಾಹನ
"ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ" ಮಾರಾಟಕ್ಕಿದೆ.

TATA MANZA AQUA QUADRA JET DIESEL, 2010 Model AC

ವಾಹನವನ್ನು ನಂ. 75, ಎಂ.ಜಿ. ರಸ್ತೆ, ಬೆಂಗಳೂರು–1 ಇಲ್ಲಿ ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ ಪರಿಶೀಲಿಸಬಹುದು.

ಕಾನ್ಫಿಡೆನ್ಷಿಯಲ್ ಎಂದು ಸ್ಪಷ್ಟವಾಗಿ ನಮೂದಿಸಲಾದ ಲಕೋಟೆಯಲ್ಲಿ ಆಫರುಗಳನ್ನು ಮೊಹರು ಮಾಡಿ "ದಿ. ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್" ಇವರ ಹೆಸರಿಗೆ ರೂ. 5,000/– ಮೌಲ್ಯದ ಡಿ.ಡಿ. ರೂಪದ ಇಎಂಡಿ ಜೊತೆಗೆ ದಿನಾಂಕ 16–05–2022 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಕೆಳಗೆ ತಿಳಿಸಿರುವವರಿಗೆ ಸಲ್ಲಿಸತಕ್ಕದ್ದು.

ಯಾವುದೇ ಕಾರಣ ನೀಡದೆ ಯಾವುದೇ ಆಫರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿಕೊಂಡಿದೆ.

ಮ್ಯಾನೇಜರ್ – ಅಡ್ಮಿನಿಸ್ಟ್ರೇಷನ್
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಎಂ. ಜಿ. ರಸ್ತೆ, ಬೆಂಗಳೂರು–560 001
ಫೋನ್: 080–45557208 / 319. Mob: 9606931751

farnazfever.com

ಮುನಿರತ್ನ ವಿರುದ್ಧ ಕ್ರಮ ಕೈಗೊಳ್ಳದ ಸರ್ಕಾರ: ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕ್ಷೇತ್ರ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಸದೆಯೇ ₹152 ಕೋಟಿ ಹಗರಣ ಮಾಡಿರುವ ಬಗ್ಗೆ ಲೋಕಾಯುಕ್ತ ವರದಿ ಬಯಲು ಮಾಡಿದ್ದರೂ ಸಚಿವ ಮುನಿರತ್ನ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ. ಇದರ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಯಶಸ್ವಿಗೊಳಿಸಿದ ಮುಖಂಡರಿಗೆ ಅಭಿನಂದನೆ ಸಲ್ಲಿಸಲು ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಶನಿವಾರ ಮಾತನಾಡಿದರು.

'ಕ್ಷೇತ್ರದಲ್ಲಿ 60 ಸಾವಿರ ನಕಲಿ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದ್ದು, ಇದರ ವಿರುದ್ಧ ಸೋಮವಾರ ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ನೀಡಲಾಗುವುದು. ಬೇನಾಮಿ ಹೆಸರಿನಲ್ಲಿ ಶಾಸಕರೇ ನೂರಾರು ಕೋಟಿ ಮೊತ್ತದ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ. ಕಳಪೆ ಕಾಮಗಾರಿ ಬಗ್ಗೆ ಪ್ರಶ್ನಿಸಿದರೆ ಸುಳ್ಳು ಮೊಕದ್ದಮೆ ದಾಖಲಿಸುತ್ತಿದ್ದಾರೆ' ಎಂದು ಅವರು ಹೇಳಿದರು.

'ಭ್ರಷ್ಟಾಚಾರ, ಕಾಮಗಾರಿಯಲ್ಲಿ ಪರ್ಸೆಂಟೇಜ್, ಪಿಎಸ್ಐ ನೇಮಕಾತಿ ಹಗರಣ, ವರ್ಗಾವಣೆ ದಂಧೆ, ಬೆಲೆ ಏರಿಕೆಯಿಂದ ಸೃಷ್ಟಿಯಾಗಿರುವ ಹಗರಣ ಮರೆಮಾಚಲು ಧರ್ಮದ ಹೆಸರಿನಲ್ಲಿ ಅಶಾಂತಿಯ ವಾತಾವರಣವನ್ನು ಸರ್ಕಾರ ಸೃಷ್ಟಿಸುತ್ತಿದೆ. ಇದರ ವಿರುದ್ಧ ಜನ ಜಾಗೃತರಾಗಿ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು' ಎಂದು ಡಿ.ಕೆ.ಸುರೇಶ್ ಅವರು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಎಚ್.ಕುಸುಮಾ, 'ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಪಕ್ಷ ಎಂದರೆ ಅದು ಕಾಂಗ್ರೆಸ್. ದೇಶದ ಅಭಿವೃದ್ಧಿ ಹಾಗೂ ಏರಿಕೆಯಾಗಿರುವ ದರಗಳನ್ನು ಕಡಿಮೆಗೊಳಿಸುವ ಸಾಮರ್ಥ್ಯ ಇರುವುದು ಕಾಂಗ್ರೆಸ್‌ಗೆ ಮಾತ್ರ' ಎಂದರು.

ಕಾಂಗ್ರೆಸ್‌ನ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಂ.ರಾಜ್‌ಕುಮಾರ್, ಮುಖಂಡರಾದ ಹನುಮಂತರಾಯಪ್ಪ, ರಾಂಪುರ ನಾಗೇಶ್, ಎ.ಅಮರನಾಥ್, ಗೋಪಾಲ್, ಕೆಪಿಸಿಸಿ ಪ್ರಚಾರ ಸಮಿತಿ ಸಂಚಾಲಕ ಎಂ.ತಿಬ್ಬೇಗೌಡ, ತುಕಾರಾಂ ಮಾತನಾಡಿದರು.

ಪಿಎಸ್‌ಐ: ದೊಡ್ಡವರಿಗೂ ಪಾಲು!

ಒಂದನೇ ಪುಟದಿಂದ

ಪೊಲೀಸ್ ನೇಮಕಾತಿ ವಿಭಾಗ ಹೊರಡಿಸಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದ ವೀರೇಶ್ ನಿಡಗುಂದಾ, ಅರುಣ್ ಪಾಟೀಲ, ಕೆ. ಪ್ರವೀಣ್ ಕುಮಾರ್, ಚೇತನ್ ನಂದಗಾವ್, ವಿಶಾಲ್ ಶಿರೂರ, ಎನ್.ವಿ. ಸುನೀಲ್ ಕುಮಾರ್ ಹಾಗೂ ಹಯ್ಯಾಳಿ ದೇಸಾಯಿ ಅವರನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಪ್ರತಿಯೊಬ್ಬರು ₹ 30 ಲಕ್ಷದಿಂದ ₹ 65 ಲಕ್ಷದವರೆಗೂ ಹಣ ನೀಡಿರುವ ಮಾಹಿತಿ ಸಿಐಡಿಗೆ ಲಭ್ಯವಾಗಿದೆ. ಆದರೆ, ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಮಾತ್ರ ಪತ್ತೆಯಾಗಿಲ್ಲವೆಂದು ಮೂಲಗಳು ಹೇಳಿವೆ.

'ಹಿರಿಯ ಸರ್'ಗಳತ್ತ ಕಣ್ಣು: ಅಕ್ರಮ ಪ್ರಕರಣದಲ್ಲಿ ಇದುವರೆಗೂ 23 ಮಂದಿಯನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದು, ಪ್ರತಿಯೊಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ರುದ್ರಗೌಡ ಡಿ. ಪಾಟೀಲ ಹಾಗೂ ಮಹಾಂತೇಶ ಪಾಟೀಲ ಸಹೋದರರು, ಅಕ್ರಮ ಪ್ರಕರಣದಲ್ಲಿ ಮಧ್ಯಸ್ಥಿಕೆ ಮಾತ್ರ ವಹಿಸಿರುವುದಾಗಿ ಹೇಳುತ್ತಿದ್ದಾರೆ. ತಾವು ಸಂಗ್ರಹಿಸಿದ್ದ ಹಣದಲ್ಲಿ 'ದೊಡ್ಡವರು' ಹಾಗೂ 'ಹಿರಿಯ ಸರ್'ಗಳಿಗೆ ಪಾಲು ನೀಡಿರುವುದಾಗಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳುತ್ತಿವೆ. ಆದರೆ, ಯಾವುದೇ ದಾಖಲೆಗಳನ್ನು ನೀಡದಿರುವುದು ತನಿಖೆಗೆ ಹಿನ್ನಡೆ ತಂದಿದೆ.

ಆರೋಪಿಗಳ ವಿಚಾರಣೆಯಿಂದ ಬಯಲಾಗಿರುವ 'ದೊಡ್ಡವರು' ಹಾಗೂ 'ಹಿರಿಯ ಸರ್'ಗಳ ಮೇಲೆ ಸಿಐಡಿ ಅಧಿಕಾರಿಗಳು ಕಣ್ಣಿಟ್ಟಿದ್ದು, ಪುರಾವೆಗಳಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ಗೊತ್ತಾಗಿದೆ.

'ಸರ್' ಭೇಟಿಯಾಗುತ್ತಿದ್ದ ಪಾಟೀಲ

ಬಂಧಿತ ಆರೋಪಿ ಆರ್.ಡಿ. ಪಾಟೀಲ, ಆಗಾಗ ಬೆಂಗಳೂರಿಗೆ ಹೋಗಿ ಬರುತ್ತಿದ್ದ. ಪರೀಕ್ಷೆಯಲ್ಲಿ ಅಕ್ರಮ ಎಸಗಲು ಅನುಕೂಲ ಮಾಡಿಕೊಡುವ 'ಹಿರಿಯ ಸರ್'ಗಳನ್ನು ಭೇಟಿಯಾಗಿ, ಮಾತುಕತೆ ನಡೆಸುತ್ತಿದ್ದರೆಂಬ ಮಾಹಿತಿಯೂ ಲಭ್ಯವಾಗಿದೆ.

ಪಿಎಸ್ಐ ನೇಮಕಾತಿ ಅಕ್ರಮಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರು ಇತ್ತೀಚೆಗಷ್ಟೇ ಆಡಿಯೊವೊಂದನ್ನು ಬಿಡುಗಡೆ ಮಾಡಿದ್ದರು. ಆರ್.ಡಿ. ಪಾಟೀಲ ಮಾತನಾಡಿದ್ದು ಎನ್ನಲಾದ ಆಡಿಯೊದಲ್ಲಿ, 'ಅಭ್ಯರ್ಥಿಗಳ ಅರ್ಜಿ ಸಂಖ್ಯೆಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಿ, ಸರ್ ಭೇಟಿಯಾಗಿ ಪರೀಕ್ಷಾ ಕೇಂದ್ರ ಹಾಕಿಸಿಕೊಂಡು ಬರಲಾಗುತ್ತಿದೆ' ಎಂಬ ಸಂಭಾಷಣೆ ಇತ್ತು. ಈ ಬಗ್ಗೆಯೂ ಸಿಐಡಿಗೆ ಅನುಮಾನವಿದ್ದು, ನಿಖರ ಪುರಾವೆ ಮಾತ್ರ ಲಭ್ಯವಾಗಿಲ್ಲ.

ಸುಧಾಮೂರ್ತಿಗೆ 'ಮಾನವತಾವಾದಿ ಬಸವೇಶ್ವರ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಗದಗ: ಜಿಲ್ಲೆಯ ಲಕ್ಷ್ಮೇಶ್ವರದ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನ ನೀಡುವ 2022ನೇ ಸಾಲಿನ 'ಮಾನವತಾವಾದಿ ಬಸವೇಶ್ವರ ಪ್ರಶಸ್ತಿ'ಗೆ ಇನ್ಫೋಸಿಸ್‌ನ ಸುಧಾಮೂರ್ತಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಹೇಳಿದ್ದಾರೆ.

ಗದುಗಿನ ತೋಂಟದಾರ್ಯ ಮಠದಲ್ಲಿ ಮೇ 2ರಂದು ನಡೆಯುವ ಕಾರ್ಯಕ್ರಮದಲ್ಲಿ ಕೆಎಲ್ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರು ಡಾ.ಸುಧಾಮೂರ್ತಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿಯು ₹1 ಲಕ್ಷ ನಗದು, ತಾಮ್ರಫಲಕ ಒಳಗೊಂಡಿದೆ.

ಹೆಡ್ ಕಾನ್‌ಸ್ಟೆಬಲ್ ಆತ್ಮಹತ್ಯೆ

ಬೆಂಗಳೂರು: ಹೆಸರಘಟ್ಟ ಬಳಿಯ ತೋಟದಲ್ಲಿ ಮರವೊಂದಕ್ಕೆ ನೇಣು ಹಾಕಿಕೊಂಡು ಹೆಡ್ ಕಾನ್‌ಸ್ಟೆಬಲ್ ಮಂಜುನಾಥ್ (44) ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ಮಂಜುನಾಥ್, ಕೊಡಿಗೇಹಳ್ಳಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೂರು ತಿಂಗಳಿನಿಂದ ರಜೆ ಮೇಲಿದ್ದ ಅವರು ಸಂಬಂಧಿಕರ ತೋಟದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪತ್ನಿ ಹಾಗೂ ಮಕ್ಕಳು ತುಮಕೂರಿನಲ್ಲಿರುವ ಸಂಬಂಧಿಕರ ಮನೆಗೆ ಇತ್ತೀಚೆಗೆ ಹೋಗಿದ್ದರು. ಗುರುವಾರ ರಾತ್ರಿ ತೋಟಕ್ಕೆ ಹೋಗಿದ್ದ ಮಂಜುನಾಥ್, ಅಲ್ಲಿಯೇ ಮರವೊಂದಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಶುಕ್ರವಾರ ಬೆಳಿಗ್ಗೆ ಮೃತದೇಹ ನೋಡಿದ್ದ ಸ್ಥಳೀಯರು, ಮಾಹಿತಿ ನೀಡಿದ್ದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿತ್ತು' ಎಂದೂ ಪೊಲೀಸರು ಹೇಳಿದರು.

APARTMENTS FOR SALE IN VARIOUS LOCATIONS

PRM/KA/RERA/1251/446/PR/210312/004002	PRM/KA/RERA/1251/308/PR/290122/004660	PRM/KA/RERA/1251/309/PR/181122/002151	PRM/KA/RERA/1251/472/PR/221221/004599	PRM/KA/RERA/1251/308/PR/201201/003733	PRM/KA/RERA/1251/309/PR/180120/001878	PRM/KA/RERA/1251/309/PR/211209/004576
K R PURAM	SARJAPURA	THANISANDRA	RMV EXTN. 2ND STAGE	HOSA ROAD JUNCTION	THANISANDRA MAIN ROAD	YELAHANKA
CLOSE TO GARDEN CITY UNIVERSITY	SARJAPURA - ATTIBELE ROAD	NEAR KNS INSTITUTE OF TECHNOLOGY	NEAR HEBBAL	NEAR BOSCH (ELECTRONIC CITY)	NR. MANYATA TECH PARK	10 MINS. TO YELAHANKA POLICE STATION
₹ 39.36 - 65.42 Lacs*	₹ 27.10 - 40.15 Lacs*	₹ 35.16 - 41.16 Lacs*	₹ 51.10 - 62.75 Lacs*	₹ 31.00 - 34.87 Lacs*	₹ 1.11 - 1.37 Crores*	₹ 31.22 - 52.85 Lacs*
2 & 3-BHK	2 & 3-BHK	2-BHK	2 & 3-BHK	2 & 3-BHK	20 FLOORS, 3-BHK, 1853-2293 Sq. Ft.	2 & 3-BHK
₹3,800 / Sq. Ft.	₹2,800 / Sq. Ft.	READY TO OCCUPY	₹ 5,000 / Sq. Ft.	₹ 3,100 / Sq. Ft.	READY TO OCCUPY	₹3,500 / Sq. Ft.
8880 438 000	9164 122 000	8880 461 461	8880 099 344	9164 045 000	8088 779 779	8880 758 758

*Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion. Travel time may vary with real-time traffic conditions and the route followed to reach the destination, please check your maps for precise and accurate travel time from your location.

For more details/information about the projects, visit: www.rera.karnataka.gov.in *T&C Apply

www.dsmaxproperties.com ಡಿಎಸ್ ಮ್ಯಾಕ್ಸ್

ಮದ್ರಾಸ್ ಎಂಜಿನಿಯರ್ ಗ್ರೂಪ್‌ನ ನೂತನ ಕಮಾಂಡಂಟ್ ಆಗಿ ನೇಮಕಗೊಂಡ ಬ್ರಿಗೇಡಿಯರ್ ಶಲಭ್ ಗುಪ್ತಾ ಅವರಿಗೆ ಬ್ರಿಗೇಡಿಯರ್ ಟಿಪಿಎಸ್ ವಧ್ವಾ (ಎಡತುದಿ) ಅವರು ಶನಿವಾರ ಅಧಿಕಾರ ಹಸ್ತಾಂತರಿಸಿದರು.

ವರ್ಗಾವಣೆ: ಸಚಿವರಿಗೆ ಅಧಿಕಾರ

ಒಂದನೇ ಪುಟದಿಂದ

ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ 2013ರ ಜೂನ್ 7ರಂದು ಹೊರಡಿಸಿದ್ದ ಮಾರ್ಗಸೂಚಿಗಳಲ್ಲಿ ಇರುವ ಇತರ ಅಂಶಗಳು ಈ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ಅನ್ವಯವಾಗುತ್ತದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಈ ಮಾರ್ಗಸೂಚಿ ಪ್ರಕಾರ, ಆಯಾ ನೇಮಕಾತಿ ಪ್ರಾಧಿಕಾರಗಳೇ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ ಮಾಡಬೇಕಿತ್ತು. ಈ ಅಧಿಕಾರವನ್ನು ಸಚಿವರಿಗೆ ಪ್ರತ್ಯಾಯೋಜನೆ ಮಾಡಲಾಗಿದೆ.

ಹಾರನಹಳ್ಳಿ ರಾಮಸ್ವಾಮಿ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ಶಿಫಾರಸಿನಂತೆ 2013ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿತ್ತು. ಅದರ ಪ್ರಕಾರ, ನಿರ್ದಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸದೇ ಇರುವ ಯಾವುದೇ ಅಧಿಕಾರಿ ಮತ್ತು ನೌಕರರನ್ನು ವರ್ಗಾವಣೆ ಮಾಡುವಂತಿಲ್ಲ.

ಕೆಲವು ವರ್ಷಗಳ ಕಾಲ, ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ಸಾಮಾನ್ಯ ವರ್ಗಾವಣೆ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿತ್ತು. ನೇಮಕಾತಿ ಪ್ರಾಧಿಕಾರಗಳು ಆಯಾ ಇಲಾಖೆಯ ಉಸ್ತುವಾರಿ ಹೊಂದಿರುವ ಸಚಿವರ ಅನುಮೋದನೆ ಪಡೆದು ವರ್ಗಾವಣೆ ಆದೇಶ ಹೊರಡಿಸುತ್ತಿದ್ದವು.

2019ರಲ್ಲಿ ಬಿ, ಸಿ ಮತ್ತು ಡಿ ದರ್ಜೆ ಅಧಿಕಾರಿಗಳು ಹಾಗೂ ನೌಕರರ ವರ್ಗಾವಣೆ ಅಧಿಕಾರವನ್ನು ಸಚಿವರಿಗೆ ಪ್ರತ್ಯಾಯೋಜನೆ ಮಾಡಲಾಗಿತ್ತು. 2020ರಲ್ಲಿ ಕೋವಿಡ್ ಕಾರಣದಿಂದ ಸರ್ಕಾರಿ ನೌಕರರ ವರ್ಗಾವಣೆಗೆ ನಿಯಂತ್ರಣ ಹೇರಿದ್ದಾಗ, ಮುಖ್ಯಮಂತ್ರಿಯವರ ಅನುಮೋದನೆ ಪಡೆದು ವರ್ಗಾವಣೆ ಆದೇಶ ಹೊರಡಿಸಲು ಅವಕಾಶ ನೀಡಲಾಗಿತ್ತು. 2021ರಲ್ಲಿ ಪುನಃ ಸಚಿವರಿಗೆ ವರ್ಗಾವಣೆ ಅಧಿಕಾರ ನೀಡಲಾಗಿತ್ತು. ಈ ವರ್ಷ ಅದೇ ವ್ಯವಸ್ಥೆ ಮುಂದುವರಿಸಲಾಗಿದೆ.

‘ಮೂರೇ ದಿನದಲ್ಲಿ ಭೂ ಪರಿವರ್ತನೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಲು ಭೂಮಾಲೀಕರ ಸ್ವಯಂಘೋಷಿತ ಪ್ರಮಾಣಪತ್ರದ ಆಧಾರದಲ್ಲಿ ಮೂರೇ ದಿನಗಳಲ್ಲಿ ಭೂ ಪರಿವರ್ತನೆ ಪ್ರಕ್ರಿಯೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈಗ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಬಳಸುವ ಮುನ್ನ ಭೂಪರಿವರ್ತನೆ ಮಾಡುವಾಗ ಅರ್ಜಿ ಹಲವು ಇಲಾಖೆಗಳನ್ನು ಸುತ್ತಿಕೊಂಡು ಜಿಲ್ಲಾಧಿಕಾರಿಗೆ ಬರಬೇಕು. ಅಲ್ಲಿ ಆದೇಶ ಹೊರಬೀಳುವಾಗ ಆರರಿಂದ ಎಂಟು ತಿಂಗಳಾಗುತ್ತಿದೆ. ಅದನ್ನು ತಪ್ಪಿಸಲು ಭೂ ಕಂದಾಯ ಕಾಯ್ದೆಯ ಸೆಕ್ಷನ್ 95ಕ್ಕೆ ತಿದ್ದುಪಡಿ ತರಲಾಗುವುದು’ ಎಂದರು.

ಆಯಾ ಪ್ರದೇಶದ ‘ಸಮಗ್ರ ಯೋಜನೆ’ಯ ಅನುಸಾರ ಜಮೀನು ಮಾಲೀಕರು ಪ್ರಮಾಣಪತ್ರದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಎಲ್ಲ ಪರಿಶೀಲನೆಗಳನ್ನೂ ತ್ವರಿತವಾಗಿ ಪೂರ್ಣಗೊಳಿಸಿ ಮೂರು ದಿನಗಳಲ್ಲಿ ಭೂಪರಿವರ್ತನೆ ಆದೇಶ ಹೊರಡಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಹೇಳಿದರು.

‘ಸಮಗ್ರ ಯೋಜನೆ’ಯಲ್ಲಿ ಹಸಿರು ವಲಯದಲ್ಲಿರುವ ಜಮೀನುಗಳ ಭೂ ಪರಿವರ್ತನೆಗೆ ಅವಕಾಶವಿರುವುದಿಲ್ಲ. ಸರ್ಕಾರಿ ಜಮೀನು, ಅರಣ್ಯ ಪ್ರದೇಶ, ಸರ್ಕಾರಿ ಕೆರೆ ಹಾಗೂ ಕೆಲವು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ) ಜಮೀನು ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆ ವ್ಯಾಪ್ತಿಯಲ್ಲಿರುವ ಜಮೀನುಗಳ ಭೂಪರಿವರ್ತನೆಗೂ ಅರ್ಜಿ ಸ್ವೀಕರಿಸುವುದಿಲ್ಲ ಎಂದರು.

‘ಸಮಗ್ರ ಯೋಜನೆ’ಗಳಿಲ್ಲದ ಪ್ರದೇಶಗಳ ಜಮೀನುಗಳಿಗೆ ಮಾಲೀಕರ ಸ್ವಯಂಘೋಷಣೆಯ ಪ್ರಮಾಣಪತ್ರದ ಆಧಾರದಲ್ಲೇ ಭೂಪರಿವರ್ತನೆ ಆದೇಶ ನೀಡಲಾಗುವುದು. ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ) ಹೊಂದಿರುವವರು ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಜಮೀನು ಮಾಲೀಕರು ಮಾತ್ರ ಅರ್ಜಿ ಸಲ್ಲಿಸಬಹುದು. ಸುಳ್ಳು ಮಾಹಿತಿ ನೀಡಿರುವುದು ಕಂಡುಬಂದರೆ ಆದೇಶ ತಾನಾಗಿಯೇ ರದ್ದಾಗುತ್ತದೆ. ಅರ್ಜಿ ಶುಲ್ಕ ಮತ್ತು ಭೂಪರಿವರ್ತನಾ ಶುಲ್ಕಗಳ ಮೊತ್ತವನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ತಿಳಿಸಿದರು.

ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲೇ ಭೂ ಪರಿವರ್ತನೆ ಶುಲ್ಕವನ್ನೂ ನಿಗದಿ ಮಾಡುವ ಚಿಂತನೆಯೂ ನಡೆದಿದೆ ಎಂದರು.



ಆಸ್ತಿ ತೆರಿಗೆ: ರಿಯಾಯಿತಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಪೂರ್ತಿ ಆಸ್ತಿ ತೆರಿಗೆಯನ್ನು ಒಂದೇ ಕಂತಿನಲ್ಲಿ ಪಾವತಿಸುವವರಿಗೆ ನೀಡುವ ಶೇ 5ರಷ್ಟು ರಿಯಾಯಿತಿಯನ್ನು ಮೇ 31ರವರೆಗೆ ವಿಸ್ತರಿಸಿ ನಗರಾಭಿವೃದ್ಧಿ ಇಲಾಖೆ ಶನಿವಾರ ಅಧಿಸೂಚನೆ ಹೊರಡಿಸಿದೆ.

‘ಏಪ್ರಿಲ್ 3 ರವರೆಗೆ ಬಿಬಿಎಂಪಿಯು ಒಟ್ಟು ₹1,355 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದೆ. ಈಗಾಗಲೇ ಪಾವತಿಯಾಗಿರುವ ₹100 ಕೋಟಿ ಮೊತ್ತವು ಇನ್ನಷ್ಟೇ ಬಿಬಿಎಂಪಿ ಖಾತೆಗೆ ಜಮೆ ಆಗಬೇಕಿದೆ. ಹಾಗಾಗಿ ಈ ಆರ್ಥಿಕ ವರ್ಷದಲ್ಲಿ ಇದುವರೆಗೆ ಸುಮಾರು ₹1,455 ಕೋಟಿ ಆಸ್ತಿ ತೆರಿಗೆ ಸಂಗ್ರಹ ಆದಂತಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಈ ಅವಧಿಯಲ್ಲಿ ₹920 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು’ ಎಂದು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಾಮಾನ್ಯವಾಗಿ ಆರ್ಥಿಕ ವರ್ಷದಲ್ಲಿ ಏಪ್ರಿಲ್ ತಿಂಗಳ ಕೊನೆಯ ದಿನದೊಳಗೆ ಆಸ್ತಿ ತೆರಿಗೆ ಪಾವತಿಸಿದವರಿಗೆ ಮಾತ್ರ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಗೊಂಡಿದ್ದರಿಂದ ಆಸ್ತಿ ತೆರಿಗೆ ಮೇಲೆ ಶೇ 5ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಕಳೆದ ಎರಡು ವರ್ಷಗಳಲ್ಲೂ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ವಿಸ್ತರಿಸಲಾಗಿತ್ತು.

‘ಆರು ತಿಂಗಳೊಳಗೆ ಎಲ್ಲರಿಗೂ ಆಯುಷ್ಮಾನ್ ಕಾರ್ಡ್’

ಬೆಂಗಳೂರು: ರಾಜ್ಯದ ಎಲ್ಲರಿಗೂ ಆರು ತಿಂಗಳೊಳಗೆ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೂಚಿಸಿದರು.

ಆಯುಷ್ಮಾನ್ ಭಾರತ್ ದಿನದ ಅಂಗವಾಗಿ ಶನಿವಾರ ನಡೆದ ‘ಆರೋಗ್ಯ ಮಂಥನ’ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ ಆರೋಗ್ಯಾಧಿಕಾರಿಗಳು, ವೈದ್ಯರು, ಸಿಬ್ಬಂದಿ ಮತ್ತು ಫಲಾನುಭವಿಗಳ ಜತೆ ಸಂವಾದ ನಡೆಸಿದ ಅವರು, ‘ಆಯುಷ್ಮಾನ್ ಯೋಜನೆಯ ಅನುಕೂಲಗಳನ್ನು ಪಡೆಯಲು ಎಲ್ಲರಿಗೂ ಅವಕಾಶವಾಗಬೇಕು. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಕಾರ್ಡ್‌ಗಳ ನೋಂದಣಿಗೆ ವ್ಯವಸ್ಥೆ ಮಾಡಬೇಕು’ ಎಂದರು.

ರಾಜ್ಯದ ಪ್ರತಿ ಉಪ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಎಲ್ಲರಿಗೂ ರಕ್ತದೊತ್ತಡ ಹಾಗೂ ಮಧುಮೇಹ ತಪಾಸಣೆ ನಡೆಸಬೇಕು. ಈ ಎರಡೂ ಪರೀಕ್ಷೆಗಳ ವರದಿಗಳನ್ನು ಆರೋಗ್ಯ ಇಲಾಖೆಯ ಕೇಂದ್ರ ಕಚೇರಿಗೆ ರವಾನಿಸಬೇಕು. ರಾಜ್ಯದಾದ್ಯಂತ ಆಂದೋಲನದ ಮಾದರಿಯಲ್ಲಿ ಈ ಕಾರ್ಯಕ್ರಮ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ಮಾತನಾಡಿದ ಸಚಿವರು, ‘ಆಯುಷ್ಮಾನ್ ಭಾರತ್ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. 2021ರಲ್ಲಿ ಈ ಯೋಜನೆಯಡಿ 6.68 ಪ್ರಕರಣಗಳಲ್ಲಿ ₹ 960 ಕೋಟಿ ವೆಚ್ಚದ ಚಿಕಿತ್ಸಾ ಸೌಲಭ್ಯವನ್ನು ಜನರಿಗೆ ಒದಗಿಸಲಾಗಿದೆ’ ಎಂದರು.

ನೀತಿ ಆಯೋಗಕ್ಕೆ ಬಿ.ಜೆ. ಪುಟ್ಟಸ್ವಾಮಿ ರಾಜೀನಾಮೆ

ಬೆಂಗಳೂರು: ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಜೆ. ಪುಟ್ಟಸ್ವಾಮಿ ಅವರು ಶನಿವಾರ ರಾಜೀನಾಮೆ ನೀಡಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಅವರು, 'ನನ್ನ 50 ವರ್ಷದ ರಾಜಕೀಯ, ಲೌಕಿಕ ಜೀವನದಿಂದ ಆಧ್ಯಾತ್ಮಿಕ ಜೀವನಕ್ಕೆ ದೈವ ಪ್ರೇರಣೆಯಿಂದ ಹೋಗುತ್ತಿದ್ದೇನೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಬಿಜೆಪಿ ಮುಖಂಡರಾಗಿರುವ ಬಿ.ಜೆ. ಪುಟ್ಟಸ್ವಾಮಿ ಅವರು ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಮೊದಲ ಪೀಠಾಧಿಪತಿಯಾಗಿ ಆಯ್ಕೆಯಾಗಿದ್ದು, ಮೇ 15ರಂದು ಪಟ್ಟಾಭಿಷೇಕ ನೆರವೇರಲಿದೆ. ಮೇ 6ರಂದು ದೀಕ್ಷೆ ಪಡೆಯಲಿರುವ ಅವರು ಮಾದನಾಯಕನಹಳ್ಳಿಯಲ್ಲಿರುವ ಮಠವನ್ನು ಸ್ವರ್ಣಾನಂದ ಪುರಿ ಸ್ವಾಮೀಜಿ ಎಂಬ ಹೆಸರಿನೊಂದಿಗೆ ಮುನ್ನಡೆಸಲಿದ್ದಾರೆ.

ಸಾಮಾಜಿಕ ಭದ್ರತಾ ಯೋಜನೆ: ಕಂದಾಯ ಸಚಿವ ಅಶೋಕ ಹೇಳಿಕೆ

3.58 ಲಕ್ಷ ಅನರ್ಹ ಪಿಂಚಣಿದಾರರ ಪತ್ತೆ: ₹430 ಕೋಟಿ ಉಳಿತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಪಿಂಚಣಿ ಪಡೆಯುತ್ತಿದ್ದ 3.58 ಲಕ್ಷ ಅನರ್ಹ ವ್ಯಕ್ತಿಗಳನ್ನು ಪತ್ತೆಮಾಡಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರವು ಒಂಬತ್ತು ಮಾಸಿಕ ಪಿಂಚಣಿಗಳನ್ನು ನೀಡುತ್ತಿದೆ. ಅರ್ಹತೆ ಇಲ್ಲದೇ ಅಕ್ರಮವಾಗಿ ಪಿಂಚಣಿ ಪಡೆಯುತ್ತಿದ್ದವರನ್ನು ಗುರುತಿಸಿ, ಸೌಲಭ್ಯ ರದ್ದು ಮಾಡಲಾಗಿದೆ' ಎಂದರು.

ಶ್ರೀಮಂತರು, ಉದ್ಯೋಗಿಗಳು ಅಕ್ರಮವಾಗಿ ಸಾಮಾಜಿಕ ಪಿಂಚಣಿ ಪಡೆಯುತ್ತಿದ್ದರು. ಮೃತಪಟ್ಟವರ ಹೆಸರಿನಲ್ಲಿ ಹಲವು ವರ್ಷಗಳಿಂದ ಪಿಂಚಣಿ ಪಾವತಿ ಆಗುತ್ತಿರುವುದು ಪತ್ತೆಯಾಗಿದೆ ಎಂದು ಸಚಿವ ಅಶೋಕ ತಿಳಿಸಿದರು.

2020-21ರಲ್ಲಿ ಸಾಮಾಜಿಕ ಪಿಂಚಣಿ ಯೋಜನೆಗಳ ಅಡಿಯಲ್ಲಿ ₹ 7,800 ಕೋಟಿ ನೆರವು ವಿತರಿಸಲಾಗಿತ್ತು. ಪ್ರಸಕ್ತ ವರ್ಷ ₹ 9,483.51 ಕೋಟಿ ಅನುದಾನ ಒದಗಿಸಲಾಗಿದೆ. ಅನರ್ಹ ಫಲಾನುಭವಿಗಳ ರದ್ಧತಿಯಿಂದ ಸರ್ಕಾರದ ಬೊಕ್ಕಸಕ್ಕೆ ₹ 430 ಕೋಟಿ ಉಳಿತಾಯವಾಗಲಿದೆ ಎಂದರು.

ಪಿಂಚಣಿ ಮಂಜೂರಾತಿಗೆ 'ಹಲೋ ಕಂದಾಯ ಸಚಿವರೇ' ಎಂಬ ಸಹಾಯವಾಣಿ ಆರಂಭಿಸಲಾಗುವುದು. ಮಧ್ಯವರ್ತಿಗಳ ಕಾಟವಿಲ್ಲದೆ, ಫಲಾನುಭವಿಗಳಿಗೆ ಅಲೆದಾಟ ಇಲ್ಲದೆ ಪಿಂಚಣಿ ಮಂಜೂರು ಮಾಡಲಾಗುವುದು. ಅರ್ಜಿ ಸಲ್ಲಿಸಿದ 72 ಗಂಟೆಗಳ ಒಳಗೆ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ಆದೇಶ ನೀಡಲಾಗುವುದು ಎಂದು ಹೇಳಿದರು.

ಮನೆ ಬಾಗಿಲಿಗೆ ಪಿಂಚಣಿ ತಲುಪಿಸುವ ಯೋಜನೆ ಜಾರಿಯಾಗಿದೆ. ಈ ಯೋಜನೆಯಡಿ 52,000 ಅರ್ಜಿಗಳು ಸಲ್ಲಿಕೆಯಾಗಿದ್ದು, 43,000 ಮಂದಿಗೆ ಈಗಾಗಲೇ ಪಿಂಚಣಿ ತಲುಪಿಸಲಾಗಿದೆ ಎಂದರು.

ಸ್ವಯಂ ನಕ್ಷೆ: ಕಂದಾಯ ಇಲಾಖೆ ಮೂಲಕ ಜಮೀನುಗಳ ಪೋಡಿ, 11-ಇ ನಕ್ಷೆ ಮತ್ತು ಭೂ ಪರಿವರ್ತನೆ ನಕ್ಷೆಗಳನ್ನು ಸ್ವಯಂ ಜಮೀನು ಮಾಲೀಕರೇ ಪಡೆಯಲು ಅನುಕೂಲ ಆಗುವಂತೆ ರೂಪಿಸಲಾಗಿರುವ 'ಸ್ವಾವಲಂಬಿ' ಸ್ವಯಂ ನಕ್ಷೆ ಯೋಜನೆಯಡಿ ಈ ಎಲ್ಲ ಅರ್ಜಿಗಳೂ ತ್ವರಿತವಾಗಿ ವಿಲೇವಾರಿ ಆಗಲಿವೆ ಎಂದು ಅಶೋಕ ಹೇಳಿದರು.

ಪ್ರತಿ ವರ್ಷ ಹತ್ತು ಲಕ್ಷ ಪೋಡಿ ಅರ್ಜಿಗಳು ಸಲ್ಲಿಕೆಯಾಗುತ್ತಿದ್ದವು. ನಾಲ್ಕು ಲಕ್ಷ ಮಾತ್ರ ವಿಲೇವಾರಿ ಆಗುತ್ತಿದ್ದವು. ಈಗಲೂ ಆರು ಲಕ್ಷ ಅರ್ಜಿಗಳು ಬಾಕಿ ಇವೆ ಎಂದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಭೂ ದಾಖಲೆಗಳ ಆಯುಕ್ತ ಮುನೀಶ್ ಮೌದ್ಗಿಲ್, ಸಾಮಾಜಿಕ ಪಿಂಚಣಿ ಇಲಾಖೆ ನಿರ್ದೇಶಕ ಸತೀಶ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಸಂಕ್ಷಿಪ್ತ ಸುದ್ದಿ

ಬಾಬಾಸಾಹೇಬ್ ಕಲ್ಯಾಣಿಗೆ ಗೌರವ ಡಾಕ್ಟರೇಟ್

ಹುಬ್ಬಳ್ಳಿ: ಇಲ್ಲಿನ ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯವು ಭಾರತ ಫೋರ್ಜ್ ಲಿಮಿಟೆಡ್ ಅಧ್ಯಕ್ಷ ಬಾಬಾಸಾಹೇಬ್ ಕಲ್ಯಾಣಿ ಅವರಿಗೆ ಗೌರವ ಡಾಕ್ಟರೇಟ್ ಘೋಷಿಸಿದೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ವಿ.ವಿ. ಕುಲಪತಿ ಡಾ.ಅಶೋಕ್ ಶೆಟ್ಟರ್, ಮೊದಲ ಬಾರಿಗೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆಗಾಗಿ ನೀಡಲಾಗುತ್ತಿದ್ದು, ಮೇ 1ರಂದು ಪ್ರದಾನ ಮಾಡಲಾಗುವುದು ಎಂದರು.

ಕೋರೆಗೆ ಅಮೆರಿಕ ವಿ.ವಿ ಗೌರವ ಡಾಕ್ಟರೇಟ್



ಬೆಳಗಾವಿ: ಇಲ್ಲಿನ ಕೆಎಲ್ಇ ಸೊಸೈಟಿ ಕಾರ್ಯಾಧ್ಯಕ್ಷ, ಕೆಎಲ್ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯ ಕುಲಾಧಿಪತಿ ಪ್ರಭಾಕರ ಕೋರೆ ಅವರು ಅಮೆರಿಕದ ಫಿಲಾಡೆಲ್ಫಿಯಾದ ಥಾಮಸ್ ಜೆಫರ್‌ಸನ್ ವಿಶ್ವವಿದ್ಯಾಲಯ ನೀಡುವ 'ಡಾಕ್ಟರ್ ಆಫ್ ಸೈನ್ಸ್' ಗೌರವ ಡಾಕ್ಟರೇಟ್ ಪದವಿಗೆ ಭಾಜನವಾಗಿದ್ದಾರೆ.

'ಕೋರೆ ಅವರು ಶಿಕ್ಷಣ ಕ್ಷೇತ್ರ ಮತ್ತು ಆರೋಗ್ಯ ಸೇವಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಲಾಗಿದೆ. ಮೇ 25ರಂದು ಆ ವಿಶ್ವವಿದ್ಯಾಲಯದಲ್ಲಿ ನಡೆಯುವ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು ಎಂದು ವಿಶ್ವವಿದ್ಯಾಲಯ ತಿಳಿಸಿದೆ' ಎಂದು ಕೆಎಲ್ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯ ಸಂಶೋಧನಾ ನಿರ್ದೇಶಕ ಡಾ.ಶಿವಪ್ರಸಾದ ಗೌಡರ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು. 'ಪದವಿ ಸ್ವೀಕರಿಸುವುದಕ್ಕೆ ಕೋರೆ ಅವರು ಸಮ್ಮತಿಸಿದ್ದಾರೆ' ಎಂದರು.

ರಂಗನತಿಟ್ಟು ಪಕ್ಷಿಧಾಮ ಬಂದ್

ಮೈಸೂರು: ಮೈಸೂರು, ಮಂಡ್ಯ, ಹಾಸನ, ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿ ಬಿರುಗಾಳಿ, ಗುಡುಗು, ಸಿಡಿಲು ಸಹಿತ ಮಳೆ ಸುರಿದು ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದವು. ಮನೆ ಚಾವಣಿಗಳು ಹಾರಿಹೋದವು, ಬೆಳೆ ನಷ್ಟವಾಯಿತು.

ಶ್ರೀರಂಗಪಟ್ಟಣ ರಂಗನತಿಟ್ಟು ಪಕ್ಷಿಧಾಮದಲ್ಲಿ ಮರಗಳು ಬಿದ್ದಿರುವುದರಿಂದ ಶನಿವಾರ ಮತ್ತು ಭಾನುವಾರ ಪಕ್ಷಿಧಾಮ ಪ್ರವೇಶ ಬಂದ್ ಮಾಡಲಾಗಿದೆ.

ಲಕ್ಷ್ಮಿನರಸಿಂಹಸ್ವಾಮಿ ದೇವಾಲಯ ಬಳಿ ಕಾಡು ಬಾಗೆ ಮರ ಮುರಿದು ಬಿದ್ದು, ಅದರಲ್ಲಿದ್ದ ನೂರಾರು ಗಿಳಿಗಳು ಮೃತಪಟ್ಟಿದ್ದವು. ಅವುಗಳನ್ನು ಸಾರ್ವಜನಿಕರು ಶನಿವಾರ ಸಾಮೂಹಿಕವಾಗಿ ಅಂತ್ಯಸಂಸ್ಕಾರ ನಡೆಸಿದರು.

ಅಮಾನತುಗೊಂಡಿದ್ದ ಪಿಡಿಒ ಆತ್ಮಹತ್ಯೆ

ರಾಮನಗರ: ಇ– ಖಾತೆ ಅಕ್ರಮ ಆರೋಪದ ಮೇಲೆ ಅಮಾನತುಗೊಂಡಿದ್ದ ಬಿಡದಿ ಹೋಬಳಿಯ ಬೈರಮಂಗಲ ಗ್ರಾಮ ಪಂಚಾಯಿತಿ ಪಿಡಿಒ ಜೆ.ಡಿ. ರವಿಕುಮಾರ್ (41) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕನಕಪುರ ತಾಲ್ಲೂಕಿನ ಕೊಳ್ಳಿಗನಹಳ್ಳಿ ನಿವಾಸದಲ್ಲಿರುವ ಅವರ ಮಾವನ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. 2011ರಲ್ಲಿ ಪಿಡಿಒ ಹುದ್ದೆಗೆ ಸೇರಿದ್ದ ರವಿಕುಮಾರ್ ಗುರುವಾರ ಪೊಲೀಸರ ಎದುರು ವಿಚಾರಣೆಗೆ ಹಾಜರಾಗಿದ್ದರು. ಶನಿವಾರ ಮತ್ತೆ ವಿಚಾರಣೆಗೆ ಹೋಗಬೇಕಿತ್ತು. ವಿಚಾರಣೆ ದಿನದಂದೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ.

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಕೆತು/ವಿಭಾಗ/ಭಾಲ್ಕಿ/ಟಿ.ಎಸ್–3/2022–23/93 ದಿನಾಂಕ:29–04–2022

ಶೇಕಡಾವಾರು ಟೆಂಡರ ಅಧಿಸೂಚನೆ (ಅಲ್ಪಾವಧಿ)/Call-2

(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ) (ದ್ವಿ ಲಕೋಟೆಯಲ್ಲಿ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಛೇರಿಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಆವ್ಹಾನಿಸಲಾಗಿರುತ್ತದೆ, ವಿವರಗಳು ಈ ಕೆಳಗಿನಂತೆ ಇರುತ್ತವೆ
ಕಾಮಗಾರಿ : ಶಿವಪುರ ಹತ್ತಿರ ಸಮುದಾಯ ಭವನ ನಿರ್ಮಾಣ (ಇಂಡೆಂಟ್ ಸಂ.32415/CALL-3) ಹಾಗೂ ಟೆಂಡರಿಗಿಟ್ಟ ಮೊತ್ತ (ಲಕ್ಷಗಳಲ್ಲಿ) **309.22 ಲಕ್ಷ** ಇರುತ್ತದೆ. ಇ.ಎಂ.ಡಿ ಹಾಗೂ ಅರ್ಹ ಗುತ್ತಿಗೆದಾರರ ವಿವರ ಇ–ಪೋರ್ಟಲ್‌ನಂತೆ ಇರುತ್ತದೆ. ಟೆಂಡರ್ ಪ್ರಕ್ರಿಯೆಗಳ ವೇಳಾಪಟ್ಟಿ : i) ಗುತ್ತಿಗೆದಾರರು ಇ–ಪೋರ್ಟಲ್ ಅಡಿಯಲ್ಲಿ ಟೆಂಡರ್ ಹಾಕುವ ದಿನಾಂಕ 30-04-2022 @11.00 Hrs, ii) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 09-05-2022 @ 16.30 Hrs, iii) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ನ್ನು ಬಿಡ್‌ನ್ನು ತೆರೆಯುವ ದಿನಾಂಕ ಕ್ರಮವಾಗಿ 10-05-2022 @ 17.00 Hrs,12-05-2022 @ 17.00 Hrs website www.eproc.karnataka.gov.in ನೋಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08484–262257 ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,
ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ
ವಾ.ಸಾ.ಸಂ.ಇ/ಬೀದರ/51/ಎಂಸಿ&ಎ/2022–23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–04/1524/2022–23 ದಿನಾಂಕ: 30.04.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕತೆ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರ್ಕಾರದ ಕೆ.ಸಿ.ಇ.ಐ ದರ್ಜೆ–1 (ವಿದ್ಯುತ್) ನಿಂದ ಪಡೆದ ಪರವಾನಗಿ ಹೊಂದಿರುವ ಹಾಗೂ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು: ತುಮಕೂರು ಜಿಲ್ಲೆ, ಶಿರಾ 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 2x20 ಎಂ.ವಿ.ಎ, 66/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ 66 ಕೆ.ವಿ ಡಿ/ಸಿ ಲೈನಿನಿಂದ ಪ್ರಸ್ತಾಪಿತ 66/11ಕೆವಿ ಉಪ ಕೇಂದ್ರದವರೆಗೆ ಸುಮಾರು 4.2ಕಿ.ಮೀ ಡ್ರೇಕ್ ವಾಹಕ ಬಳಸಿ ಡಬಲ್ ಲಿಲೊ ಲೈನ್ ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ನಿರ್ಮಾಣದ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.05.2022 ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/364/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ
ಧಾರವಾಡ ವಿಭಾಗ, ಧಾರವಾಡ.

ಕ್ರಸಂ : ಕಾನಿಇಂಧಾ/ಪಿಬಿ–2,4/ಗುತ್ತಿಗೆ/ 2022–23 / 584 ದಿನಾಂಕ :30.04.2022

ಅಲ್ಪಾವಧಿ ಟೆಂಡರ ಪ್ರಕಟಣೆ 2ನೇ ಕರೆ I.F.T – KW –2 & 3 ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಾಗಿ e-Proc - ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಸಿವಿಲ್ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
	ಲೆಕ್ಕ ಶೀರ್ಷಿಕೆ 8443 ಠೇವಣಿ ವಂತಿಕೆ ಯೋಜನೆ ಅಡಿ				
1	Proposed Construction Of Yatrinivas Building Near Veerakth Math At Mullolli Village In Kundgol Taluka Of Dharwad District Kpwd/2021-22/bd/work_indent 143536/call-2.	25.00	11/05/2022	-	12/05/2022
	ಲೆಕ್ಕ ಶೀರ್ಷಿಕೆ 5054–04–337–0–01–154 Appendix-e				
2	Improvement To Road From Adyapak Nagar Petrol Pump To Shiddppajjan Math In Ward No: 29 Hubballi City Kpwd/2021-22/rd/work _Indent 143668/call-2.	75.00	11/05/2022	12/05/2022	13/05/2022
3	Improvement Concrete Road From Ghodke Petrol Pump To Leprosy Hospital At Ward No: 33 In Hubballi City Kpwd/2021-22/rd/work_ Indent 143675/call-2.	100.00	11/05/2022	12/05/2022	13/05/2022
4	Improvement Road To Vivekananda Nagar, Ramkrishan Nagar, Renuka Nagar, Mahalakshmi Layout Internal Roads At Ward No: 30 In Hubballi City Kpwd/2021-22/rd/work_Indent 143683/call-2.	100.00	11/05/2022	12/05/2022	13/05/2022

ಸಹಿ/–(ಶ್ರೀ.ಎಸ್.ಬಿ. ಚೌಡಣ್ಣವರ) ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ವಾ.ಸಾ.ಇ/ಧಾ/121/2022–23/ದೇಶಪಾಂಡೆಪಬ್ಲಿಸಿಟಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕೃಭಾಜನಿನಿ ಐಬಿಸಿ ವಿಭಾಗ–1, ಕೆಂಭಾವಿ 585216
ತಾ: ಸುರಪುರ ಜಿ: ಯಾದಗೀರ. ದೂ. 08443-278674 Email:ee_ibcdiv1kembhavi@yahoo.com

ಸಂಖ್ಯೆ:ಕೃಭಾಜನಿನಿ/ಐಬಿಸಿ/ವಿಭಾಗ –1/ಪಿಬಿ/2022–23/34 ದಿನಾಂಕ: 28–04–2022

ತಿದ್ದುಪಡಿ ಸಂ. – 1 (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ:– 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 2022–23/ 01 ದಿನಾಂಕ: 06–04–2022
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಈ ಮೂಲಕ ಮೇಲ್ಕಾಣಿಸಿದ ಟೆಂಡರಿನಲ್ಲಿ ಪ್ರಕಟಿಸಲಾದ ದಿನಾಂಕಗಳಲ್ಲಿ ಹಾಗೂ ನೋಟಿಫಿಕೇಶನನಲ್ಲಿ ಬದಲಾವಣೆ ಮಾಡಲಾಗಿದೆ.
ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು:–

Sl no.	ನೋಟಿಫಿಕೇಶನ ದಿನಾಂಕ:06–04–2022 ರಂತೆ	ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು
1	ಟೆಂಡರ ಮೊತ್ತ: **105.71 ಲಕ್ಷಗಳು**	ಟೆಂಡರ ಮೊತ್ತ: **99.87 ಲಕ್ಷಗಳು**
2	ಇ.ಎಂ.ಡಿ ಮೊತ್ತ:1.59 ಲಕ್ಷಗಳು	ಇ.ಎಂ.ಡಿ ಮೊತ್ತ:2.00 ಲಕ್ಷಗಳು
3	ಗುತ್ತಿಗೆದಾರರು ದಿನಾಂಕ: 19–04–2022 ರಿಂದ 28–04–2022 ರ ಸಾಯಂಕಾಲ 4.30 ಘಂಟೆಯ ವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.	ಗುತ್ತಿಗೆದಾರರು ದಿನಾಂಕ: 10–05–2022 ರಿಂದ 21–05–2022 ರ ಸಾಯಂಕಾಲ 4.30 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
4	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 19–04–2022 ರಿಂದ 28–04–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 10–05–2022 ರಿಂದ 21–05–2022 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.
5	Pre-bid ಸಭೆಯನ್ನು ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಅ) ಇವರ ಕಛೇರಿಯಲ್ಲಿ ದಿನಾಂಕ:25–04–2022 ರಂದು ನಡೆಸಲಾಗುವುದು.	Pre-bid ಸಭೆಯನ್ನು ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಅ) ಇವರ ಕಛೇರಿಯಲ್ಲಿ ದಿನಾಂಕ: 16–05–2022 ರಂದು ನಡೆಸಲಾಗುವುದು.
6	ತಾಂತ್ರಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 30–04–2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.	ತಾಂತ್ರಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 24–05–2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
7	ಆರ್ಥಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 04–05–2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.	ಆರ್ಥಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 26–05–2022 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.

ಇನ್ನುಳಿದ ನಿಯಮ ಶರತ್ತುಗಳು ಉಲ್ಲೇಖದಲ್ಲಿರುವಂತೆ ಟೆಂಡರ ಪ್ರಕಟಣೆ ಸಂಖ್ಯೆ (1) ರಲ್ಲಿರುವಂತೆ ಯಥಾಸ್ಥಿತಿಯಲ್ಲಿ ಇರುತ್ತವೆ. ಯಾವುದೆ ಬದಲಾವಣೆ ಇರುವುದ್ದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಲಾದ ಅಧಿಕಾರಿಗಳ ಕಚೇರಿಯಲ್ಲಿ ಸಮಯದಲ್ಲಿ ಅಥವಾ http://eproc.karnataka.gov.in/eportal/Index.seam ರಲ್ಲಿ .ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ–585216
ವಾ.ಸಾ.ಸಂ.ಇ/ಯಾದಗಿರಿ/39/ಎಂಸಿ&ಎ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ,
ನಿಮಪೋ ವಿಭಾಗ, ರಾಂಪೂರ (ಪ.ಅ), ತಾ: ಸಿಂದಗಿ, ಜಿ: ವಿಜಯಪುರ.
CIN L 85320 KA 1994 SGC 016101 ದೂರವಾಣಿ ಸಂಖ್ಯೆ: 08488–224328,
ಇ–ಮೇಲ್:kbjnleerampur@gmail.com.

ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–1/2022–23/175 ದಿನಾಂಕ:28.04.2022

ತಿದ್ದುಪಡಿ ಸಂ – 1 (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ: ಕೆಬಿಜೆಎನ್‌ಎಲ್/ಐಬಿಸಿ/ನಿಮಪೋ/ಪಿಬಿ–2/2022–23/65 ದಿನಾಂಕ: 08–04–2022
ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಪಟ್ಟಂತೆ ಮೇಲ್ಕಾಣಿಸಿದ ಟೆಂಡರನ್ನು ಪ್ರಕಟಿಸಲಾಗಿದ್ದು, ಸದರಿ ಟೆಂಡರ ನೋಟಿಫಿಕೇಶನ್‌ನ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದ್ದು, ಮುಂದಿನ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ನಂತರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ,ಐಬಿಸಿ ನಿಮಪೋ ವಿಭಾಗ ರಾಂಪೂರ(ಪಅ)
ವಾಸಾಸಂಇ/ವಿಜಯಪುರ/76/ಎಂಸಿಎ/2022–23

ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ.

ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 05/2022–23/1594. ದಿನಾಂಕ:29/04/2022
ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ **ಹಾನಗಲ್** ಉಪವಿಭಾಗದ ಈ ಕೆಳಗಿನ ಕಾಮಗಾರಿಗಳಿಗಾಗಿ **ಕೆ.ಡ್ಲ್ಯೂ–1,2&3** (ಏಕ–ಲಕೋಟೆ–ದ್ವಿ ಲಕೋಟೆ) ಪದ್ಧತಿಯಲ್ಲಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. **ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು (ಒಟ್ಟು 4 ಕಾಮಗಾರಿಗಳು), 4702–ವಿಶೇಷ ಅಭಿವೃದ್ಧಿ ಯೋಜನೆ ಕಾಮಗಾರಿಗಳು (ಒಟ್ಟು 5 ಕಾಮಗಾರಿಗಳು); 4702– ಏತ ನೀರಾವರಿ ಯೋಜನೆ ಕಾಮಗಾರಿ (1 ಕನ್ಸಲ್ಟೆಂಟ್ ಕಾಮಗಾರಿ); ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ:70.00 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. 14.00 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ: 2.04 ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ. ಮೊತ್ತ ರೂ 5100/** ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http://eproc.karnataka.gov.in ನಲ್ಲಿ ದಿನಾಂಕ:04/05/2022 ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 09.05.2022 ರೊಳಗಾಗಿ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ: 11.05.2022 ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ/ಆರ್ಥಿಕ ಬಿಡ್‌ನ್ನು ದಿನಾಂಕ: 12.05.2022 ಸಂಜೆ 17.45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೊದನೆ ದೊರೆತ ನಂತರ ತೆರೆಯಲಾಗುವುದು.
ವಿ.ಸೂ:ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–(ವಿನಾಯಕ. ಆರ್.ಹರನಟ್ಟಿ)
ಕಾರ್ಯನಿರ್ವಾಹಕ ಇಂಜಿನೀಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಧಾರವಾಡ.
ವಾ.ಸಾ.ಇ/ಹಾವೇರಿ/43/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಪೊಲೀಸ್ ಮಹಾನಿರ್ದೇಶಕರ ಕಛೇರಿ,
ಕಾರಾಗೃಹ ಮತ್ತು ಸುಧಾರಣಾ ಸೇವೆ ಕರ್ನಾಟಕ ರಾಜ್ಯ
ನಂ.4, ಶೇಷಾದ್ರಿ ರಸ್ತೆ, ಬೆಂಗಳೂರು–560009

ಸಂಖ್ಯೆ: ಎಫ್‌ಎಂಎಸ್/ಸಿಆರ್–04/2022 ದಿನಾಂಕ: 29–04–2022

ಇ–ಟೆಂಡರ್ ನೋಟೀಸ್

ರಾಜ್ಯದ ಕಾರಾಗೃಹಗಳ ಪ್ರಧಾನ ಕಛೇರಿಗೆ ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳನ್ನು ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ ನಿಯಮಗಳ–2000 ರನ್ವಯ ಇ–ಟೆಂಡರ್ ಮೂಲಕ ನೇಮಿಸಿಕೊಳ್ಳಲು ನಿರ್ಧರಿಸಿದೆ.
1. ಟೆಂಡರ್ ಇಂಡೆಂಟ್ ಸಂಖ್ಯೆ: ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ, **ದರಖಾಸ್ತು ವಿವರ:** ರಾಜ್ಯದ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಪ್ರಧಾನ ಕಛೇರಿಗೆ ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳನ್ನು ಇ–ಟೆಂಡರ್ ಮೂಲಕ ನೇಮಿಸಿಕೊಳ್ಳುವ ಬಗ್ಗೆ.
ಇ.ಎಂ.ಡಿ ಮೊತ್ತ ರೂ. 67,263/–,
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ.
ಮೇಲ್ಕಂಡ ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಇ–ಖರೀದಿ ಪೋರ್ಟಲ್ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಟೆಂಡರ್‌ದಾರರು ಇ–ಪೋರ್ಟಲ್ ದೂರವಾಣಿ ಸಂಖ್ಯೆ 080– 25501227, 25501216 ಗಳಿಗೆ ಸಂಪರ್ಕಿಸಿ ಸಹಾಯವಾಣಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://eproc.karanataka.gov.in ಪಡೆಯಬಹುದಾಗಿದೆ.

ಸಹಿ/–
ಪೊಲೀಸ್ ಅಧೀಕ್ಷಕರು (ಕಾರಾಗೃಹ)
ಪೊಲೀಸ್ ಮಹಾನಿರ್ದೇಶಕ ರವರ ಪರವಾಗಿ
ಕಾರಾಗೃಹ ಮತ್ತು ಸುಧಾರಣಾ ಸೇವೆ, ಕರ್ನಾಟಕ ರಾಜ್ಯ
DIPR/CP/351/Zenkar/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ./ಟೆಂಡರು/2022–23/151 ದಿನಾಂಕ 29.04.2022

ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್ ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 3054/5054 ಲಂಪ್ ಸಮ್ ಮತ್ತು ಡಿ.ಎಂ.ಎಫ್ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಒಟ್ಟು 04 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.
ಟೆಂಡರ್ ನಮೂನೆಗಳನ್ನು www.eproc.karnataka.gov.in/eportal/index.sseam ಅಂತರ್ಜಾಲದಲ್ಲಿ ದಿನಾಂಖ 28.04.2022 ರಿಂದ ದಿನಾಂಕ 12.05.2022 ರಂದು ಸಂಜೆ 4.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ದಿನಾಂಕ : 12.05.2022 ರ 16.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ ನ್ನು ಆನ್ ಲೈನ್ ನಲ್ಲಿ ದಿನಾಂಕ : 13.05.2022 ರಂದು 17.00 ಗಂಟೆಗೆ ರೆತೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯುನ್ನು (www.eproc.karnataka.gov.in/eportal/index.sseam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬಳ್ಳಾರಿ.

ಕರ್ನಾಟಕ ಸರಕಾರ
ಜಿಲ್ಲಾ ಸರ್ಜನರ ಕಚೇರಿ, ಜಿಲ್ಲಾ ಆಸ್ಪತ್ರೆ, ಉಡುಪಿ–576101
ಕ್ರ.ಸಂ: ಸವಿ:52/60/2021–22 ದಿನಾಂಕ: 29.04.2022

ಮರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಷಯ: ಜಿಲ್ಲಾ ಆಸ್ಪತ್ರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ವಿವಿಧ ಟೆಂಡರುಗಳ ಮರು–ಅಧಿಸೂಚನೆ.
ಜಿಲ್ಲಾ ಆಸ್ಪತ್ರೆಗೆ ಅವಶ್ಯಕತೆ ಇರುವ ಈ ಕೆಳಗಿನ ಟೆಂಡರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರು–ಟೆಂಡರು ಆಹ್ವಾನಿಸಲಾಗಿದೆ.
(1) ಟೆಂಡರ್ ಕ್ರಮಾಂಕ ಹಾಗೂ ದಿನಾಂಕ: ಸವಿ/52/21–22, 29.04.2022, **ಕಾಮಗಾರಿಯ ವಿವರ:**– ನಾನ್ ಕ್ಲಿನಿಕಲ್, ಹೊರಗುತ್ತಿಗೆ ಮೂಲಕ ಗ್ರೂಪ್–ಡಿ ಮತ್ತು ಬಾಹ್ಯ ಮೂಲ ಸೇವೆ, ಅಂದಾಜು ಮೊತ್ತ ರೂ. 90.00 ಲಕ್ಷ ಮಿತಿಯೊಳಗೆ, ಇ.ಎಂ.ಡಿ ಮೊತ್ತ ರೂ. 2,50,000/–, ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **16.05.2022, 4:30 PM**, ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆ ದಿನಾಂಕ ಮತ್ತು ಸಮಯ: **16.05.2022, 4:30PM**, ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **17.05.2022, 10:30AM**
(2) ಟೆಂಡರ್ ಕ್ರಮಾಂಕ ಹಾಗೂ ದಿನಾಂಕ: ಸವಿ/60/21–22, 29.04.2022 **ಕಾಮಗಾರಿಯ ವಿವರ:**– ಪಥ್ಯಾಹಾರ, ಅಂದಾಜು ಮೊತ್ತ ರೂ. 25.00 ಲಕ್ಷ ಮಿತಿಯೊಳಗೆ, ಇ.ಎಂ.ಡಿ ಮೊತ್ತ ರೂ. 50,000/–, ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **16.05.2022, 4:30PM**, ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆ ದಿನಾಂಕ ಮತ್ತು ಸಮಯ: **16.05.2022, 4:30PM**, ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **17.05.2022, 10:30AM**
ಟೆಂಡರಿನ ಶರ್ತ ಮತ್ತಿತರ ವಿವರಗಳನ್ನು **ದಿನಾಂಕ: 29.04.2022** ರಿಂದ ವೆಬ್‌ಸೈಟ್ **www.eproc.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಜಿಲ್ಲಾ ಸರ್ಜನ್,
ಜಿಲ್ಲಾ ಆಸ್ಪತ್ರೆ, ಉಡುಪಿ ಜಿಲ್ಲೆ, ಉಡುಪಿ
ವಾಸಾಇ/ಸನಿಉ/ಎಂಸಿಎ/71/22–23 ದಿ: 30.04.22

ಜಿಲ್ಲಾಧಿಕಾರಿ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಂ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110
ಇಮೇಲ್:dodc_blr@yahoo.co.in, dudc.blrrural@gmail.com

ಸಂ.ಜಿನಕೋ(ಸಿ3)/ವಿವ/137/2016–17 ದಿನಾಂಕ: 25.04.2022

ಟೆಂಡರ್ ಪ್ರಕಟಣೆ–2ನೇ ಕರೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ L.E.D ಇಂಧನ ಕ್ಷಮತೆಯ ಬೀದಿ ದೀಪಗಳ ಅಳವಡಿಕೆ ಮತ್ತು **CCMS** ವ್ಯವಸ್ಥೆ ಸ್ಥಾಪಿಸುವ ಸಲುವಾಗಿ **Concessionaire** ಆಯ್ಕೆ ಮಾಡಲು ಅರ್ಹ ನೊಂದಯಿತ ಸಂಸ್ಥೆಗಳಿಂದ 'ಇ' ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೊಂದಾಯಿತ ಸಂಸ್ಥೆ ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಮಾಹಿತಿಯುನ್ನು 'ಇ' ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ (INDENT NO: DUDC/TECH/CCMS/LEDSLG/CR/65/2021-22/CALL-2) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಸಂಪರ್ಕಿಸಬಹುದಾಗಿದೆ.

Schedule of Bidding Process

Events: 1) Last date and time for receiving queries: **25.05.2022, Time: 4:00 pm. 2)** Venue, Date and time of Pre-Bid Meeting: **09.05.2022, Time: 11:30 am, at Bangalore Rural DC Office. 3)** Last date and time prescribed for submission of ¨Bid(s)(Bid due date): **26.05.2022, Time: 5:00 PM. 4)** Date and time of opening of the technical Bid (s): **28.05.2022, Time: 5:00 PM. 5)** Date and time of opening the Financial Bid (s) of Technically Qualified Bidder (s): **31.05.2022, Time: 5:00 PM. 6)** Validity of Bids: 90 days.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
DIPR/CP/KAVITA/337/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಸರ್ವಜ್ಞನಗರ ವಿಭಾಗ,
ಬಿಬಿಎಂಪಿ, ಪಿಯುಬಿ 7ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–560 001.

ಸಂ: ಕಾಅ/ಸನ/ಟೆಂಡರ್–01/ತಿದ್ದುಪಡಿ–1/2022–23 ದಿನಾಂಕ: 30.04.2022

ತಿದ್ದುಪಡಿ–01

ಟೆಂಡರ್ ಪ್ರಕಟಣೆ ಸಂಖ್ಯೆ: **EE/SGN/E-Proc/TEND/01/2022-23** ದಿನಾಂಕ: **20.04.2022**ರ ಪ್ರಕಟಣೆಯ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಬದಲಾವಣೆ ಮಾಡಲಾಗಿದ್ದು, ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

ಕ್ರ. ಸಂ.	ಪ್ರಕಟಿಸಲಾದ ಕಾಮಗಾರಿ ವಿವರ	ಈಗಾಗಲೇ ನೀಡಿರುವ ದಿನಾಂಕಗಳು		ಪರಿಷ್ಕೃತ ದಿನಾಂಕಗಳು
1	ವಾರ್ಡ್ ಸಂಖ್ಯೆ 23, 24, 30, 27, 28, 29, 49, 59ರಲ್ಲಿ ಅಂತರ್ಜಲ ಮರುಪೂರಣ ಸೌಲಭ್ಯ ಸೇರಿದಂತೆ ಕೊಳವೆಬಾವಿ ಕೊರೆಯುವುದು ಮತ್ತು ಕೊಳವೆ ಮಾರ್ಗಗಳ ಜಾಲದ ಮೂಲಕ ನೀರು ಸರಬರಾಜು ಸೌಲಭ್ಯವನ್ನು ಹೆಚ್ಚಿಸುವುದು.	ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ	25.04.2022	02.05.2022 ಸಂಜೆ 4.00 ಗಂಟೆಯಿಂದ
		ಟೆಂಡರ್ ಡಾಕ್ಯುಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	06.05.2022	13.05.2022 ಸಂಜೆ 4.00 ಗಂಟೆಗೆ
		ಟೆಂಡರ್ ಡಾಕ್ಯುಮೆಂಟ್‌ಗಳನ್ನು ತೆರೆಯುವ ದಿನಾಂಕ	07.05.2022	16.05.2022 ಸಂಜೆ 4.30 ಗಂಟೆಗೆ
		ಪೂರ್ವಭಾವಿ ಸಭೆ ದಿನಾಂಕ	27.04.2022 ಬೆಳಿಗ್ಗೆ 11.30 ಗಂಟೆಗೆ	05.05.2022 ಬೆಳಿಗ್ಗೆ 11.30 ಗಂಟೆಗೆ

ಉಳಿದ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರವರ ಕಚೇರಿ, ಸರ್ವಜ್ಞನಗರ ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:04:2022–23 ದಿನಾಂಕ: 28–04–2022

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2021–2022 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ – 05 ಕಾಮಗಾರಿ, 2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) – 02 ಕಾಮಗಾರಿ, 2021–22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 08 ಕಾಮಗಾರಿ, 2022–23 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 06 ಕಾಮಗಾರಿ, 2020–21 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್– 02 ಕಾಮಗಾರಿ, ಒಟ್ಟು 23 ಕಾಮಗಾರಿಗಳು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ–ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು.
(1) ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಮಾತ್ರ) : 06.05.2022 ಸಮಯ : 11.00 (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 16.05.2022 ಸಮಯ : 16.30 (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 16.05.2022 ಸಮಯ : 17.00 (4) ಬಿಡ್ ತೆರೆಯುವ ದಿನಾಂಕ & ವೇಳೆ : 18.05.2022 ಸಮಯ : 11.00
ಅಲ್ಪಾವಧಿ ಕಾಮಗಾರಿಗಳು : (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ & ವೇಳೆ : 09.05.2022 ಸಮಯ : 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 09.05.2022 ಸಮಯ : 17.00 (3) ಟೆಂಡರ್ ತೆರೆಯುವ ದಿನಾಂಕ & ವೇಳೆ : 11.05.2022 ಸಮಯ : 11.00

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ದಾವಣಗೆರೆ
ವಾಸಾಇ/ದಾವಣಗೆರೆ/87/ಎಂಸಿಎ/2022–23

ಕ್ರೀಡಾಸೌಲಭ್ಯಗಳ ಜೊತೆಯಲ್ಲಿ ಅಥ್ಲೀಟ್‌ಗಳಿಗೆ ವಿದ್ಯಾರ್ಥಿವೇತನ, ಬಹುಮಾನ ಮೊತ್ತ

ಖಾಸಗಿ ವಿವಿ: ಸಾಧನೆಗೆ ಬಲ

• ವಿಕ್ರಂ ಕಾಂತಿಕೆರೆ



ಬೆಂಗಳೂರಿನ ಜೈನ್ ವಿವಿ ಆವರಣದ ಈಜುಕೊಳ –ಪ್ರಜಾವಾಣಿ ಚಿತ್ರ

ಬೆಂಗಳೂರು: ಬೆಂಗಳೂರಿನಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಮೊದಲ ದಿನ ಬೆಳಿಗ್ಗೆಯೇ ಈಜಿನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದ ಬೆಂಗಳೂರಿನ ಶಿವಶ್ರೀಧರ್ ಮಾಧ್ಯಮಗಳ ಜೊತೆ ಮಾತನಾಡುವಾಗ ಮೊದಲು ಜ್ಞಾಪಿಸಿಕೊಂಡದ್ದು ಅವರು ಓದುತ್ತಿರುವ ಕಾಲೇಜು ಮತ್ತು ವಿಶ್ವವಿದ್ಯಾಲಯವನ್ನು.

ಕ್ರೀಡಾಕೂಟದಲ್ಲಿ ಅತಿಹೆಚ್ಚು ಚಿನ್ನ ಗೆದ್ದ ಶಿವಶ್ರೀಧರ್ ಅವರ ಸಾಧನೆಗೆ ಬೆನ್ನೆಲುಬು ಆಗಿ ನಿಂತದ್ದು ಜೈನ್ ವಿಶ್ವವಿದ್ಯಾಲಯ.

‘ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಆದರೆ ನನಗೆ ಜೈನ್ ವಿವಿ ಸಂಪೂರ್ಣ ಬೆಂಬಲ ನೀಡುತ್ತಿದೆ. ವಿದ್ಯಾರ್ಥಿವೇತನ ನೀಡಿ ಎಂಬಿಎ ಪದವಿ ಪೂರೈಸಲು ನೆರವಾಗಿದೆ’ ಎಂದು ಅವರು ಹೇಳಿದ್ದರು.

ಖೇಲೊ ಇಂಡಿಯಾ ಕ್ರೀಡಾಕೂಟದಲ್ಲಿ ಪದಕಗಳನ್ನು ಗೆದ್ದ ಬಹುತೇಕ ಅಥ್ಲೀಟ್‌ಗಳು ಇಂಥದ್ದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು, ಖಾಸಗಿ ವಿವಿಗಳು ಕ್ರೀಡೆಗೆ ನೀಡುತ್ತಿರುವ ಪ್ರೋತ್ಸಾಹಕ್ಕೆ ಸಾಕ್ಷಿ.

ಕರ್ನಾಟಕದಲ್ಲಿ ಕೂಡ ಕ್ರೀಡಾಕ್ಷೇತ್ರದಲ್ಲಿ ಖಾಸಗಿ ವಿವಿಗಳು ಸಾಂಪ್ರದಾಯಿಕ ವಿವಿಗಳ ಸರಿಸಮಾನವಾಗಿ ಮೇಲುಗೈ ಸಾಧಿಸಿವೆ. ಈ ಬಾರಿ ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟಕ್ಕೆ ಆಯ್ಕೆಯಾದವರ ಮೇಲೆ ಕಣ್ಣಾಡಿಸಿದರೆ ಇದು ಖಾತರಿಯಾಗುತ್ತದೆ.

ಮಂಗಳೂರು, ಮೈಸೂರು, ಬೆಂಗಳೂರು ಹಾಗೂ ಬೆಂಗಳೂರು ನಗರ ವಿವಿಗಳಿಂದ ಕ್ರಮವಾಗಿ 96, 43, 29, 23 ಮಂದಿ ಆಯ್ಕೆಯಾಗಿದ್ದರೆ ಜೈನ್ ವಿವಿಯಿಂದ 82 ಮಂದಿ ಅರ್ಹತೆ ಗಳಿಸಿದ್ದಾರೆ. ಇತರ ಖಾಸಗಿ ವಿವಿಗಳಿಂದಲೂ ಉತ್ತಮ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಅರ್ಹತೆ ಪಡೆದುಕೊಂಡಿದ್ದಾರೆ. ಇವರೆಲ್ಲರೂ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಗೆದ್ದು ಬಂದವರು.

‘ಜೈನ್ ಶಿಕ್ಷಣ ಸಂಸ್ಥೆಯು ಶಾಲೆಗಳಿಗೆ ಮಕ್ಕಳನ್ನು ದಾಖಲಿಸಿಕೊಳ್ಳುವಾಗಲೇ ಅವರ ಕ್ರೀಡಾಸಾಮರ್ಥ್ಯದ ಮೇಲೆ ಕಣ್ಣಿಡುತ್ತದೆ. ಇದು ವಿಶ್ವವಿದ್ಯಾಲಯ ಮಟ್ಟದ ವರೆಗೂ ಮುಂದುವರಿಯುತ್ತದೆ. ಇಲ್ಲಿ ಪ್ರತಿಯೊಂದು ಕ್ರೀಡೆಗೆ ವಿಶೇಷ ಮೂಲಸೌಲಭ್ಯಗಳನ್ನು ರೂಪಿಸಿದ್ದು ತರಬೇತಿಗೂ ಪ್ರತ್ಯೇಕ ವ್ಯವಸ್ಥೆ ಇದೆ. ಸ್ಕಾಲರ್‌ಷಿಪ್, ಬಹುಮಾನ ಮೊತ್ತದಂಥ ಪ್ರೋತ್ಸಾಹದೊಂದಿಗೆ ಶುಲ್ಕದಲ್ಲೇ ಲಕ್ಷಾಂತರ ಮೊತ್ತದ ವಿನಾಯಿತಿ ನೀಡಲಾಗುತ್ತಿದೆ’ ಎಂದು ಜೈನ್ ವಿವಿ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಗೋಪಾಲ ನಾಯಕ್ ತಿಳಿಸಿದರು.

ಅಪ್ಪಟ ಬೆಳ್ಳಿ ಪದಕ ಉಡುಗೊರೆ: ತಂತ್ರಜ್ಞಾನ ಮತ್ತು ವೈದ್ಯಕೀಯ ಶಿಕ್ಷಣದ ‘ಕಠಿಣ’ ಪಠ್ಯ ಚಟುವಟಿಕೆಯ ನಡುವೆಯೂ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಲು ಮತ್ತು ಸಾಧನೆ ಮಾಡಲು ರಾಜ್ಯದ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ (ವಿಟಿಯು) ಮತ್ತು ರಾಜೀವಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೌಲಭ್ಯ ಒದಗಿಸಿದೆ.

ಕ್ರೀಡಾಸೌಕರ್ಯಗಳ ಜೊತೆಯಲ್ಲಿ ವೈಯಕ್ತಿಕವಾಗಿ ಆರ್ಥಿಕ ಸೌಲಭ್ಯಗಳನ್ನು ಒದಗಿಸುತ್ತಿವೆ. ಪ್ರಮುಖ ಕೂಟಗಳಲ್ಲಿ ಪದಕ ಗೆದ್ದರೆ ಬಹುಮಾನ ಮೊತ್ತ, ಕ್ರೀಡಾಕೂಟಕ್ಕೆ ತೆರಳುವ ವೆಚ್ಚ ಇತ್ಯಾದಿಗಳಿಂದಾಗಿ ವಿದ್ಯಾರ್ಥಿಗಳ ದೈಹಿಕ ದೃಢತೆ ಕಾಯ್ದುಕೊಳ್ಳಲು ಪ್ರೇರಣೆ ನೀಡುತ್ತಿವೆ.

ವಿಶ್ವೇಶ್ವರಯ್ಯ ವಿವಿ, ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಪದಕಗಳನ್ನು ಗೆದ್ದವರಿಗೆ ಹೆಚ್ಚುವರಿಯಾಗಿ ಅಪ್ಪಟ ಬೆಳ್ಳಿ ಪದಕಗಳನ್ನು ನೀಡುತ್ತಿದೆ. ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದವರಿಗೆ ಕ್ರಮವಾಗಿ 25, 20, 15 ಗ್ರಾಂ ತೂಕದ ಪದಕ ಲಭಿಸುತ್ತದೆ.

‘ಈಜು, ಆರ್ಚರಿ, ಜೂಡೊ, ಚೆಸ್, ಟೇಬಲ್ ಟೆನಿಸ್‌ನಂಥ ಕ್ರೀಡೆಯಲ್ಲಿ ವಿವಿ ಉತ್ತಮ ಸಾಧನೆ ಮಾಡುತ್ತಿದೆ. ವಿದ್ಯಾರ್ಥಿ ವೇತನ, ಬಹುಮಾನ ಕೊಡುವುದರ ಜೊತೆಯಲ್ಲಿ ವಿವಿ ಬ್ಲೂ ಆದವರಿಗೆ ಬೆಲೆಬಾಳುವ ಬ್ಲೇಜರ್ ನೀಡಲಾಗುತ್ತಿದೆ. ಇದರಿಂದ ಕ್ರೀಡಾಪಟುಗಳ ಉತ್ಸಾಹ ಹೆಚ್ಚುತ್ತಿದೆ’ ಎನ್ನುತ್ತಾರೆ ವಿಟಿಯು ಕ್ರೀಡಾ ನಿರ್ದೇಶಕ ಎ.ಜಿ.ಬುಜುರ್ಕೆ

ನಡೆಯದ ಹೊಸ ಪ್ರಯತ್ನ, ‘ದತ್ತು ಪದ್ಧತಿ’ ಮತ್ತೆ ಆರಂಭಿಸಲು ಆಗ್ರಹ

ಸೌಲಭ್ಯಗಳ ಕೊರತೆಯ ವೇದನೆ

• ಪ್ರಮೋದ/ವಿನಾಯಕ ಭಟ್

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವ ಮಣ್ಣಿನ ಅಂಕಣದಲ್ಲಿಯೇ ನಿತ್ಯ ವಿದ್ಯಾರ್ಥಿಗಳ ಅಭ್ಯಾಸ –ಪ್ರಜಾವಾಣಿ ಚಿತ್ರ/ಬಿ.ಎಂ.ಕೇದಾರನಾಥ್

ಹುಬ್ಬಳ್ಳಿ: ಅಥ್ಲೆಟಿಕ್ಸ್‌ನಲ್ಲಿ ಅಪೂರ್ವ ಸಾಧನೆಯಿಂದ ಗುರುತಿಸಿಕೊಳ್ಳುತ್ತಿದ್ದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಈಗ ಸಾಧನೆಯಲ್ಲಿ ಹಿಂದೆಬಿದ್ದಿದೆ. ಕ್ರೀಡಾ ಸೌಲಭ್ಯಗಳ ಕೊರತೆಯನ್ನೂ ಎದುರಿಸುತ್ತಿದೆ.

ಏಳು ದಶಕಗಳಷ್ಟು ಹಳೆಯದಾದ ಕರ್ನಾಟಕ ವಿವಿ ಮೊದಲು ಧಾರವಾಡ, ಹಾವೇರಿ, ಗದಗ, ಬೆಳಗಾವಿ, ಉತ್ತರ ಕನ್ನಡ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ವಿಶಾಲ ವ್ಯಾಪ್ತಿ ಒಳಗೊಂಡಿತ್ತು. 500ಕ್ಕೂ ಹೆಚ್ಚು ಕಾಲೇಜುಗಳಿದ್ದವು. ಈಗ ಅವಿಭಜಿತ ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಷ್ಟೇ ಹೊಂದಿದ್ದು, 350 ಕಾಲೇಜುಗಳಿವೆ. ಹುಬ್ಬಳ್ಳಿಯಲ್ಲಿ ರಾಜ್ಯದ ಏಕೈಕ ಕಾನೂನು ವಿವಿ, ಬೆಳಗಾವಿಯಲ್ಲಿ ರಾಣಿ ಚನ್ನಮ್ಮ ಮತ್ತು ವಿಜಯಪುರದಲ್ಲಿ ಅಕ್ಕಮಹಾದೇವಿ ಮಹಿಳಾ ವಿವಿ ಗಳಿವೆ.

ಈ ಎಲ್ಲಾ ವಿವಿ.ಗಳ ಕ್ರೀಡಾಪಟುಗಳು ಸಿಂಥೆಟಿಕ್ ಟ್ರ್ಯಾಕ್, ವೃತ್ತಿಪರ ತರಬೇತುದಾರರು ಸೇರಿದಂತೆ ಹಲವು ಮೂಲ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ಕ್ರೀಡಾಪಟುಗಳ ಪಾಲ್ಗೊಳ್ಳುವಿಕೆ ಕೂಡ ಕಡಿಮೆಯಾಗಿದೆ. ಅಕ್ಕಮಹಾದೇವಿ ವಿವಿ. ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ಅಂತರ ಕಾಲೇಜುಗಳ ಕಬಡ್ಡಿ ಟೂರ್ನಿ ಆಯೋಜಿಸಿದ್ದಾಗ 148 ಕಾಲೇಜುಗಳ ಪೈಕಿ 14 ತಂಡಗಳಷ್ಟೇ ಪಾಲ್ಗೊಂಡಿದ್ದವು!

ಅಂತರರಾಷ್ಟ್ರೀಯ ಅಥ್ಲೀಟ್ ಬಿ.ಜಿ. ನಾಗರಾಜ, ವಿಲಾಸ್ ನೀಲಗುಂದ, ಅಖಿಲ ಭಾರತ ಅಂತರ ವಿ.ವಿ. ಕ್ರೀಡಾಕೂಟದಲ್ಲಿ ಸಾಧನೆ ಮಾಡಿರುವ ರೇಣುಕಾ ಹಾಗೂ ಸಂತೋಷ ಹೊಸಮನಿ– ಹೀಗೆ ಅನೇಕ ಕ್ರೀಡಾಪಟುಗಳು ಕವಿವಿ ವಿಭಜನೆಗೂ ಮೊದಲು ಅಥ್ಲೆಟಿಕ್ಸ್‌ನಲ್ಲಿ ಸಾಧನೆಯ ಹೊಳಪು ಮೂಡಿಸಿದ್ದರು. ಈಗ ಇಂಥ ಯಾವ ಸಾಧನೆಗಳೂ ಕ.ವಿ.ವಿ ಹಾಗೂ ಹೊಸ ವಿ.ವಿ.ಗಳಿಂದ ಮೂಡಿಬಂದಿಲ್ಲ. ಈಜುಕೊಳ ನಿರ್ಮಿಸುವ ಕನಸು ಕೈಗೂಡಿಲ್ಲ.

ಆದ್ದರಿಂದ ಮೊದಲಿನ ಹಾಗೆ ಕ್ರೀಡಾಪಟುಗಳ ಶೈಕ್ಷಣಿಕ ಹಾಗೂ ಕ್ರೀಡೆಯ ಖರ್ಚು ಭರಿಸಿ ದತ್ತು ಪಡೆಯುವ ಪದ್ಧತಿ ಆರಂಭಿಸಬೇಕು ಎನ್ನುವ ಆಗ್ರಹ ಕ್ರೀಡಾಪಟುಗಳಿಂದ ಕೇಳಿ ಬರುತ್ತಿದೆ. ಕ.ವಿ.ವಿ.ಯಲ್ಲಿ ಕ್ರೀಡಾ ನಿಧಿ ಹಾಗೂ ಕ್ರೀಡಾ ಶುಲ್ಕವೆಂದು ಪ್ರತಿ ವಿದ್ಯಾರ್ಥಿಯಿಂದ ₹50 ಪಡೆಯುತ್ತಿದ್ದಾರೆ. ಹೀಗಾಗಿ ವಿ.ವಿ.ಗೆ ಹೆಚ್ಚು ಹಣವೂ ಸಿಗುತ್ತಿಲ್ಲ. ಬರುವ ಅಲ್ಪ ಹಣ ಕ್ರೀಡಾ ಚಟುವಟಿಕೆಗೆ ಮಾತ್ರವಲ್ಲದೇ; ದಿನಗೂಲಿ ಕಾರ್ಮಿಕರಿಗೆ ವೇತನ ನೀಡಲು ಬಳಕೆಯಾಗುತ್ತಿದೆ ಎನ್ನುವ ಆರೋಪವೂ ಇದೆ.

ಕೊಕ್ಕೊದಲ್ಲಿ ಸಾಧನೆ: ದಾವಣಗೆರೆ ವಿವಿಯ ಕೊಕ್ಕೊ ತಂಡವು ಈಚೆಗೆ ನಡೆದ ಅಂತರ ವಿ.ವಿ. ಕ್ರೀಡಾಕೂಟದಲ್ಲಿ ಕಂಚು ಜಯಿಸಿದೆ. ಕುಸ್ತಿ, ವೇಟ್‌ಲಿಫ್ಟಿಂಗ್‌ನಲ್ಲಿ ಸಾಧನೆ ಮಾಡುತ್ತಿದೆ. ವಿವಿಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಹಾಲವರ್ತಿ ಬಳಿ ವಿ.ವಿ.ಗೆ ಸೇರಿದ 78 ಎಕರೆ ಜಾಗದಲ್ಲಿ ₹ 300 ಕೋಟಿ ವೆಚ್ಚದಲ್ಲಿ ಭಾರತ ಕ್ರೀಡಾ ಪ್ರಾಧಿಕಾರದ ತರಬೇತಿ ಕೇಂದ್ರ ಸ್ಥಾಪಿಸಲು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

ದಾವಣಗೆರೆ ವಿಶ್ವವಿದ್ಯಾಲಯ ವ್ಯಾಪ್ತಿಯ ಕಾಲೇಜುಗಳ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಕ್ರೀಡಾಶುಲ್ಕವು ವರ್ಷಕ್ಕೆ ₹ 45 ಲಕ್ಷದಿಂದ ₹ 50 ಲಕ್ಷದವರೆಗೆ ಆಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

> **ಮಹಿಳಾ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಲು ಮುಂದಿನ ಶೈಕ್ಷಣಿಕ ವರ್ಷದಿಂದ ಕ್ಲಸ್ಟರ್ ಮಟ್ಟದಲ್ಲಿ ಕ್ರೀಡಾಕೂಟ ಆಯೋಜಿಸಲಾಗುವುದು. ಇದರಿಂದ ಆಟಗಾರ್ತಿಯರ ಪ್ರದರ್ಶನ ಗುಣಮಟ್ಟ ಹೆಚ್ಚಾಗುತ್ತದೆ**
>
> **ಡಾ. ಡಿ.ಎಂ. ಜ್ಯೋತಿ** ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಅಕ್ಕಮಹಾದೇವಿ ಮಹಿಳಾ ವಿ.ವಿ.

> **ಸಿಬ್ಬಂದಿ ನೀಡಬೇಕು, ಕ್ರೀಡಾ ಶುಲ್ಕ ಹೆಚ್ಚಿಸಿ ಅದೇ ಹಣದಲ್ಲಿ ಕ್ರೀಡಾ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಕುಲಪತಿಗೆ ಮನವಿ ಮಾಡಿದ್ದೇನೆ. ಅಥ್ಲೆಟಿಕ್ ಸಿಂಥೆಟಿಕ್ ಟ್ರ್ಯಾಕ್ ಮಾಡುವಂತೆಯೂ ಕೋರಿದ್ದೇನೆ.**
>
> **ಬಿ.ಎಂ. ಪಾಟೀಲ,** ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಕ.ವಿ.ವಿ.

ಕ್ರೀಡೆಗಳ ‘ಕಲ್ಯಾಣ’ ಮರೀಚಿಕೆ

• ಸತೀಶ್ ಬಿ.

ತಗ್ಗು ದಿಣ್ಣೆಗಳಿಂದ ಕೂಡಿರುವ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಮೈದಾನ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ರಾಯಚೂರಿನಲ್ಲಿ ಸ್ಥಾಪನೆಯಾಗಿರುವ ರಾಯಚೂರು ವಿಶ್ವವಿದ್ಯಾಲಯಗಳಲ್ಲಿ ಕ್ರೀಡಾಪಟುಗಳ ಸಾಧನೆಗಿಂತ ಸೌಲಭ್ಯ ಕೊರತೆಗಳೇ ಹೆಚ್ಚು ಕಂಡು ಬರುತ್ತಿವೆ.

ಗುಲಬರ್ಗಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ದೈಹಿಕ ಶಿಕ್ಷಣ ಸಹಾಯಕ ನಿರ್ದೇಶಕರ ಮೂರು, ತರಬೇತುದಾರರ ಎರಡು ಹುದ್ದೆಗಳನ್ನು ಎರಡು ವರ್ಷಗಳಿಂದ ಭರ್ತಿ ಮಾಡಿಲ್ಲ. ಅಲ್ಲದೆ, ವಿ.ವಿ ವ್ಯಾಪ್ತಿಯ 350 ಕಾಲೇಜುಗಳ ಪೈಕಿ 200ಕ್ಕೂ ಹೆಚ್ಚು ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಬೋಧಕರ ಹುದ್ದೆಗಳು ಖಾಲಿ ಇವೆ.

2021–22ನೇ ಸಾಲಿನಲ್ಲಿ ವಿ.ವಿಯ ತಂಡಗಳು 15ಕ್ಕೂ ಹೆಚ್ಚು ಅಂತರ ವಿಶ್ವವಿದ್ಯಾಲಯಗಳ ಕ್ರೀಡಾಕೂಟಗಳಲ್ಲಿ ಭಾಗವಹಿಸಿವೆ. ಒಂದರಲ್ಲೂ ಪ್ರಶಸ್ತಿ ಜಯಿಸಲು ಸಾಧ್ಯವಾಗಿಲ್ಲ. ಇದು ಇಲ್ಲಿನ ಸೌಲಭ್ಯಗಳ ಕೊರತೆ ಮತ್ತು ಗುಣಮಟ್ಟದ ತರಬೇತಿ ಸಿಗದಿರುವುದಕ್ಕೆ ಉದಾಹರಣೆ.

ವಿ.ವಿ ಯಲ್ಲಿ ಸಿಂಥೆಟಿಕ್ ಟ್ರ್ಯಾಕ್, ಹಾಕಿ, ಫುಟ್‌ಬಾಲ್ ಮೈದಾನಗಳು ಇಲ್ಲ. ಯಾವುದೇ ಕ್ರೀಡಾಕೂಟಕ್ಕೆ ಹೋಗುವ ಒಂದು ವಾರ ಮುನ್ನ ತರಬೇತಿ ನೀಡಲಾಗುತ್ತದೆ. ಇದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸಿದರೂ ಬರಿಗೈಯಲ್ಲಿ ವಾಪಸ್ ಬರಬೇಕಾಗಿದೆ ಎನ್ನುವುದು ಕ್ರೀಡಾಪಟುಗಳ ಅಳಲು.

ಕಲಬುರಗಿಯ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಾರ್ಯಾರಂಭ ಮಾಡಿ ದಶಕ ಕಳೆದರೂ ದೈಹಿಕ ಶಿಕ್ಷಣ ವಿಭಾಗವನ್ನು ಪೂರ್ಣ ಪ್ರಮಾಣದಲ್ಲಿ ತೆರೆದಿಲ್ಲ. ಒಬ್ಬ ತಾತ್ಕಾಲಿಕ ತರಬೇತುದಾರ ನೇಮಕಗೊಂಡಿದ್ದಾರೆ. ಎರಡು ಒಳಾಂಗಣ ಬ್ಯಾಡ್ಮಿಂಟನ್ ಅಂಕಣಗಳನ್ನು ಬಿಟ್ಟರೆ ಬೇರೆ ಯಾವುದೇ ಸೌಲಭ್ಯ ಇಲ್ಲ.

‘ಪ್ರತಿ ವರ್ಷ ಕ್ರೀಡೆಯಲ್ಲಿ ಆಸಕ್ತಿ ಇರುವವರನ್ನು ಗುರುತಿಸಿ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಕ್ಕೆ ಕಳಿಸಲಾಗುತ್ತದೆ. ತರಬೇತಿ ಇಲ್ಲದ ಕಾರಣ ವಿದ್ಯಾರ್ಥಿಗಳಿಂದ ಯಾವುದೇ ಸಾಧನೆ ಮೂಡಿಬರುತ್ತಿಲ್ಲ’ ಎನ್ನುತ್ತಾರೆ ವಿ.ವಿಯ ಕ್ರೀಡಾ ತರಬೇತುದಾರ ಡಾ.ಚಿದಾನಂದ ಶಿಂಧೆ.

ರಾಯಚೂರು ವಿಶ್ವವಿದ್ಯಾಲಯವು 2021ರಿಂದ ಸ್ವತಂತ್ರ ಕಾರ್ಯನಿರ್ವಹಣೆ ಆರಂಭಿಸಿದ್ದು, ಇದರ ವ್ಯಾಪ್ತಿಯಲ್ಲಿ 224 ಕಾಲೇಜುಗಳಿವೆ. ಸುಮಾರು 100 ಕಾಲೇಜುಗಳಲ್ಲಿ ಮಾತ್ರ ದೈಹಿಕ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯಗಳಿವೆ.

'ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಮಾಸ್ಟರ್ ಪ್ಲಾನ್ ರೂಪಿಸಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ ಅದನ್ನು ಜಾರಿ ಮಾಡುತ್ತೇವೆ' ಎಂದು ರಾಯಚೂರು ವಿಶ್ವವಿದ್ಯಾಲಯ ಕುಲಪತಿ ಡಾ.ಹರೀಶ ರಾಮಸ್ವಾಮಿ ಹೇಳಿದರು.

ಕ್ರೀಡಾ ವಿ.ವಿ ಬೇಕಿದೆ, ಆದರೆ...



ಪ್ರೊ.ಶೇಷಣ್ಣ

ಮೈಸೂರು: ‘ಕ್ರೀಡಾ ಕ್ಷೇತ್ರದಲ್ಲಿ ಬಹಳ ಹಿಂದೆ ಉಳಿದಿರುವ ರಾಜ್ಯಕ್ಕೆ ಕ್ರೀಡಾ ವಿಶ್ವವಿದ್ಯಾಲಯ ಜರೂರಾಗಿ ಬೇಕಿದ್ದು, ಹಲವು ವರ್ಷಗಳಿಂದ ಆ ಕೂಗು ಹಾಗೇ ಇದೆ. ಆದರೆ, ಕ್ರೀಡೆಯ ತಲೆಬುಡವೇ ಗೊತ್ತಿಲ್ಲದ ಅಧಿಕಾರಿಗಳನ್ನು, ಶಿಫಾರಸು, ಪ್ರಭಾವ, ಹಣದಾಸೆಗೆ ಮಣಿದು ನೇಮಿಸಿದರೆ ಹತ್ತರಲ್ಲಿ ಹನ್ನೊಂದನೇ ವಿಶ್ವವಿದ್ಯಾಲಯವಾಗುತ್ತದೆ ಅಷ್ಟೇ. ಹೀಗಾಗಿ, ಯೋಚಿಸಿ ಯೋಜನೆ ರೂಪಿಸಬೇಕು’

–ಕ್ರೀಡೆಯಲ್ಲಿ 50 ವರ್ಷಗಳಿಗೂ ಹೆಚ್ಚು ಕಾಲ ಬೋಧನೆ, ತರಬೇತಿಯಲ್ಲಿ ತೊಡಗಿಸಿಕೊಂಡಿರುವ ಕ್ರೀಡಾ ತಜ್ಞ ಪ್ರೊ.ಶೇಷಣ್ಣ ಅವರ ಸ್ಪಷ್ಟ ಮಾತುಗಳಿವು. ಅವರೊಂದಿಗಿನ ಸಂದರ್ಶನ ಇಲ್ಲಿದೆ.

• **ರಾಜ್ಯಕ್ಕೆ ಕ್ರೀಡಾ ವಿಶ್ವವಿದ್ಯಾಲಯ ಅಗತ್ಯವಿದೆಯೇ?**

ಕ್ರೀಡಾಪಟುಗಳನ್ನು ವೈಜ್ಞಾನಿಕವಾಗಿ ಸಜ್ಜುಗೊಳಿಸಲು ಒಂದು ವ್ಯವಸ್ಥೆ ಇರಬೇಕು. ವಿದೇಶಗಳಲ್ಲಿ ಕ್ರೀಡಾಳುಗಳ ಸಾಧನೆಗೆ ಈ ಅಂಶವೂ ಪ್ರಧಾನ ಕಾರಣ. ಕ್ರೀಡಾಳುವಿನ ಶರೀರದ ರಚನೆಯು ಕ್ರೀಡೆಗೆ ಪೂರಕವಾಗಿದೆಯೇ ಎಂಬುದನ್ನು ಆರಂಭದಲ್ಲೇ ಗುರುತಿಸಬೇಕಿದೆ. ಕ್ರೀಡಾ ಮನೋವಿಜ್ಞಾನ, ಕ್ರೀಡಾ ಗಾಯ ನಿರ್ವಹಣೆ, ಪೋಷಕಾಂಶಕ್ಕೆ ಒತ್ತು ಕೊಡಬೇಕಿದೆ. ಕ್ರೀಡಾಪಟುವಿನ ದೇಹರಚನೆ, ಚಲನೆ ಪತ್ತೆ ಹಚ್ಚಲು ಅತ್ಯಾಧುನಿಕ ಕ್ಯಾಮೆರಾ, ಪ್ರಯೋಗಾಲಯ, ಉಪಕರಣಗಳು ಅಗತ್ಯವಿದೆ. ಇದೆಲ್ಲಾ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆಯಿಂದ ಈಡೇರಲಿದೆ.

• **ಈಗಿರುವ ಕ್ರೀಡಾ ವ್ಯವಸ್ಥೆ, ತರಬೇತಿ ವಿಧಾನ ಸರಿ ಇಲ್ಲವೇ?**

ಈಗಿನ ವಿಧಾನವೆಲ್ಲ ಅವೈಜ್ಞಾನಿಕ. ತರಬೇತುದಾರರು ತಮ್ಮ ತಿಳಿವಳಿಕೆ, ಅನುಭವವನ್ನಷ್ಟೇ ಆಧರಿಸಿ ತರಬೇತಿ ನೀಡುತ್ತಿದ್ದಾರೆ. ಖಾಸಗಿ ಕ್ಲಬ್, ಸಂಘ ಸಂಸ್ಥೆಗಳು, ಸರ್ಕಾರ ಪ್ರಾಯೋಜಿಸುವ ಸಂಸ್ಥೆಗಳು ಕ್ರೀಡಾ ತರಬೇತಿಯಲ್ಲಿ ತಾಂತ್ರಿಕ ವಿಧಾನ ಅಳವಡಿಸಿಕೊಂಡಿಲ್ಲ. ಪರಿಕರಗಳೂ ಇಲ್ಲ. ಕ್ರೀಡಾಪಟುಗಳ ಸಾಮರ್ಥ್ಯವನ್ನೂ ಸರಿಯಾಗಿ ಅಳೆಯುತ್ತಿಲ್ಲ. ಹೀಗಾಗಿ, ಕ್ರೀಡಾಪಟುವಿನ ಪ್ರದರ್ಶನ ಮಟ್ಟದಲ್ಲಿ ಸುಧಾರಣೆಯೇ ಕಾಣುತ್ತಿಲ್ಲ. ಹಣ ವ್ಯರ್ಥವಾಗುತ್ತಿದೆ.

• **ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆಯಿಂದ ದೊಡ್ಡ ಸಾಧನೆ ಮೂಡಿಬರಲಿದೆಯೇ?**

ವಿಶ್ವವಿದ್ಯಾಲಯ ಸ್ಥಾಪಿಸಿದ ಕೂಡಲೇ ಉತ್ತಮ ಫಲಿತಾಂಶಕ್ಕಾಗಿ ಒತ್ತಡ ಹೇರಬಾರದು. ವರ್ಷಾನುಗಟ್ಟಲೇ ಕಾಯುವ ತಾಳ್ಮೆ ಇರಬೇಕು. ಸೌಲಭ್ಯ, ಪರಿಕರ ಒದಗಿಸಬೇಕು. ಹಾಸ್ಟೆಲ್ ನಿರ್ಮಿಸಿ ಸರಿಯಾದ ಪೋಷಕಾಂಶ ಕೊಡದಿದ್ದರೆ ಕ್ರೀಡಾಪಟುಗಳಿಂದ ಏನನ್ನೂ ನಿರೀಕ್ಷಿಸಲಾಗದು. ಸಂಸ್ಕೃತ, ಸಂಗೀತ, ಜಾನಪದ ವಿಶ್ವವಿದ್ಯಾಲಯಗಳ ದುಸ್ಥಿತಿ, ಅವುಗಳ ಕೊಡುಗೆ ಏನೆಂಬುದು ನಮಗೆ ಈಗಾಗಲೇ ಗೊತ್ತಾಗಿದೆ.

• **ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಿದರೆ ಮೊದಲ ಆದ್ಯತೆ ಏನಿರಬೇಕು?**

ಅಧಿಕಾರಿಗಳು, ತರಬೇತುದಾರರು, ಸಿಬ್ಬಂದಿ ಆಯ್ಕೆಯಲ್ಲಿ ಬಹಳ ಎಚ್ಚರ ವಹಿಸಬೇಕು. ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟು, ಸಂಶೋಧಕರಿಗೆ ಆದ್ಯತೆ ನೀಡಬೇಕು. ಪಾಂಡಿತ್ಯವುಳ್ಳವರನ್ನು ನೇಮಿಸಬೇಕು. ಶಿಕ್ಷಣದ ಬಗ್ಗೆ ಅರಿವಿಲ್ಲದ ರಾಜಕೀಯ ವ್ಯಕ್ತಿಗಳು ಈಗ ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಸದಸ್ಯರಾಗುತ್ತಿದ್ದಾರೆ. ಕ್ರೀಡೆಗೆ ಸಂಬಂಧವಿಲ್ಲದವರನ್ನು ನೇಮಿಸಿದರೆ ಉದ್ದೇಶವೇ ಹಾಳಾಗುತ್ತದೆ. ಕ್ರೀಡಾಪಟುಗಳ ಗೋಳು ಮುಂದುವರಿಯುತ್ತದೆ. ಈ ಆತಂಕ ನನ್ನಲ್ಲಿದೆ.

ಕಾಟಾಚಾರದ ‘ಕ್ರೀಡಾ ನೀತಿ’ ಬೇಡ

• ಮಹೇಶ್ ಎಸ್ ಕನ್ನೇಶ್ವರ

ಮಂಗಳೂರು: ರಾಜ್ಯದಲ್ಲಿಯೇ ಮೊದಲ ಬಾರಿಗೆ ಮಂಗಳೂರು ವಿಶ್ವವಿದ್ಯಾಲಯವು ‘ಕ್ರೀಡಾ ನೀತಿ’ ಜಾರಿಗೊಳಿಸಿದೆ. ಕ್ರೀಡೆಗೆ ವಿಶೇಷ ಪ್ರೋತ್ಸಾಹ ನೀಡುವ ಮೂಲಕ 'ಕ್ರೀಡಾ ಪೋಷಕ್' ಪ್ರಶಸ್ತಿ ಪಡೆದ ವಿವಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆ ಸೇರಿದಂತೆ ಒಟ್ಟು 215 ಪದವಿ ಕಾಲೇಜುಗಳು ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುತ್ತವೆ. 38 ಸರ್ಕಾರಿ, 133 ಅನುದಾನರಹಿತ, 44 ಅನುದಾನಿತ ಕಾಲೇಜುಗಳು ಇವೆ. ವಿವಿ ಕ್ರೀಡಾ ನೀತಿಗಳನ್ನು ಪಾಲಿಸುವ ಜತೆಗೆ ಸಕಾಲದಲ್ಲಿ ಪದವಿ ಕಾಲೇಜುಗಳು ಕ್ರೀಡಾ ಚಟುವಟಿಕೆಗೆ ವಿಶೇಷ ಆದ್ಯತೆ ನೀಡಲು ನಿಯಮ ಜಾರಿಗೆಗೊಳಿಸಿದೆ. ಆದರೆ, ಕೆಲ ಪದವಿ ಕಾಲೇಜುಗಳು ಕ್ರೀಡೆಗೆ ಅತಿ ಅಗತ್ಯವಾಗಿ ಬೇಕಾಗಿರುವ ಕ್ರೀಡಾಂಗಣ ಕೊರತೆಯಿಂದಾಗಿ ಕ್ರೀಡಾ ಚಟುವಟಿಕೆಗಳಲ್ಲಿ ಹಿಂದೆಬಿದ್ದಿವೆ.

‘ವಿವಿ ವ್ಯಾಪ್ತಿಯಲ್ಲಿ ಕ್ರೀಡಾ ನೀತಿ ಜಾರಿಗೆ ಬಂದಿದ್ದರೂ ಎಲ್ಲ ಕಾಲೇಜುಗಳಲ್ಲಿ ಕ್ರೀಡಾ ಚಟುವಟಿಕೆ ಕಷ್ಟ, ಶೈಕ್ಷಣಿಕ ಚಟುವಟಿಕೆಗೆ ಆದ್ಯತೆ ನೀಡುತ್ತವೆ. ಕ್ರೀಡಾಂಗಣ ಕೊರತೆ, ಅನುದಾನದ ಕೊರತೆಯೂ ಅವುಗಳನ್ನು ಬಾಧಿಸುತ್ತಿವೆ. ಅನುದಾನಿತ ಕಾಲೇಜುಗಳು ಸ್ವಲ್ಪ ಮಟ್ಟಿಗೆ ಆದ್ಯತೆ ನೀಡುತ್ತಿವೆ, ಆದರೆ ಅನುದಾನರಹಿತ ಕಾಲೇಜಿನಲ್ಲಿ ಇಂತಹ ಚಟುವಟಿಕೆ ಕಡಿಮೆ ಆಗುತ್ತಿವೆ ’ ಎಂದು ವಿವಿ ಕುಲಪತಿ ಪ್ರೊ. ಪಿ.ಎಸ್. ಯಡಪಡಿತ್ತಾಯ ಹೇಳಿದರು.

‘ವಿವಿ ಹಾಗೂ ಕ್ರೀಡೆಗೆ ಸಂಬಂಧಿಸಿದಂತೆ ಸರ್ಕಾರದ ಧೋರಣೆಗಳೇ ಸರಿಯಿಲ್ಲ. ಕ್ರೀಡೆಯಲ್ಲಿ ಪದಕ ಪಡೆದವರೂ, ರಾಜ್ಯ, ರಾಷ್ಟ್ರ, ಅಂತರ ರಾಷ್ಟ್ರ, ಅಂತರ ವಿವಿ ಕ್ರೀಡೆಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸುವ ಕೆಲಸ ಆಗುತ್ತಿಲ್ಲ. ಹೆಚ್ಚುವರಿ (ಗ್ರೇಸ್) ಅಂಕ ನೀಡುವ ವ್ಯವಸ್ಥೆ ಜಾರಿಗೆ ಬರಬೇಕು. ಸರ್ಕಾರಿ ಕಾಲೇಜುಗಳಲ್ಲಿನ ನಕಾರಾತ್ಮಕ ಧೋರಣೆ, ಸೌಲಭ್ಯ, ಅನುದಾನ ಕೊರತೆ ನೆಪದಿಂದ ಮಕ್ಕಳು ಕ್ರೀಡೆಯಿಂದ ವಂಚಿತರಾಗುತ್ತಿದ್ದಾರೆ. ದುಡ್ಡಿಲ್ಲದೆ ಮಾಡುವಂತಹ ಕ್ರೀಡೆಗಳು ಇವೆ. ರಾಜ್ಯ ಸರ್ಕಾರ ಅಸೋಸಿಯೇಷನ್, ವಿವಿಗಳ ಬೆಂಬಲ ಇಲ್ಲದೇ ಇದ್ದರೆ ಕ್ರೀಡೆ ಉದ್ಧಾರ ಆಗುವುದಾದರೂ ಹೇಗೆ? ಬೇರೆ ವಿವಿಗಳಲ್ಲಿ ಸಾಧ್ಯವಾಗುವುದು ನಮ್ಮಲ್ಲಿ ಏಕೆ ಸಾಧ್ಯ ಆಗುತ್ತಿಲ್ಲ. ಖಾಸಗಿ ಕಾಲೇಜುಗಳಿಗೆ ಪ್ರೋತ್ಸಾಹ ಸಿಗಬೇಕು, ಕ್ರೀಡಾ ನೀತಿ ಕಾಟಾಚಾರಕ್ಕೆ ಎಂಬಂತೆ ಆಗಬಾರದು’ ಎಂದು ಆಳ್ವಾಸ್ ಶಿಕ್ಷಣ ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೇಳುತ್ತಾರೆ.

ಹೆಚ್ಚಿದ ವಿ.ವಿ, ಸೊರಗಿದ ಕ್ರೀಡೆ

ಒಂದನೇ ಪುಟದಿಂದ

ಜ್ಞಾನಭಾರತಿಯಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಇಂತಹ ಅನುಕೂಲವಿದೆ. ಇದೇ ಆವರಣದಲ್ಲಿಯೇ ಸಾಯ್ ಕ್ಯಾಂಪಸ್ ಇದೆ. ರಾಷ್ಟ್ರೀಯ ತಂಡಗಳ ಶಿಬಿರಗಳು ಇಲ್ಲಿ ನಿರಂತರವಾಗಿ ನಡೆಯುತ್ತವೆ. ಸದ್ಯ ನಡೆಯುತ್ತಿರುವ ವಾರ್ಸಿಟಿ ಖೇಲೊ ಇಂಡಿಯಾ ಕ್ರೀಡಾಕೂಟದಲ್ಲಿ ಬೆಂಗಳೂರು ವಿವಿ ಹಾಕಿ ತಂಡದಲ್ಲಿ ಮಿಂಚುತ್ತಿರುವ ಹರೀಶ ಮುತಗಾರ್ ಭಾರತ ಜೂನಿಯರ್ ತಂಡದ ಆಟಗಾರ. ಸಾಯ್‌ನಲ್ಲಿ ತರಬೇತಿ ಪಡೆದವರು. ಆದರೆ, ಇದರಿಂದ ವಿಭಜನೆಗೊಂಡ ಬೆಂಗಳೂರು ವಿವಿ ಮತ್ತು ಬೆಂಗಳೂರು ಉತ್ತರ ವಿವಿಗಳಲ್ಲಿ ಇನ್ನೂ ಮೂಲಸೌಲಭ್ಯಗಳು ಅಭಿವೃದ್ಧಿಯಾಗಬೇಕು.

ರಾಜ್ಯದ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ವಿಶೇಷ ಆಸ್ಥೆ ವಹಿಸಿವೆ. ಅದರಲ್ಲಿ ಜೈನ್ ವಿಶ್ವವಿದ್ಯಾಲಯ, ಮೂಡಬಿದರೆಯ ಆಳ್ವಾಸ್ ಶಿಕ್ಷಣ ಸಂಸ್ಥೆ ಪ್ರಮುಖವಾಗಿವೆ. ಜೂನಿಯರ್ ಹಂತದಲ್ಲಿ ಸಾಧನೆ ಮಾಡಿದ ಪ್ರತಿಭಾನ್ವಿತರನ್ನು ಆಯ್ಕೆ ಮಾಡಿ ಶಿಕ್ಷಣ, ಸೌಲಭ್ಯಗಳನ್ನು ನೀಡುತ್ತವೆ. ಕ್ರಿಕೆಟಿಗ ರಾಬಿನ್ ಉತ್ತಪ್ಪ, ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ, ಟೆನಿಸ್ ಪಟು ರೋಹನ್ ಬೋಪಣ್ಣ, ಒಲಿಂಪಿಯನ್ ಈಜುಪಟು ಶ್ರೀಹರಿ ನಟರಾಜನ್ ಸೇರಿದಂತೆ ಹಲವರು ಜೈನ್ ವಿವಿಯ ವಿದ್ಯಾರ್ಥಿಗಳಾಗಿದ್ದವರು. ಈಗ ಅವರಲ್ಲಿ ಕೆಲವರು ವಿವಿಯ ಕ್ರೀಡಾಶಾಲೆಯಲ್ಲಿ ಕ್ರೀಡಾ ತರಬೇತಿ ನೀಡುತ್ತಾರೆ. ಆದರೆ ಸರ್ಕಾರದ ವಿಶ್ವವಿದ್ಯಾಲಯಗಳು ಮಾತ್ರ ಇಂತಹ ಅವಕಾಶಗಳನ್ನು ಬಳಸಿಕೊಂಡಿಲ್ಲ.

ಕೇರಳ, ತಮಿಳುನಾಡು, ಒಡಿಶಾ, ತೆಲಂಗಾಣಗಳಲ್ಲಿ ಶಾಲೆ, ವಿಶ್ವವಿದ್ಯಾಲಯಮಟ್ಟದಲ್ಲಿ ಕ್ರೀಡೆಗಳಿಗೆ ಅಪಾರ ಪ್ರೋತ್ಸಾಹವಿದೆ. ಅದಕ್ಕಾಗಿಯೇ ಆ ರಾಜ್ಯಗಳಿಂದ ಅಂತರರಾಷ್ಟ್ರೀಯ ಕ್ರೀಡೆಗೆ ಬಹಳಷ್ಟು ಆಟಗಾರರು ಹೋಗುತ್ತಾರೆ. ಅವುಗಳ ಮಾದರಿಯು ನಮ್ಮ ರಾಜ್ಯದಲ್ಲಿಯೂ ಬರುವಂತಾಗಬೇಕು. ಒಲಿಂಪಿಕ್ ಕ್ರೀಡೆಗಳಲ್ಲದ ಆಟಗಳಿಗೂ ಸೌಲಭ್ಯಗಳು ಸಿಗಬೇಕು ಎಂದು ಕರ್ನಾಟಕ ಅಮೇಚೂರ್ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಿ. ಗಿರೀಶ, ಹೇಳಿದರು

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 1-5-1997

• **ಮೇವು ಹಗರಣ: ಯಾರಿಗೂ ರಕ್ಷಣೆ ಇಲ್ಲ– ಗುಜ್ರಾಲ್**

ನವದೆಹಲಿ, ಏ. 30– ಸರ್ಕಾರ ಪಾರದರ್ಶಕವಾಗಿರುತ್ತದೆ; ಯಾವುದೇ ಸಂದರ್ಭದಲ್ಲೂ ತಪ್ಪಿತಸ್ಥರನ್ನು ರಕ್ಷಿಸುವುದಿಲ್ಲ ಮತ್ತು ರಾಜಕೀಯ ದ್ವೇಷ ಸಾಧನೆ ಮಾಡುವುದಿಲ್ಲ ಎಂದು ಪ್ರಧಾನಿ ಇಂದರ್ ಕುಮಾರ್ ಗುಜ್ರಾಲ್ ಅವರು ಸರ್ಕಾರದ ನೀತಿಯನ್ನು ಇಂದು ಲೋಕಸಭೆಯಲ್ಲಿ ಪುನರುಚ್ಚರಿಸಿದರು.

ಬಿಹಾರದ ಪಶುಸಂಗೋಪನಾ ಇಲಾಖೆಯಲ್ಲಿ ನಡೆದಿರುವ ₹ 950 ಕೋಟಿ ಮೇವು ಹಗರಣದ ಸಂಬಂಧ ಇಂದು ಲೋಕಸಭೆಯಲ್ಲಿ ನಡೆದ ಚರ್ಚೆಯ ಕೊನೆಯಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿದ ಅವರು ಏನನ್ನೂ ಹೇಳಲು ಬಯಸಲಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 1-5-1972

• **ಭೂ ಪರಿಮಿತಿ: 10 ಸ್ಟಾಂಡರ್ಡ್ ಎಕರೆಗೆ ಇಳಿಸಲು ಎಂಪಿಸಿಸಿ ಆದೇಶ**

ಬೆಂಗಳೂರು, ಏ. 30– ವಿಶ್ವಾಸ ನೀಡಿದ ಜನತೆಗೆ ತಾನಿತ್ತ ವಚನಪಾಲನೆಯ ಮೊದಲ ಹೆಜ್ಜೆಯಾಗಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಭೂ ಪರಿಮಿತಿಯನ್ನು 27 ಸ್ಟಾಂಡರ್ಡ್ ಎಕರೆಗಳಿಂದ 10 ಸ್ಟಾಂಡರ್ಡ್ ಎಕರೆಗಳಿಗೆ ಇಳಿಸಬೇಕೆಂದು ಇಂದು ರಾಜ್ಯ ಸರ್ಕಾರಕ್ಕೆ ಆದೇಶ ನೀಡಿತು.

ಬೇರೆ ಮೂಲಗಳಿಂದ ಆದಾಯ ಬರುವವರಿಗೆ ಜಮೀನು ಪಡೆಯಲು ಅವಕಾಶವಿರಬಾರದು. ಪ್ಲಾಂಟೇಷನ್‌ಗೂ ಪರಿಮಿತಿ ಅನ್ವಯವಾಗಬೇಕು ಎಂದು ಎಂಪಿಸಿಸಿಯ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮೇ 1, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಪ್ರತಿಪದ್ ಗಂ. 27-26 ನಕ್ಷತ್ರ: ಭರಣಿ ಗಂ. 22-11 ಯೋಗ: ಆಯುಷ್ಮಾನ್ ಗಂ. 15-17, ಕರಣ: ಕಿಂಸ್ತುಘ್ನ ಗಂ. 14-39, ಮೇಷ ಮಾಸದ 17ನೇ ದಿನ. ರಾಹುಕಾಲ: ಸಾಯಂಕಾಲ 04:30–06:00, ಸೂರ್ಯೋದಯ: 06-13 ಸೂರ್ಯಾಸ್ತ: 06-42

ಮುಸ್ಲಿಂ ದಿನಾಂಕ: 29 ರಂಜಾನ್

ದಿನ ವಿಶೇಷ: ಶ್ರೀ ದೇವ ದಾಮೋದರರ ತಿಥಿ (ಅಸ್ಸಾಂ), ಕಾರ್ಮಿಕರ ದಿನಾಚರಣೆ

ಅದೃಷ್ಟ ಸಂಖ್ಯೆ: 2, 5

ಮೇಷ: ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಚರ್ಚೆ ನಡೆಸಿ. ಕೆಲ ನಿರ್ಧಾರಗಳನ್ನು ಬದಲಾಯಿಸಿಕೊಳ್ಳುವಿರಿ. ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರಗಳು ದೊರೆಯುವುದು. ಗಾರ್ಮೆಂಟ್ಸ್ ನೌಕರರಿಗೆ ಹೆಚ್ಚಿನ ಕೆಲಸ.

ವೃಷಭ: ನೂತನವಾಗಿ ನಿರ್ಮಿಸಿರುವ ಮನೆಗಾಗಿ ಅಲಂಕಾರಿಕ ವಸ್ತುಗಳ ಖರೀದಿ. ಆಕಸ್ಮಿಕ ಖರ್ಚು– ವೆಚ್ಚಗಳ ಮೇಲೆ ನಿಗಾ ವಹಿಸುವಿರಿ. ಹೊಸ ವ್ಯವಹಾರವೊಂದರ ಪ್ರಾರಂಭಕ್ಕೆ ಬೇಕಾದ ಮಾಹಿತಿಗಳ ಸಂಗ್ರಹಣೆ ನಡೆಯಲಿದೆ.

ಮಿಥುನ: ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿ. ಸರ್ಕಾರಿ ಗುತ್ತಿಗೆದಾರರಿಗೆ ಬಹಳ ದಿನದಿಂದ ಬಾಕಿ ಇದ್ದ ಕಾಮಗಾರಿ ಹಣ ಮಂಜೂರಾಗಲಿದೆ. ಸಗಟು ಧಾನ್ಯ ವ್ಯಾಪಾರಿಗಳಿಗೆ ಲಾಭ.

ಕರ್ಕಾಟಕ: ಸಂಬಂಧಿಕರು ಹಾಗೂ ಸ್ನೇಹಿತರ ಸಂಪರ್ಕದಿಂದ ಆನಂದ. ಸಂಘ– ಸಂಸ್ಥೆಗಳಲ್ಲಿ ಅಧಿಕಾರ ಹೊಂದಿದವರು ಲೆಕ್ಕ ಪತ್ರಗಳ ಪರಿಶೋಧನೆ ಮಾಡುವುದು ಉತ್ತಮ. ಪ್ರಯಾಣ ಕಾರ್ಯ ಮುಂದೂಡುವುದು ಒಳ್ಳೆಯದು.

ಸಿಂಹ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಒಳಿತು ಉಂಟುಮಾಡುತ್ತದೆ. ಹಾಲು ಉತ್ಪಾದಕರಿಗೆ ಹೆಚ್ಚಿನ ಲಾಭ. ಯಶಸ್ಸು ಹಾಗೂ ಹೆಸರು ನಿಮಗೆ ಒಲಿದು ಬರುವುದು ಕಷ್ಟಕರ ಸಂಗತಿ.

ಕನ್ಯಾ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಇರಲಿದೆ. ಮೂಳೆಗೆ ಸಂಬಂಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ. ಶುಭಕ್ಕಾಗಿ ನವಗ್ರಹಗಳನ್ನು ಆರಾಧಿಸಿ.

ತುಲಾ: ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ಅಧಿಕ ಮಾರಾಟ ಮತ್ತು ವ್ಯವಹಾರದಲ್ಲಿ ಲಾಭ ಇರಲಿದೆ. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿದೆ.

ವೃಶ್ಚಿಕ: ವೃತ್ತಿರಂಗದಲ್ಲಿ ಹಿತೈಷಿಗಳ ಅಥವಾ ಅಕ್ಕಪಕ್ಕದವರ ಮಾತುಗಳನ್ನು ಲೆಕ್ಕಿಸದೇ ಮುನ್ನುಗ್ಗುವುದು ಈ ದಿನ ಸರಿ ಎನಿಸುವುದು. ನಿಮ್ಮ ಮಾರ್ಗದಲ್ಲಿ ಮತ್ತು ಪ್ರಯತ್ನದಲ್ಲಿ ನಿಮಗೆ ನಂಬಿಕೆ ಇರಲಿ.

ಧನು: ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ಕೌಟುಂಬಿಕ ನೆಮ್ಮದಿಗೆ ಕೊರತೆ ಕಾಣುವುದಿಲ್ಲ. ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ.

ಮಕರ: ಯಶಸ್ಸಿಗೆ ಇನ್ನೊಂದಿಷ್ಟು ಪೂರಕವಾದ ವಾತಾವರಣ ಮೂಡಿ ಬರಲಿದೆ. ವಾಹನ ಸಾಂಚಾರದಲ್ಲಿ ಮಿತವೇಗವು ಈ ದಿನ ಮುಖ್ಯವಾಗಿರಲಿ. ನಾಗದೇವರನ್ನು ಆರಾಧಿಸುವುದರಿಂದ ಆರೋಗ್ಯ ಪ್ರಾಪ್ತಿಯಾಗುವುದು.

ಕುಂಭ: ಅನೇಕ ಅಚ್ಚರಿಯ ಸಂಗತಿಯನ್ನು ಎದುರಿಸುವ ಸಾಮರ್ಥ್ಯವನ್ನು ಕೊಡಲು ದೇವರಲ್ಲಿ ಪ್ರಾರ್ಥಿಸಿ. ವಂಶಾಭಿವೃದ್ಧಿಯಾಗಿರುವ ವಿಚಾರದಿಂದ ಸಂತೋಷ. ಆದಾಯದ ಎರಡರಷ್ಟು ಖರ್ಚು ಸಂಭವಿಸಬಹುದು.

ಮೀನ: ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ ಅಥವಾ ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿದೆ. ಈ ಅಸ್ತ್ರವನ್ನು ಉಪಯೋಗಿಸಿಕೊಳ್ಳಿರಿ. ಗೋವುಗಳ ಪಾಲನೆಯಿಂದ ಪುಣ್ಯವು ಪ್ರಾಪ್ತಿಯಾಗುವುದು.

ಪದಬಂಧ 4944

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸೂರ್ಯ ಅಥವಾ ಚಂದ್ರನ ಸುತ್ತಣ ಪ್ರಭೆ (4)
3. ಬಹಿರಂಗ ವ್ಯವಹಾರ (4)
5. ಕರಡಿ ಕಡಿಯಲು ಬಂದಿರುವ ಭಲ್ಲೂಕ (3)
6. ಗ್ರಂಥದ ಮೂಲ ಪ್ರತಿಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
7. ಗಣಪತಿ ಚಿಕ್ಕದಾಗಿ ಮೂಡಿದ್ದಾನಲ್ಲ (3)
9. ಸ್ವಾರಸ್ಯಕರವಾದ ಕಥೆ (3)
11. ಕುದುರೆ ಸವಾರನೀತ (3)
12. ಎಂಜಲು ನೀರಿದು (3)
13. ಈತ ನೈಪುಣ್ಯವುಳ್ಳವನು (4)
15. ತಿಂಡಿಪೋತನನ್ನು ಹೀಗೂ ಕರೆವರು (4)

ಮೇಲಿಂದ ಕೆಳಕ್ಕೆ

1. ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
2. ದಾಖಲೆಗಳಲ್ಲಿ ಗಮನಿಸಬೇಕೆಂದು ಸೇರಿಸುವ ವಿಶೇಷ ಅಂಶ (2)
4. ಯಜಮಾನನ ಹುಟ್ಟುಗುಣ (4)
5. ಕರದಿಂದ ಆರಂಭವಾದ ಉತ್ಸವ (3)
8. ಒಂದೇ ವಿಷಯದಲ್ಲಿ ಬಹಳ ಆಸಕ್ತನಾದವನು (4)
10. ಹೊಗಳು ಪದದ ವಿರುದ್ಧ ಪದ (3)
12. ಗುಣಿಸುವ ಸಂಖ್ಯೆಯಿದು (3)
14. ತತ್ತಿ ಪಡೆಯಲು ಸೇರಿರುವ ಗುಂಪು (2)



4943ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಅಕ್ಕಿ 4.ನಗ್ನ 6.ರತ್ನಾಕರ 7.ಯುವಕ 9.ಸುಸಂಧಿ 10.ನಕಲಿ 12.ಚಾಡಿಕೋರ 13.ಮರ 14.ಹಾವು

ಮೇಲಿಂದ ಕೆಳಕ್ಕೆ: 1.ಬಣ್ಣ 2.ಮಗ್ನ 3.ಅಲ್ಪಾಯು 4.ನರಭಕ್ಷಕ 5.ಬಿಂಕ 6.ರಕ್ತಸಂಚಾರ 8.ವರೋಪಚಾರ 10.ನನ್ನಿ 11.ಲಿಲಾವು 13.ಮಫ್ತಿ 14.ಹಾಯಿ

ಸುಡೊಕು 5330

2		4	1	5			8	
	1			8		5		9
8		3			9		1	
3		9	5		1			
				9				
5		1	6		8			
	7			3	5	2		4
4		5						
	8			6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5329 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾಯೋಚಿತವಾಗಿ ಪಿಎಸ್‌ಐ ಪರೀಕ್ಷೆ ನಡೆದಿಲ್ಲ: ಆದೇಶದಲ್ಲಿ ಉಲ್ಲೇಖ

ಬೆಂಗಳೂರಿನ 7 ಕೇಂದ್ರಗಳಲ್ಲೂ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆ ನಡೆದಿದ್ದ ಬೆಂಗಳೂರಿನ 7 ಕೇಂದ್ರಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಿಐಡಿ ಸಂದೇಹ ವ್ಯಕ್ತಪಡಿಸಿದ್ದು, ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ನೀಡಿದೆ.

'ಬೆಂಗಳೂರಿನ 7 ಕೇಂದ್ರಗಳಲ್ಲಿ ಪರೀಕ್ಷೆ ಬರೆದು ಹುದ್ದೆಗೆ ಆಯ್ಕೆಯಾಗಿದ್ದ 22 ಅಭ್ಯರ್ಥಿಗಳ ಒಎಂಆರ್ ಪ್ರತಿಗಳು ಸಂದೇಹಾಸ್ಪದವಾಗಿರುತ್ತವೆ. ಇದರ ಜೊತೆಯಲ್ಲಿ ಹೆಚ್ಚಿನ ಸಂಖ್ಯೆಯ ಒಎಂಆರ್ ಅಸಲಿ ಹಾಗೂ ಕಾರ್ಬನ್ ಪ್ರತಿಗಳನ್ನು ಪರಿಶೀಲಿಸಲಾಗುತ್ತಿದೆ' ಎಂಬ ಅಂಶವೂ ವರದಿಯಲ್ಲಿವೆ.

ಸಿಐಡಿ ಅಧಿಕಾರಿಗಳು ನೀಡಿರುವ ವರದಿ ಆಧರಿಸಿ ಲಿಖಿತ ಪರೀಕ್ಷೆಯನ್ನೇ ರದ್ದುಪಡಿಸಿರುವ ರಾಜ್ಯ ಸರ್ಕಾರ, ಹೊಸದಾಗಿ ಲಿಖಿತ ಪರೀಕ್ಷೆ ನಡೆಸಲು ಆದೇಶ ಹೊರಡಿಸಿದೆ.

ಆದೇಶದಲ್ಲಿ ಏನಿದೆ?: 'ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿದ್ದಾರೆ. ನೇಮಕಾತಿಯಲ್ಲಿ ಅಕ್ರಮ ಎಸಗಿರುವುದು, ನ್ಯಾಯೋಚಿತವಾಗಿ ನೇಮಕಾತಿ ನಡೆಸದೇ ಇರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಹೀಗಾಗಿ, ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಮರು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ರಾಜ್ಯದ 92 ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆದಿತ್ತು. ಕಲಬುರಗಿ ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದು ಆಯ್ಕೆಯಾಗಿದ್ದ 11 ಅಭ್ಯರ್ಥಿಗಳ ಪೈಕಿ 8 ಮಂದಿ ಅಕ್ರಮದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ.' 'ಅಭ್ಯರ್ಥಿಗಳು, ಶಾಲಾ ಸಿಬ್ಬಂದಿ, ವ್ಯವಸ್ಥಾಪಕರು, ಏಜೆಂಟರು ಹಾಗೂ ಇತರರ ಸಹಕಾರದಿಂದ ಪರೀಕ್ಷೆ ಪ್ರಕ್ರಿಯೆಯನ್ನು ಗಣನೀಯವಾಗಿ ದುರ್ಬಲಗೊಳಿಸಿರುವುದು ಸಿಐಡಿ ವಿಚಾರಣೆ ಹಾಗೂ ತನಿಖೆಯಿಂದ ಗೊತ್ತಾಗಿದೆ. ಜ್ಞಾನಜ್ಯೋತಿ ಪರೀಕ್ಷಾ ಕೇಂದ್ರದ ರೀತಿಯಲ್ಲೇ ಇತರೆ ಪರೀಕ್ಷಾ ಕೇಂದ್ರದಲ್ಲಿ ಅವ್ಯವಹಾರ ನಡೆದಿರುವುದನ್ನು ತಳ್ಳಿಹಾಕಲಾಗುವುದಿಲ್ಲ' ಎಂದೂ ಆದೇಶದಲ್ಲಿ ಹೇಳಲಾಗಿದೆ.

12 ಅಭ್ಯರ್ಥಿಗಳ ಬಂಧನ

ಬೆಂಗಳೂರಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ಎಸಗಿದ್ದ ಆರೋಪದಡಿ 12 ಅಭ್ಯರ್ಥಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಒಎಂಆರ್ ಪ್ರತಿ ತಿದ್ದಿ ಅಕ್ರಮ ಎಸಗಿದ್ದ ಆರೋಪದಡಿ 22 ಮಂದಿ ವಿರುದ್ಧ ಸಿಐಡಿ ಅಧಿಕಾರಿಗಳು ದೂರು ನೀಡಿದ್ದಾರೆ. ಎಫ್ಐಆರ್ ದಾಖಲಿಸಿಕೊಂಡು 12 ಮಂದಿಯನ್ನು ಬಂಧಿಸಲಾಗಿದೆ. ಇನ್ನೂ 10 ಮಂದಿಯ ಬಂಧನ ಆಗಬೇಕಿದೆ. ಈ ಕುರಿತ ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಲಬುರಗಿ ಜ್ಞಾನಜ್ಯೋತಿ ಶಾಲೆಯಲ್ಲಿ ಪರೀಕ್ಷೆ ಬರೆದಿದ್ದ 8 ಅಭ್ಯರ್ಥಿಗಳನ್ನು ಸಿಐಡಿ ಅಧಿಕಾರಿಗಳು ಈಗಾಗಲೇ ಬಂಧಿಸಿದ್ದಾರೆ. ಇದೀಗ 12 ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಪ್ರಕರಣವೂ ಸಿಐಡಿಗೆ ವರ್ಗ ಆಗಲಿದೆ' ಎಂದೂ ತಿಳಿಸಿವೆ.

ಸಾಕ್ಷ್ಯ ನಾಶ ಮಾಡಲು ಮೊಬೈಲ್ ಒಡೆದ ದಿವ್ಯಾ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆಸಿದ ಆರೋಪದಡಿ ಬಂಧಿತರಾದ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ, ಬಂಧಿಸುವ ಮುನ್ನವೇ ತಮ್ಮ ಮೊಬೈಲ್ ಫೋನ್ ಒಡೆದು ಹಾಕಿದ್ದಾರೆ. ಅದರಲ್ಲಿಯ ದಾಖಲೆ ಸಿಗಬಾರದು ಎಂಬ ಉದ್ದೇಶ ದಿಂದ ಈ ರೀತಿ ಮಾಡಿರಬಹುದು ಎಂದು ಸಿಐಡಿ ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ರಾತ್ರಿ ಮಹಾರಾಷ್ಟ್ರದ ಪುಣೆಯ ಬಳಿ ಅವರನ್ನು ಬಂಧಿಸಲು ಸಿಐಡಿ ಅಧಿಕಾರಿಗಳ ತಂಡತೆರಳಿತ್ತು. ದೂರದಿಂದಲೇ ಪೊಲೀಸರನ್ನು ಕಂಡ ದಿವ್ಯಾ, ತಮ್ಮ ಕೈಯಲ್ಲಿದ್ದ ಮೊಬೈಲನ್ನು ಎಸೆದರು. ನೆಲಕ್ಕೆ ಕುಳಿತು ಜೋರಾದ ದನಿಯಲ್ಲಿ ಅಳಲು ಶುರು ಮಾಡಿದರು ಎಂದು ಬಂಧನಕ್ಕೆ ತೆರಳಿದ್ದ ತಂಡದವರು ಮಾಹಿತಿ ನೀಡಿದ್ದಾರೆ. ಆದರೆ, ಎಸೆದ ಮೊಬೈಲ್ ಏನಾಯಿತು? ಅದರ ಒಡೆದ ತುಣುಕುಗಳು, ಸಿಮ್‌ಕಾರ್ಡ್ ಪೊಲೀಸರಿಗೆ ಸಿಕ್ಕಿವೆಯೇ ಇಲ್ಲವೇ ಎಂಬುದು ಸ್ಪಷ್ಟವಾಗಿಲ್ಲ.

ಬೆಳಿಗ್ಗೆಯಿಂದಲೇ ವಿಚಾರಣೆ: ಸಿಐಡಿ ವಶದಲ್ಲಿರುವ ದಿವ್ಯಾ ಅವರನ್ನು ಶುಕ್ರವಾರ ರಾತ್ರಿ ನಗರದ ಮಹಿಳಾ ನಿಲಯದಲ್ಲಿ ಇರಿಸಲಾಗಿತ್ತು. ಶನಿವಾರ ಸಿಐಡಿ ಅಧಿಕಾರಿಗಳು ಐವಾನ್ ಇ ಶಾಹಿ ಅತಿಥಿಗೃಹಕ್ಕೆ ಕರೆತಂದು ವಿಚಾರಣೆ ನಡೆಸಿದರು. ಆದರೆ, 'ನಾನೇನೂ ತಪ್ಪು ಮಾಡಿಲ್ಲ' ಎನ್ನುವುದನ್ನು ಬಿಟ್ಟರೆ ಬೇರೆ ಯಾವುದೇ ವಿಷಯ ಮಾತನಾಡಿಲ್ಲ ಎನ್ನುವುದು ಅಧಿಕಾರಿಗಳ ಹೇಳಿಕೆ.

ಉಡಾಫೆ: ಇಲ್ಲಿನ ಐವಾನ್ ಇ ಶಾಹಿ ಅತಿಥಿಗೃಹದ ಕೋಣೆಯಲ್ಲಿ ನಡೆದ ವಿಚಾರಣೆ ವೇಳೆ, ಶೌಚಕ್ಕಾಗಿ ಪೊಲೀಸ್ ಸಿಬ್ಬಂದಿಯೊಂದಿಗೆ ಹೊರಬಂದಿದ್ದ ಆರೋಪಿ ಸುರೇಶ ಕಾಟೇಗಾಂವ, ಹೊರಗೆ ನಿಂತಿದ್ದ ಮಾಧ್ಯಮದವನ್ನು ಕಂಡು 'ಮಾಡ್ಕೊ ಮಾಡ್ಕೊ ಚೆನ್ನಾಗಿ ಮಾಡ್ಕೊ... (ವಿಡಿಯೊ ಚೆನ್ನಾಗಿ ಮಾಡು)' ಎಂದು ಲೇವಡಿ ಮಾಡುವ ರೀತಿಯಲ್ಲಿ ಹೇಳಿದರು.

ಎ.ಸಿ ಹಾಕಿಸಿ ಎಂದ ಬೆಂಬಲಿಗರು: ದಿವ್ಯಾ, ಅರ್ಚನಾ, ಸುನಂದಾ ಮತ್ತು ಜ್ಯೋತಿ ಅವರನ್ನು ಶುಕ್ರವಾರ ರಾತ್ರಿ ನಗರದ ಮಹಿಳಾ ನಿಲಯದಲ್ಲಿ ಇರಿಸಲು ಕರೆದೊಯ್ಯಲಾಯಿತು. ಅಷ್ಟೊತ್ತಿಗೆ ಅಲ್ಲಿಗೆ ಬಂದಿದ್ದ ದಿವ್ಯಾ ಅವರ ಕೆಲವು ಬೆಂಬಲಿಗರು, 'ಈ ನಿಲಯದಲ್ಲಿ ಫ್ಯಾನ್ ಮಾತ್ರ ಇದೆ. ಬೇಸಿಗೆಯಲ್ಲಿ ಅವರಿಗೆ ಕಷ್ಟವಾಗುತ್ತದೆ. ಕೂಲರ್ ಅಥವಾ ಎ.ಸಿ ವ್ಯವಸ್ಥೆ ಮಾಡಿ' ಎಂದು ಅಧಿಕಾರಿಗಳಿಗೆ ಮನವಿ ಮಾಡಿದರು.

ಮರುಪರೀಕ್ಷೆಗೆ ಕಾರಣ ಹೇಳಿ: ಸಿದ್ದರಾಮಯ್ಯ ಆಗ್ರಹ

ಬೆಂಗಳೂರು/ಮೈಸೂರು: 'ಪಿಎಸ್‌ಐ ಮರು ಪರೀಕ್ಷೆ ನಡೆಸುವ ನಿರ್ಧಾರಕ್ಕೆ ಬೆಂಬಲ ಇದೆ. ಅಕ್ರಮ ಎಸಗಿದವರು ಯಾರು? ಪ್ರಾಮಾಣಿಕರು ಯಾರೆಂಬುದು ಗೊತ್ತಾಗುವುದಿಲ್ಲ. ಹೀಗಾಗಿ, ಮರು ಪರೀಕ್ಷೆ ಮಾಡುವುದೇ ಸರಿ. ಜತೆಗೆ, ಹೈಕೋರ್ಟ್ ನ್ಯಾಯಮೂರ್ತಿಗಳ ಮೇಲುಸ್ತುವಾರಿಯಲ್ಲಿ ತನಿಖೆ ನಡೆಸಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಪಾದಿಸಿದರು.

'ಆದರೆ, ಯಾವ ಆಧಾರದ ಮೇಲೆ ಮರುಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎನ್ನುವುದನ್ನು ಮುಖ್ಯಮಂತ್ರಿ ಸ್ಪಷ್ಟಪಡಿಸಬೇಕು. ಅಕ್ರಮ ನಡೆದಿರುವುದು ಸಿಐಡಿ ತನಿಖೆಯಿಂದ ಸಾಬೀತಾಗಿದೆಯೇ? ಹಾಗಿದ್ದರೆ ಆ ವರದಿ ಬಿಡುಗಡೆ ಮಾಡಿ' ಎಂದೂ ಅವರು ಒತ್ತಾಯಿಸಿದರು

'ಮರುಪರೀಕ್ಷೆಯ ನಿರ್ಧಾರ ಪ್ರಾಮಾಣಿಕ ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸುವುದಕ್ಕೋ ಅಥವಾ ಹಗರಣವನ್ನು ಮುಚ್ಚಿಹಾಕಿ ದೊಡ್ಡ ತಲೆಗಳನ್ನು ಉಳಿಸಲಿಕ್ಕಾಗಿಯೇ? ಹಗರಣದ ಸೂತ್ರಧಾರಿ ದಿವ್ಯಾ ಹಾಗರಗಿ ಬಂಧನದ ತಕ್ಷಣ ಮರುಪರೀಕ್ಷೆ ನಿರ್ಧಾರದ ಹಿಂದಿನ ರಹಸ್ಯವೇನು. ಆಕೆಯ ಹೇಳಿಕೆಯಲ್ಲಿ ಅಂಥ ಸ್ಫೋಟಕ ಸಂಗತಿ ಏನಿದೆ' ಎಂದು ಪ್ರಶ್ನಿಸಿದ್ದಾರೆ.

'ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕಾದರೆ ಆರೋಪಿ ಅಧಿಕಾರಿಗಳಿಗೆ ರಕ್ಷಣೆ ನೀಡುತ್ತಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಸಂಪುಟದಿಂದ ತಕ್ಷಣ ವಜಾಗೊಳಿಸಬೇಕು' ಎಂದೂ ಆಗ್ರಹಿಸಿದ್ದಾರೆ.

'ರಾಜ್ಯ ಸರ್ಕಾರವೇ ಅಡಿಯಿಂದ ಮುಡಿವರೆಗೆ ಭ್ರಷ್ಟಗೊಂಡಿರುವಾಗ ಪಿಎಸ್‌ಐ ನೇಮಕಾತಿ ಹಗರಣದ ಸಿಐಡಿ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಾರದು. ಹೈಕೋರ್ಟ್ ನ್ಯಾಯಮೂರ್ತಿಯ ಮೇಲುಸ್ತುವಾರಿಯ ತನಿಖೆಯೊಂದೇ ಪರಿಹಾರ' ಎಂದು ಪ್ರತಿಪಾದಿಸಿದ್ದಾರೆ.

ಆಡಳಿತ ಪಕ್ಷದ ನಾಯಕರ ರಕ್ಷಣೆಗೆ ಪ್ರಯತ್ನ: ಡಿಕೆಶಿ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಪೂರ್ಣಗೊಳ್ಳುವ ಮೊದಲೇ ಪರೀಕ್ಷೆ ರದ್ದು ಮಾಡಿ ಮರುಪರೀಕ್ಷೆಗೆ ಆದೇಶಿಸಿರುವ ಸರ್ಕಾರದ ನಡೆ, ಅಕ್ರಮದಲ್ಲಿ ಭಾಗಿಯಾಗಿರುವ ಆಡಳಿತ ಪಕ್ಷದ ನಾಯಕರ ರಕ್ಷಣೆಯ ಪ್ರಯತ್ನವಾಗಿದೆ. ಇದರಿಂದ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಪಾಸಾದವರಿಗೆ ಅನ್ಯಾಯವಾಗುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಸರ್ಕಾರದ ಎಲ್ಲ ನೇಮಕಾತಿ ಪ್ರಕ್ರಿಯೆಯಲ್ಲೂ ಭ್ರಷ್ಟಾಚಾರ, ಅಕ್ರಮ, ಹಗರಣಗಳ ಸರಮಾಲೆ ಇದೆ. ಪಿಡಬ್ಲ್ಯುಡಿ, ಶಿಕ್ಷಣ ಇಲಾಖೆ ಸೇರಿದಂತೆ ಅನೇಕ ಕಡೆಗಳಲ್ಲಿ ಅಕ್ರಮವಾಗಿದೆ. ರಾಜ್ಯದಲ್ಲಿ ಯುವಕರ, ಉದ್ಯೋಗಕಾಂಕ್ಷಿಗಳ ಭವಿಷ್ಯಕ್ಕೆ ಕೊಳ್ಳಿ ಇಡಲಾಗುತ್ತಿದೆ' ಎಂದು ದೂರಿದರು.

'ಪಿಎಸ್‌ಐ ಹಗರಣದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂದು ಬಹಿರಂಗವಾಗುವ ಮೊದಲೇ ಈ ಹಿಂದೆ ನಡೆದಿರುವ ಪರೀಕ್ಷೆ ರದ್ದು ಮಾಡಿ ಮರುಪರೀಕ್ಷೆಗೆ ಆದೇಶ ನೀಡಿರುವುದು ಎಷ್ಟರ ಮಟ್ಟಿಗೆ ಸರಿ? ಇದೊಂದು ಬಿಜೆಪಿ ಅಕ್ರಮವಾಗಿದ್ದು, ಬಿಜೆಪಿ ನಾಯಕರ ರಕ್ಷಣೆಗೆ ಪರೀಕ್ಷೆ ರದ್ದುಪಡಿಸಲಾಗಿದೆ' ಎಂದರು.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ವಿಡಿಯೊ ಚಿತ್ರೀಕರಣದ ವೇಳೆ ಅಡ್ವಕೇಟ್ ಕಮಿಷನರ್, ಎರಡೂ ಕಡೆಯ ಕಕ್ಷಿದಾರರು ಮತ್ತು ಒಬ್ಬ ಸಹಾಯಕ ಮಾತ್ರ ಇರಬಹುದು ಎಂದು ತಿಳಿಸಲಾಗಿತ್ತು. ಜ್ಞಾನವಾಪಿ ಮಸೀದಿಯ ಹೊರ ಗೋಡೆಗೆ ತಾಗಿಕೊಂಡೇ ಇರುವ ಶೃಂಗಾರ ಗೌರಿ, ಗಣೇಶ, ಹನುಮಾನ್ ಮತ್ತು ನಂದಿ ವಿಗ್ರಹಗಳಿಗೆ ಪೂಜೆ ನೆರವೇರಿಸುವುದಕ್ಕೆ ಅವಕಾಶ ನೀಡಬೇಕು ಎಂದು ಕೋರಿ ದೆಹಲಿ ಮೂಲದ ರಾಖಿ ಸಿಂಗ್, ಲಕ್ಷ್ಮಿ ದೇವಿ, ಸೀತಾ ಸಾಹು ಮತ್ತು ಇತರರು 2021ರ ಏಪ್ರಿಲ್ 21ರಂದು ಈ ಅರ್ಜಿ ಸಲ್ಲಿಸಿದ್ದರು. ಇಲ್ಲಿನ ದೇವತಾ ವಿಗ್ರಹಗಳಿಗೆ ಯಾವುದೇ ಹಾನಿ ಉಂಟುಮಾಡದಂತೆ ಸೂಚಿಸಬೇಕು ಎಂದು ಕೋರಿದ್ದರು.

ಸಂಕ್ಷಿಪ್ತ ಸುದ್ದಿ

ಪಾಕ್‌ನಲ್ಲಿ ವೈದ್ಯಕೀಯ ಶಿಕ್ಷಣ ಬೇಡ: ಸೂಚನೆ

ನವದೆಹಲಿ(ಪಿಟಿಐ): ಪಾಕಿಸ್ತಾನದ ವೈದ್ಯಕೀಯ ಕಾಲೇಜುಗಳಲ್ಲಿ ಭಾರತೀಯ ವಿದ್ಯಾರ್ಥಿಗಳು ಪ್ರವೇಶ ಪಡೆಯದಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಸೂಚನೆ ನೀಡಿದೆ.

ಭಾರತೀಯ ವಿದ್ಯಾರ್ಥಿಗಳು ಪಾಕಿಸ್ತಾನದ ಯಾವುದೇ ಕಾಲೇಜು ಅಥವಾ ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗದಂತೆ ಯುಜಿಸಿ ಮತ್ತು ಎಐಸಿಟಿಇ ಜಂಟಿ ಸಲಹೆ ನೀಡಿದ ನಂತರ ಎನ್‌ಎಂಸಿ ಈ ಸೂಚನೆ ಹೊರಡಿಸಿದೆ.

ಪ್ರಧಾನಿಗೆ ನಿವೃತ್ತ ಅಧಿಕಾರಿಗಳ ಬಲ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ‘ದ್ವೇಷ ರಾಜಕೀಯ’ದ ಕುರಿತು ಪತ್ರ ಬರೆದ ಕೇಂದ್ರದ 108 ಮಾಜಿ ಅಧಿಕಾರಿಗಳ ಗುಂಪಿನ ಕ್ರಮವನ್ನು ಮಾಜಿ ನ್ಯಾಯಾಧೀಶರು ಮತ್ತು ಮಾಜಿ ಅಧಿಕಾರಿಗಳ ಮತ್ತೊಂದು ಗುಂಪು ಪ್ರಶ್ನಿಸಿ, ತರಾಟೆಗೆ ತೆಗೆದುಕೊಂಡಿದೆ.

ಎಂಟು ಮಾಜಿ ನ್ಯಾಯಾಧೀಶರು, 97 ಮಾಜಿ ಅಧಿಕಾರಿಗಳು ಹಾಗೂ ಸಶಸ್ತ್ರ ಪಡೆಯ 92 ಮಾಜಿ ಅಧಿಕಾರಿಗಳ ಗುಂಪು ಪ್ರಧಾನಿಗೆ ಬರೆದಿರುವ ಪತ್ರದಲ್ಲಿ ಈ ಕುರಿತು ಪ್ರಸ್ತಾಪಿಸಿದ್ದಾರೆ.

ಚಿಕ್ಕಮಗಳೂರಿನ ರಾಜು ನೂತನ ಸೇನಾ ಉಪ ಮುಖ್ಯಸ್ಥ: ಇಂದು ಅಧಿಕಾರ ಸ್ವೀಕಾರ

ಚಿಕ್ಕಮಗಳೂರು: ಸೇನಾ ಸಿಬ್ಬಂದಿಯ ನೂತನ ಉಪಮುಖ್ಯಸ್ಥರಾಗಿ ಬಿ.ಎಸ್. ರಾಜು ಅವರು ಮೇ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ರಾಜು ಅವರು ಅಜ್ಜಂಪುರ ತಾಲ್ಲೂಕಿನ ಬಗ್ಗವಳ್ಳಿಯವರು.

ಬಿ.ಎಸ್. ರಾಜು

ಅವರು ಜನರಲ್ ಮನೋಜ್ ಪಾಂಡೆ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ರಾಜು ಅವರು 38 ವರ್ಷಗಳಿಂದ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸೇನೆಯಲ್ಲಿ ಅಪ್ರತಿಮ ಕಾರ್ಯನಿರ್ವಹಣೆಗೆ ‘ಉತ್ತಮ ಯುದ್ಧ ಸೇವಾ ಪದಕ’ ಈಚೆಗೆ ಸಂದಿತ್ತು.

ರಾಜು ಅವರು, ಸೋಮಶೇಖರ್ ಮತ್ತು ವಿಮಲಾ ದಂಪತಿಯ ಪುತ್ರ. ಕಲುಬುರಗಿ, ಮೈಸೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಅವರು, ವಿಜಯಪುರ ಸೈನಿಕ ಶಾಲೆಯಲ್ಲಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಪಿಯು ಶಿಕ್ಷಣ ಪಡೆದರು. ಕ್ಯಾಲಿಫೋರ್ನಿಯಾದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಿದ್ದಾರೆ.

1984ರಲ್ಲಿ ಜಾರ್ಜ್‌ ರೆಜಿಮೆಂಟ್‌ನಲ್ಲಿ ಆಯ್ಕೆಯಾಗಿ ಸೇನೆಗೆ ಸೇರಿದರು. ಡೆಹ್ರಾಡೂನ್, ಜಮ್ಮು – ಕಾಶ್ಮೀರ, ನವದೆಹಲಿ ಸಹಿತ ವಿವಿಧೆಡೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ರಾಜು ಅವರಿಗೆ ‘ಅತಿ ವಿಶಿಷ್ಟ ಸೇವಾ ಪದಕ’ ಸಹಿತ ಹಲವು ಪುರಸ್ಕಾರಗಳು ಸಂದಿವೆ.

‘ಅವರು ಆರು ತಿಂಗಳು ಅಥವಾ ವರ್ಷಕ್ಕೊಮ್ಮೆ ಊರಿಗೆ ಬರುತ್ತಾರೆ. ಬಗ್ಗವಳ್ಳಿ ಎಂದರೆ ಅವರಿಗೆ ಇಷ್ಟ’ ಎಂದು ತಮ್ಮನ ಮಗ ಬಗ್ಗವಳ್ಳಿಯ ಯಶವಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮನೋಜ್ ಪಾಂಡೆ ಸೇನಾ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಭಾರತೀಯ ಸೇನೆಯ 29ನೇ ಮುಖ್ಯಸ್ಥರಾಗಿ ಜನರಲ್ ಮನೋಜ್ ಪಾಂಡೆ ಅವರು ಶನಿವಾರ ಅಧಿಕಾರ ವಹಿಸಿಕೊಂಡರು. ಈ ಹುದ್ದೆಯಲ್ಲಿದ್ದ ಎಂ.ಎಂ. ನರವಣೆ ಅವರು ಶನಿವಾರ ಸೇವಾ ನಿವೃತ್ತಿಯಾದರು.

ಜನರಲ್ ಪಾಂಡೆ ಅವರು ಈ ಹುದ್ದೆಗೇರಿದ ‘ಕೋರ್ ಆಫ್ ಎಂಜಿನಿಯರ್ಸ್’ನ ಮೊದಲ ಅಧಿಕಾರಿ.

ಪಾಂಡೆಗೆ(ಎಡ) ಅಧಿಕಾರ ಹಸ್ತಾಂತರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Rajarajeshwari Nagar

ನಗರದ ಬಾಗದಲ್ಲಿರುವ ರಾಜರಾಜೇಶ್ವರಿ ನಗರದ ಗಿರಿಧಾಮ ಬಡಾವಣೆ ಗಟ್ಟಿಗೆರೆಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ 2 ಬಿ.ಹೆಚ್. ಕೆ ಪ್ಲಾಟ್ ಗಳು ಮಾರಾಟಕ್ಕಿವೆ.ಅನುಕೂಲಕರ ವ್ಯವಸ್ಥೆಯೊಂದಿಗೆ ತಕ್ಷಣಕ್ಕೆ ಗೃಹ ಪ್ರವೇಶಕ್ಕೆ ಯೋಗ್ಯವಾಗಿದೆ.ಸಂಪರ್ಕಿಸಿ: 9743412669

Farm House/ Land/ Resorts

Out-Station

POULTRY FOR SALE IN DAVANGERE: 60000 layers poultry with all facilities, full automation and areca plantations in beautiful location for Sale. Ph:- 8660574131

Sites

Mysore

CORNER SITE east 300 Sqft Muda First Allottee. posh location Vijayanagar-II Stage Suitable for Shops and PGs. 23 lakhs Contact Raghavendra 9606866368

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ,ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

General

WANTED TAILORS
(Alteration for womens wear)
For prestigious store in Jaynagar, 5th Block, Bengaluru (Near Raghavendra Matta)
Experience: 2 years
CALL
9916175224
9743086594

NGO ದಲ್ಲಿ ಪೂರ್ಣ ಅವಧಿ ಕಾರ್ಯ ನಿರ್ವಹಿಸಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ: 1. ಕ್ಷೇತ್ರ ಸಂಘಟಕರು (Field Organizer): ಕ್ಷೇತ್ರ ಭೇಟಿಯ ಜೊತೆಗೆ (slums) ಸರ್ಕಾರಿ ಹಾಗೂ ಇತರೆ ಸಂಸ್ಥೆ ಗಳೊಂದಿಗೆ ಸಮನ್ವಯ ಮಾಡಿ ಕೊಂಡು ಹೋಗುವುದು. 12 ನೇ ತರಗತಿ ಅಥವಾ ಪದವಿ ಮುಗಿಸಿರಬೇಕು, ಕಂಪ್ಯೂಟರ್ ಬಗ್ಗೆ ತಿಳುವಳಿಕೆ ಇರಬೇಕು, ಕ್ಷೇತ್ರ ಭೇಟಿ ಮಾಡಲು ಸಿದ್ಧರಿರುವ, ಕನ್ನಡ, ತಮಿಳು ಹಾಗೂ ಹಿಂದಿ ಭಾಷೆಯು ತಿಳಿದಿರಬೇಕು. 2 - 3 ವರ್ಷ ಅನುಭವ ಇರುವವರಿಗೆ ಪ್ರಥಮ ಆದ್ಯತೆ. 2.ತರಬೇತಿದಾರರು (Trainer): ಸ್ಲಂ ನಲ್ಲಿರುವ ಮಹಿಳೆ ಯರಿಗೆ ಸರಳ ಭಾಷೆ ಯಲ್ಲಿ ತರಬೇತಿ ನೀಡಲು ಸಕ್ಷಮರಿರುವ 12 ನೇ ತರಗತಿ ಅಥವಾ ಪದವಿ ಮುಗಿಸಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ, 2 - 3 ವರ್ಷ ಗಳ ಅನುಭವ ಇರುವವರಿಗೆ ಮೊದಲ ಆದ್ಯತೆ. ಹೆಚ್ಚಿನ ಮಾಹಿತಿ ಗಾಗಿ ಸಂಪರ್ಕಿಸಿರಿ: 8296082167, 07926587725. Email: info@mahilahsg.org

Wanted

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (Veg & Non-Veg) ಕೆಲಸ ಹಾಗೂ ಮನೆಯ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು 30-40 ವರ್ಷವಾಗಿರಬೇಕು.ಸಂಬಳ 10,000 ಉಚಿತ ಊಟ & ವಸತಿ ಕೊಡಲಾಗುವುದು. 9902817655

ಬೆಂಗಳೂರಿನಲ್ಲಿ ಮತ್ತೊಮ್ಮೆ ಗೋಲ್ಡನ್ ಜಾಬ್ ಆಫರ್- 24 ಗಂಟೆಯ ಮನೆ ಕೆಲಸ (ಗುಡಿಸುವುದು, ಒರೆಸುವುದು, ಅಡುಗೆಮಾಡುವುದು). ಸಂಬಳ- 20,000/- ಬೆಂಗಳೂರು ತಲುಪಲು ಸಾರಿಗೆ ಸೌಲಭ್ಯ, ಬೆಂಗಳೂರಿನಲ್ಲಿರುವ ಮಹಿಳಾ ಹಾಸ್ಟೆಲ್ನಲ್ಲಿ ವಸತಿ ಸೌಲಭ್ಯ, ಪರಿಶೀಲಿಸಿದ ಕುಟುಂಬದಲ್ಲಿ ಕೆಲಸ. ಕರೆ ಮಾಡಿ : 7045875963/ 7045221111

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್ ಹಂಪಿನಗರ, ಬೆಂಗಳೂರು.

ಎಲೆಕ್ಟ್ರಿಷಿಯನ್ಸ್ ಹೆಲ್ಪರ್ಸ್ ಚಾಲಕರು 407/909 ಬೊಲೆರೋಪಿಕ್ (ಎಸಿ ಸಹಿತ) ಮೈಕ್ ಸೆಟ್,ಸೀರಿಯಲ್ ಸೆಟ್ ಜೆನರೇಟರ್ ಆಪರೇಟರ್ಸ್ ತಕ್ಷಣ ಬೇಕಾಗಿದ್ದಾರೆ.ಅನುಭವಸ್ಥರಿಗೆ ಮೊದಲ ಆದ್ಯತೆ.ಸಂಪರ್ಕಿಸಿ: 9743412669

Multiple Vacancy

ಬೇಕಾಗಿದ್ದಾರೆ ಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೆಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ 10,000 ದಿಂದ 12,000 ಟ್ರೈನಿಂಗ್ ಮುಗಿದ ನಂತರ 25,000 ದಿಂದ 50,000ದ ವರೆಗೆ ನೀಡಲಾಗುವುದು. ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Graphic Designers

BANGALORE ONE Magazine:Wanted DTP Operator/Graphic Designer: experience in Coreldraw, Photoshop, Indesign(Kannada-English Typing must): 8088602616, bangaloreonenews@gmail.com

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

EDUCATION CORNER

LAURUS ACADEMY
LEARNERS TO LEADERS
A PIONEER IN NEET, JEE, K-CET, KVPY COACHING
ZENITH +
K-CET - CRASH COURSE PCMB/PCM/PCB
11th May 2022 to 17th June 2022
NEET & JEE - CRASH COURSE
20th May 2022 to 20th June 2022
- Record of transforming 2000+ student's careers as doctors & engineers in just 6 years
- COMMON MAN'S TRUSTED CHOICE
- SUCCESS IS OUR MISSION
- GREAT OPPORTUNITY TO REALIZE YOUR DREAMS
- Best well experienced senior faculty team
- Personal monitoring & guidance through the course
- High quality study material
- SEPARATE HYGIENIC HOSTELS FOR BOYS & GIRLS
- Instant doubt clearing sessions with lot of practice tests
- Coaching & foundation for NEET, JEE, K-CET, KVPY

Smart choice for your Goal
Admissions are open LIMITED SEATS
33/1, Ground Floor, Bangalore Institutions, Byrathi Extension, Hennur Bagalur Main Road, Kothanur Post, Bangalore - 560077
+91 8618761644 / 9110804960 / 6363835520

JSS MAHAVIDYAPEETA, MYSURU
JSS TRAINING INSTITUTE FOR COMPETITIVE EXAMINATIONS
Mobile: 98450 55718, 080-2954 21144 / 2397 0114
Email: jsstc8@gmail.com Website: www.jsstice.in
ADMISSION OPEN
IAS/IPS/KAS
Prelims & Main Examination: 2022-23
Assistant Engineer / Junior Engineer (Civil & Electrical)
Offline & Online Training

ವೈವಾಹಿಕ

Brides Wanted

Kannada

ತುಮಕೂರು ಜಿಲ್ಲೆಯಲ್ಲಿ ವಾಸವಿರುವ ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ವ್ಯಾಪರಸ್ಥ 65ವರ್ಷ ಪ್ರಾಯದವರಿಗೆ 50 ರಿಂದ 55 ವರ್ಷವಯಸ್ಸಿನ ಒಕ್ಕಲಿಗ ಕುಂಚಟಿಗ ಜನಾಂಗದ ವಿಧವೆ ವಿಚ್ಛೇದನ ಅನಾಥ ಮಹಿಳೆ ಸಹ ಬಾಳ್ವೆ ನಡೆಸಲು ಬೇಕಾಗಿದ್ದಾರೆ.ಅವರ ಫೋಟೋ ಮತ್ತು ಬಯೋಡೆಟಾವನ್ನು ಈ ನಂಬರಿಗೆ Whatsapp ಮಾಡುವದು 9845259531, 8217090634

LINGAYATH FAMILY is looking for a bride for their well established 1979 born only son,B.Com +MBA working for Govt.of India in a prominent designation,Father NRI Consultant,Mother Associate Professor (080-6907 4937)

Second Marriage

ಎರಡನೇ ವಿವಾಹದ ವರನಿಗೆ ವಧು ಬೇಕಾಗಿದೆ. 9972127795

Grooms Wanted

Kannada

WE INVITE an educated,cultured alliance for our 29 year old Mudaliyar daughter,MCA/ Working as a Business Analyst, Father Advocate,Mother Consultant (080-6907 4937)

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸಮಾಜಸೇವೆ

Others

HOME NURSE/ Caregiver/ Male/Female available for Day/Night-24/7 for more details contact: MAJ, Grand Majestic Mall, Gandhinagar, Majestic, Bangalore- 6366883838, 7022399993.

ಪ್ರವಾಸ

Travel

24 ವರ್ಷಗಳ ಅನುಭವಿ ಪ್ರವಾಸಿ ಸಂಸ್ಥೆಯಿಂದ 11.06.2022 27.06.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ.27.05.2022, 04.06.2022 ರಿಂದ 8 ದಿನಗಳ ಶಿಮ್ಲಾ,ಕುಲುಮನಾಲಿ ಚಂಡಿಘಡ್. 27.06.2022 ರಿಂದ 7 ದಿನಗಳ ಕಾಶಿ ಯಾತ್ರ 30.06.2022 09.07.2022 ರಿಂದ 12/8 ದಿನಗಳ ಅಮರನಾಥ್,ಕಾಶ್ಮೀರ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

10.06.2022 15 ದಿನಗಳ ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್. 27.06.2022 14 ದಿನಗಳ ವೈಷ್ಣವಿದೇವಿ ಕಾಶ್ಮಿರ,ಗುಲ್ಮಾರ್ಗ್ ಅಮರನಾಥ ಯಾತ್ರೆ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ ಬೆಂಗಳೂರು-70. 9342287551 8050629305

★ಜುಲೈ 13ರಿಂದ 12 ದಿನಗಳ* ಅಮರನಾಥ, ಜಮ್ಮು, ಶ್ರೀನಗರ, ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ, ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. ಬೆಂಗಳೂರು. 9480253807

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎಂಟನೇ ವರ್ಷದ ಚಿರಸ್ಮರಣೆ

ಶ್ರೀಯುತ ಎಸ್.ಎನ್.ಬಚ್ಚಣ್ಣನವರು
ಜನನ: 18-01-1944 ನಿಧನ: 01-05-2014
ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷವಾಗಿದೆ, ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.
ಶ್ರೀಮತಿ ರಾಧಮ್ಮ ಮತ್ತು ಕುಟುಂಬದವರು
ಶ್ರೀ ಎಸ್.ಎನ್.ಆನಂದಮೂರ್ತಿ ಮತ್ತು ಕುಟುಂಬದವರು

1st YEAR REMEMBRANCE



Sri V. SRINIVASA RAO
16-01-1953 to 01-05-2021
You are a part of our life, our heart and our soul forever
Deeply mourned by :
Family and Friends

11ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಲ್. ನಾರಾಯಣಸ್ವಾಮಿಯವರು
(ಮಾಜಿ ಛೇರ್ಮನ್, ರಾಚೇನಹಳ್ಳಿ, ಬೆಂಗಳೂರು–77)
ನೀವು ನಮ್ಮನ್ನಗಲಿ ಇಂದಿಗೆ 11 ವರ್ಷವಾಯಿತು (01.05.2011)
ನಿಮ್ಮ ಮಾರ್ಗದರ್ಶನವೇ ನಮಗೆ ದಾರಿ ದೀಪವಾಗಿದೆ ನಿಮ್ಮ ಸವಿನೆನಪುಗಳು ನಮ್ಮ ಹೃದಯಗಳಲ್ಲಿ ಸದಾ ಅಚ್ಚಳಿಯದೇ ಉಳಿದಿದೆ
ಇಂತಿ ಸದಾ ನಿಮ್ಮ ನೆನಪಿನಲ್ಲಿ
ಧರ್ಮಪತ್ನಿ : ಶ್ರೀಮತಿ ಟಿ.ಎನ್. ನಾಗರತ್ನಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು

11ನೇ ವರ್ಷದ ಚಿರಸ್ಮರಣೆ

ಶ್ರೀ ಕೆ. ರಾಮಯ್ಯನವರು
ಮಾಜಿ ನಗರಸಭಾ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಜನನ: 02.04.1933 ಮರಣ: 01.05.2011
ಸಂಸ್ಥಾಪಕರು: ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ಮೊದಲನೇ ಚಿರಸ್ಮರಣೆ

ಶ್ರೀಮತಿ ಸರಳ ಡಿ.ಕೆ.
27ನೇ ಏಪ್ರಿಲ್ 2021
ಶ್ರೀ ಶಿವಕುಮಾರ್ ಬಿ.ಎಸ್.
01ನೇ ಮೇ 2021
ನಮ್ಮ ಜೀವನದಲ್ಲಿ ನಿಮ್ಮನ್ನು ನಾವು ಸದಾ ನೆನಪಿಸಿಕೊಳ್ಳುತ್ತೇವೆ,
ನಿಮ್ಮ ಜೀವಂತಿಕೆ ನಮ್ಮನ್ನು ಪ್ರತಿ ಕ್ಷಣವು ಸ್ಮರಿಸುತ್ತದೆ,
ನೀವು ಯಾವಾಗಲೂ ಜೀವಂತ, ನಮ್ಮ ಹೃದಯದಲ್ಲಿ..
ದುಃಖತಪ್ತರು:
ಸೀತಮ್ಮ, ಬ್ರಿಜೇಶ್ ಮತ್ತು ಪ್ರಣತಿ
ಬಂಧು–ಮಿತ್ರರು

21ನೇ ವರ್ಷದ ಪುಣ್ಯಸ್ಮರಣೆ

ಪರಮಪೂಜ್ಯ ಭಾವನೆಯಿಂದ, ಅತ್ಯಂತ ಪ್ರೀತ್ಯಾದರಗಳಿಂದ ಹಾಗೂ ಶಾಶ್ವತ ಸವಿನೆನಪುಗಳಿಂದ ತಮ್ಮನ್ನು ಸದಾ ಸ್ಮರಿಸುತ್ತಿದ್ದೇವೆ

ಶ್ರೀ ಸಿ. ನಾರಾಯಣ ರೆಡ್ಡಿ ವಿಧಾನ ಪರಿಷತ್ ಸದಸ್ಯರಾಗಿದ್ದವರು
ಸಂಸ್ಥಾಪಕರು: ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
ಇವರು ಸ್ವರ್ಗಸ್ಥರಾಗಿ ತಾ॥ 01.05.2022ಕ್ಕೆ 21 ವರ್ಷಗಳಾದವು
“ನಮಗೆ ಕರ್ಮ ಮಾಡಲು ಮಾತ್ರ ಅಧಿಕಾರವಿದೆ. ಆದರೆ ಅದರ ಫಲದ ವಿಷಯದಲ್ಲಿ ಎಂದಿಗೂ ಇಲ್ಲ. ಆದ್ದರಿಂದ ನಾವು ನಮ್ಮ ಕರ್ಮಗಳ ಫಲಗಳನ್ನು ಇಚ್ಛಿಸುವವರಾಗಬಾರದು. ಅಂತೆಯೇ, ಕರ್ಮ ಮಾಡದೇ ಇರುವಂತಹ ಆಗ್ರಹವನ್ನೂ ಇಟ್ಟುಕೊಳ್ಳಬಾರದು.”
– ಅಧ್ಯಾಯ–2, ಶ್ಲೋಕ–47, ಶ್ರೀಮತ್ ಭಗವದ್ಗೀತೆ
ತಮ್ಮ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಭಗವಂತನನ್ನು ಸದಾ ಪ್ರಾರ್ಥಿಸುವ
ಶ್ರೀಮತಿ ಸುಶೀಲಾ ನಾರಾಯಣ ರೆಡ್ಡಿ,
ಶ್ರೀಮತಿ ವನಿತಾ ಮತ್ತು ಶ್ರೀ ಎನ್. ಸ್ವರೂಪ್ ಕುಮಾರ್,
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಎನ್. ಶಶಾಂಕ್ ಕುಮಾರ್,
ನಾರಾಯಣ್ ಸ್ವರೂಪ್, ನವರತನ್ ಸ್ವರೂಪ್,
ಆಯನ ಶಶಾಂಕ್, ಅರ್ಹ ವಿಹಾನ ಶಶಾಂಕ್,
ಬಂಧುಗಳು ಹಾಗೂ ಆಪ್ತರು

ಚಿರಸ್ಮರಣೆ

ಶ್ರೀಮತಿ. ಸರೋಜಿನಿ ಕಾರ್ಲೆ
ನಿಧನ: 01–05–2019
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ಸದಾ ಸ್ಮರಿಸುವ
ಕುಟುಂಬ ವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಅಥ್ಲೆಟಿಕ್ಸ್‌ನಲ್ಲಿ ಲಕ್ಷ್ಮಿ, ಅಭಿನವ್ ಕೂಟ ದಾಖಲೆ

ವಿಘ್ನೇಶ್, ದ್ಯುತಿ ಚಿನ್ನದ 'ಹೊನಲು'

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಬೆಳದಿಂಗಳಿನಂಥ ಬೆಳಕಿನ ಹೊನಲಿನಲ್ಲಿ ಒಲಿಂಪಿಯನ್, ಕಳಿಂಗ ವಿಶ್ವವಿದ್ಯಾಲಯದ ದ್ಯುತಿ ಚಾಂದ್ ಮತ್ತು ಮಂಗಳೂರು ವಿಶ್ವವಿದ್ಯಾಲಯದ ವಿಘ್ನೇಶ್ ಮಿಂಚಿನ ಸಂಚಾರ ಮಾಡಿಸಿದರು.

ಹೊಸ ಸಿಂಥೆಟಿಕ್ ಅಳವಡಿಸಿರುವ ಕಂಠೀರವ ಕ್ರೀಡಾಂಗಣದ ಟ್ರ್ಯಾಕ್‌ನಲ್ಲಿ ಶನಿವಾರ ರಾತ್ರಿ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ 100 ಮೀಟರ್ಸ್ ಓಟದಲ್ಲಿ ಅವರು ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು.

10.50 ಸೆಕೆಂಡುಗಳಲ್ಲಿ ಗುರಿ ತಲುಪಿದ ವಿಘ್ನೇಶ್ ಕೂಟ ದಾಖಲೆ ಬರೆದರು. ಪ್ರಮುಖ ಕೂಟಗಳಲ್ಲಿ ಇದು ಅವರ ಮೊದಲ ಚಿನ್ನ. ವೈಯಕ್ತಿಕ ಶ್ರೇಷ್ಠ ಸಾಧನೆ ಕೂಡ. ಜಿದ್ದಾಜಿದ್ದಿ ಸ್ಪರ್ಧೆಯಲ್ಲಿ ಅಂತಿಮ 20 ಮೀಟರ್ ಇದ್ದಾಗ ವೇಗ ಹೆಚ್ಚಿಸಿಕೊಂಡ ವಿಘ್ನೇಶ್ ಚಿನ್ನದ ನಗೆ ಸೂಸಿದರು. ದ್ಯುತಿ ಚಾಂದ್ ಆರಂಭದಿಂದಲೇ ಮುನ್ನಡೆ ಸಾಧಿಸಿದ್ದರು. ಹೀಗಾಗಿ ಪ್ರಯಾಸವಿಲ್ಲದೆ ಮೊದಲಿಗರಾಗಿ ಗುರಿ ಮುಟ್ಟಿದರು.

100 ಮೀ ಓಟದಲ್ಲಿ ಚಿನ್ನ ಗೆದ್ದ ಮಂಗಳೂರು ವಿವಿಯ ವಿಘ್ನೇಶ್ ಮುನ್ನುಗ್ಗಿದ ಪರಿ –ಪ್ರಜಾವಾಣಿ ಚಿತ್ರ

ಇದಕ್ಕೂ ಮೊದಲು ನಡೆದ ಮಹಿಳೆಯರ 1500 ಮೀಟರ್ಸ್ ರೋಚಕ ಓಟದಲ್ಲಿ ಮಂಗಳೂರು ವಿವಿಯ ರಾಧಾ ಸಿಂಗ್ ಚಿನ್ನ ಗೆದ್ದರು. ಅಂತಿಮ ಕ್ಷಣಗಳಲ್ಲಿ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದ ಅವರು ಪ್ರೇಕ್ಷಕರನ್ನು ರಂಜಿಸಿದರು. ಪೆರಿಯಾರ್ ವಿವಿಯ ಕವಿತಾ ಆರಂಭದಲ್ಲಿ ಮುನ್ನಡೆ ಸಾಧಿಸಿದ್ದರು. ನಂತರ ಹಿಮಾಚಲ ಪ್ರದೇಶದ ಸುನಿತಾ ಮತ್ತು ಕವಿತಾ ನಡುವೆ ಸ್ಪರ್ಧೆ ಏರ್ಪಟ್ಟಿತು. ಕೊನೆಯ 100 ಮೀಟರ್ ಇದ್ದಾಗ ರಾಧಾ ಮುನ್ನೆಲೆಗೆ ಬಂದರು. 50 ಮೀಟರ್ ಬಾಕಿ ಇದ್ದಾಗ ಮಿಂಚಿನ ವೇಗದಲ್ಲಿ ಮುನ್ನುಗ್ಗಿ 4 ನಿಮಿಷ 31.43 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಪೆರಿಯಾರ್ ವಿವಿಯ ಪವಿತ್ರಾ ವೆಂಕಟೇಶ್ ಪೋಲ್‌ವಾಲ್ಟ್‌ನಲ್ಲಿ 4.01 ಮೀ ಎತ್ತರದ ಸಾಧನೆಯೊಂದಿಗೆ ಕೂಟ ದಾಖಲೆ ಬರೆದು ಚಿನ್ನ ಗೆದ್ದರು. ಜೈನ್ ವಿವಿಯ ಸತ್ಯ ಮತ್ತು ರಾಜೀಂದರ್ ವಿವಿಯ ಬಬಿತಾ ಪಟೇಲ್ ಕಂಚು ಗಳಿಸಿದರು. ಡಿಸ್ಕಸ್ ಎಸೆತದಲ್ಲಿ ಲವ್ಲಿ ಪ್ರೊಫೆಷನಲ್ ವಿವಿಯ ಅಭಿನವ್ 54.46 ಮೀ ದೂರದ ಸಾಧನೆ ಮಾಡಿ ಕೂಟ ದಾಖಲೆ ಬರೆದರು.

ಅಥ್ಲೆಟಿಕ್ಸ್‌ನ ಮೊದಲ ಚಿನ್ನ ಆಳ್ವಾಸ್‌ಗೆ: ಅಥ್ಲೆಟಿಕ್ಸ್‌ನ ಮೊದಲ ಚಿನ್ನ ಉತ್ತರಪ್ರದೇಶದ ಜನನಾಯಕ್ ಚಂದ್ರಶೇಖರ್ ವಿವಿಯ ಅರ್ಷದ್ ಅಲಿ ಖಾನ್ ಅವರ ಪಾಲಾಯಿತು. ಪುರುಷರ 10 ಸಾವಿರ ಮೀಟರ್ಸ್ ಓಟದಲ್ಲಿ ಅವರು ಚಿನ್ನ ಗೆದ್ದರು. 30 ನಿಮಿಷ 26.40 ಸೆಕೆಂಡುಗಳಲ್ಲಿ ಅವರು ಗುರಿಮುಟ್ಟಿದರು. ಉತ್ತರಪ್ರದೇಶದವರೇ ಆದ ನೆಹರು ಗ್ರಾಮ್ ಭಾರತಿ ವಿವಿಯ ರೋಹಿತ್ 31 ನಿಮಿಷ 33.11 ಸೆಕೆಂಡುಗಳಲ್ಲಿ ಮತ್ತು ಮಹರ್ಷಿ ದಯಾನಂದ ಸಾಗರ್ ವಿವಿಯ ಹರೀಶ್ 31 ನಿಮಿಷ 33.14 ಸೆಕೆಂಡುಗಳಲ್ಲಿ ಗುರಿ ತಲುಪಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು. ಇದರ ಬೆನ್ನಲ್ಲೇ ನಡೆದ ಮಹಿಳೆಯರ 10 ಸಾವಿರ ಮೀಟರ್ಸ್ ಓಟದಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಮಂಗಳೂರು ವಿವಿ ಅಥ್ಲೆಟಿಕ್ಸ್‌ನ ಪದಕ ಬೇಟೆ ಆರಂಭಿಸಿತು. ಬೆಂಗಳೂರು ಸಾಯ್‌ನಲ್ಲಿ ಅಭ್ಯಾಸ ಮಾಡುತ್ತಿರುವ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿ ಕೆ.ಎಂ. ಲಕ್ಷ್ಮಿ 35 ನಿಮಿಷ 49.23 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ತೀವ್ರ ಪೈಪೋಟಿ ನೀಡಿದ ಮಹರ್ಷಿ ದಯಾನಂದ ವಿವಿಯ ಭಾರತಿ (36 ನಿ. 20.25 ಸೆ.) ಮತ್ತು ಬಧೊ (36 ನಿ. 44.40 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು.

ಎರಡನೇ ದಿನದ ಫಲಿತಾಂಶಗಳು: ಅಥ್ಲೆಟಿಕ್ಸ್: ಪುರುಷರ 100 ಮೀಟರ್ಸ್ ಓಟ: ವಿಘ್ನೇಶ್ (ಮಂಗಳೂರು ವಿವಿ)–1. ಕಾಲ: 10.50 ಸೆಕೆಂಡು (ಕೂಟ ದಾಖಲೆ. ಹಿಂದಿನದು 10.68, ಜೆಸಿಬಾವನ್), ತಮಿಳರಸು (ಭಾರತಿಯಾರ್)–2, ಪ್ರಣವ್ ಗೌರವ್ (ಪುಣೆ)–3; 400 ಮೀ ಹರ್ಡಲ್ಸ್: ರೋಹನ್ ಕಾಂಬ್ಳೆ (ಶಿವಾಜಿ)–1. ಕಾಲ: 52.22, ಪ್ರಶಾಂತ್ ಕುಮಾರ್ (ಮದುರೈ ಕಾಮರಾಜ್)–2, ಸುರೇಂದರ್ (ಭಾರತಿಯಾರ್)–3; 10,000 ಮೀ ಓಟ: ಅರ್ಷದ್ ಅಲಿ (ಜನನಾಯಕ್ ಚಂದ್ರಶೇಖರ್ ವಿವಿ)–1. ಕಾಲ: 30:26.40, ರೋಹಿತ್ ಯಾದವ್ (ನೆಹರು ಗ್ರಾಮಭಾರತಿ)–2, ಹರೀಶ್ (ಮಹರ್ಷಿ ದಯಾನಂದ್)–3; ಡಿಸ್ಕಸ್ ಥ್ರೋ: ಅಭಿನವ್ (ಲವ್ಲಿ ಪ್ರೊಫೆಷನಲ್)–1. ಅಂತರ: 54.46 ಮೀ (ಕೂಟ ದಾಖಲೆ; ಹಳೆಯದು: 50.47, ಪ್ರವೀಣ್ ಕುಮಾರ್ ನೆಹ್ರಾ), ವಸುಕೇಶ್ ಪೂನಿಯಾ (ಮಂಗಳೂರು)–2, ಪೃಥ್ವಿರಾಜ್ ನಲವಡೆ (ಪುಣೆ)–3; ಲಾಂಗ್ ಜಂಪ್: ಶ್ರೀರಾಮ್ (ಎಸ್‌ಆರ್‌ಎಂ)–1. ಅಂತರ: 7.31 ಮೀ, ಅನಿಲ್ ಕುಮಾರ್ ಸಾಹು (ಮಂಗಳೂರು)–2, ಶ್ರೀಕಾಂತ್ (ಮಹಾತ್ಮ ಗಾಂಧಿ).

ಮಹಿಳೆಯರ 100 ಮೀ ಓಟ: ದ್ಯುತಿ ಚಾಂದ್ (ಕಳಿಂಗ)–1. ಕಾಲ: 11.68 ಸೆ, ಅವಂಕಿತಾ (ಪುಣೆ)–2, ಪ್ರೀತಿ (ಗುರು ಜಂಬೇಶ್ವರ)–3; 400 ಮೀ ಹರ್ಡಲ್ಸ್: ಆರತಿ (ಕ್ಯಾಲಿಕಟ್)–1. ಕಾಲ: 59.10, ಪ್ರಗ್ಯಾನ್ (ಲವ್ಲಿ)–2, ಗುಡಿಯಾ (ರಾಮ್ ಮನೋಹರ್ ಲೋಹಿಯಾ)–3; 10,000 ಮೀ ಓಟ: ಕೆ.ಎಂ.ಲಕ್ಷ್ಮಿ (ಮಂಗಳೂರು)–1. ಕಾಲ: 35 ನಿಮಿಷ, 49.23ಸೆ (ಕೂಟ ದಾಖಲೆ; ಹಳೆಯದು: 35:59.58, ಜ್ಯೋತಿ); ಭಾರತಿ (ಮಹರ್ಷಿ ದಯಾನಂದ್)–2, ಬಧೊ (ಮಹರ್ಷಿ ದಯಾನಂದ್)–3; 400 ಮೀ ಹರ್ಡಲ್ಸ್: ಆರ್.ಆರತಿ (ಕ್ಯಾಲಿಕಟ್)–1. ಕಾಲ: 59.10, ಪ್ರಗ್ಯಾನ್ ಪ್ರಶಾಂತ್ ಸಾಹು (ಲವ್ಲಿ)–2, ಗುಡಿಯಾ (ರಾಮ್ ಮನೋಹರ್ ಲೋಹಿಯಾ)–3.

ಫೆನ್ಸಿಂಗ್: ಮಹಿಳೆಯರ ಫಾಯಿಲ್: ರಿಯಾ ಬಕ್ಷಿ (ಗುರುನಾನಕ್)–1, ಕನಕಲಕ್ಷ್ಮಿ (ಕಣ್ಣೂರು)–2, ಅನಿತಾ ಚಾನು (ಮಣಿಪುರ್), ಕಾಜಲ್ (ಪಂಜಾಬ್)–3; ಕಾಟಾ: ಮೆಸಮ್ (ಲವ್ಲಿ)–1, ದಿಯಾ ಅರಸ್ (ಮೈಸೂರು)–2, ಫರ್ಷಾನ (ಕ್ಯಾಲಿಟಕ್).

ಆರ್ಚರಿ, ಜೂಡೊ ಫಲಿತಾಂಶಗಳು

ಪುರುಷರ ಕಾಂಪೌಂಡ್: ತಜಿಂದರ್ ಸಿಂಗ್ (ಡೆಲ್ಲಿ)-1, ಸಾಗರ್ ಚೋಪ್ರಾ (ಡೆಲ್ಲಿ)-2, ಹೃತಿಕ್ ಶರ್ಮಾ (ಗುರುನಾನಕ್‌ದೇವ್), ವಿಕಾಸ್ ರಾಜನ್ (ಪಂಜಾಬಿ)-3; ಮಹಿಳೆಯರ ಕಾಂಪೌಂಡ್: ಮಧುರಾ ಧನನಾಂದ್ರ್ (ಅಮರಾವತಿ)-1, ಮಹಕ್ ಪಠಾಣ್ (ಪುಣೆ)-2, ಪ್ರಭ್‌ಜೋತ್ ಕೌರ್ (ಪಂಜಾಬಿ), ರಾಗಿಣಿ (ರಾಣಿ ದುರ್ಗಾವತಿ)-3. ಮಿಶ್ರ ಕಾಂಪೌಂಡ್: ಪಂಜಾಬಿ-1, ರಾಣಿ ದುರ್ಗಾವತಿ-2, ಚೌಧರಿ ಚರಣ್ ಸಿಂಗ್-3. ಜೂಡೊ: ಮಹಿಳಾ ವಿಭಾಗ: -78 ಕೆಜಿ ಮೈಬಮ್ ದೇವಿ (ಗುರುನಾನಕ್)-1, ಜ್ಯೋತಿ ಟೋಕಸ್ (ಡೆಲ್ಲಿ)-02, ಮನ್‌ಪ್ರೀತ್ ಕೌರ್ (ಪಂಜಾಬಿ), ಸಂಪದ (ಮುಂಬೈ)-3; + 78 ಕೆಜಿ: ತೂಲಿಕಾ ಮಾನ್ (ದೀನ್ ದಯಾಳ್)-1, ಅಪೂರ್ವ ಪಾಟೀಲ್ (ಮುಂಬೈ)-2, ಅಮಿಶಾ ಕಾಳೆ (ಲವ್ಲಿ), ಮೇಘಾ ಸನ್ನಿ (ಕ್ಯಾಲಿಕಟ್)-3; ಪುರುಷರ ವಿಭಾಗ: -100 ಕೆಜಿ: ವಿಶಾಲ್ (ಇಂದಿರಾ ಗಾಂಧಿ)-1, ಆಶಿಷ್ ಮಲಿಕ್ (ಅಮರಾವತಿ)-2, ರಿತಿಕ್ ಕುಮಾರ್ (ಲವ್ಲಿ), ಅಭಿನವ್ (ಬೀರ್ ಟಿಕೇಂದ್ರ ಸಿಂಗ್)-3; + 100 ಕೆಜಿ: ವಿಧಾನ್ ಕುಮಾರ್ (ಡೆಲ್ಲಿ)-1, ಲಲಿತ್ (ಇಂದಿರಾಗಾಂಧಿ)-2, ಯಶ್ (ಚೌಧರಿ ಬನ್ಸಿಲಾಲ್), ಜಿತೇಶ್ (ಪಂಜಾಬ್)-3.

ಕರಾಟೆ: ಮೈಸೂರು ವಿವಿಗೆ ಪದಕ

ಮೈಸೂರು ವಿವಿಯ ದಿಯಾ ಅರಸ್ ಅವರು ಕರಾಟೆಯ ಕಾಟಾ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದರು. ಲವ್ಲಿ ಪ್ರೊಫೆಷನಲ್ ವಿವಿಯ ಮೆಸಾಮ್ (24.32) ವಿರುದ್ಧ ಫೈನಲ್‌ನಲ್ಲಿ ದಿಯಾ (23.52) ಸೋತರು. ಕ್ಯಾಲಿಕಟ್ ವಿವಿಯ ಫರ್ಷಾನಾ ಮತ್ತು ಅಣ್ಣಾ ವಿವಿಯ ಪ್ರಿಯಾಂಕ ಕಂಚು ಗಳಿಸಿದರು.

ಕಬಡ್ಡಿ; ಮಂಗಳೂರು ವಿವಿಗೆ ಗೆಲುವು: ಮಹಿಳೆಯರ ಕಬಡ್ಡಿಯಲ್ಲಿ ಕಳೆದ ಬಾರಿ ಕಂಚಿನ ಪದಕ ಗೆದ್ದಿದ್ದ ಮಂಗಳೂರು ವಿವಿ 34–30ರಲ್ಲಿ ಗುರುನಾನಕ್ ವಿವಿಯನ್ನು ಮಣಿಸಿ ಲೀಗ್‌ನಲ್ಲಿ ಮೊದಲ ಜಯ ಸಾಧಿಸಿತು.

ಹಾಕಿ: ಬೆಂಗಳೂರು ವಿವಿ ಫೈನಲ್‌ಗೆ

ಬೆಂಗಳೂರು ನಗರ ವಿವಿ ತಂಡ ಪುರುಷರ ಹಾಕಿಯಲ್ಲಿ ಫೈನಲ್ ಪ್ರವೇಶಿಸಿತು. ಕರ್ನಾಟಕ ರಾಜ್ಯ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಬೆಂಗಳೂರು ತಂಡ ಅಮೃತಸರದ ಗುರುನಾನಕ್ ದೇವ್ ವಿವಿಯನ್ನು ಎದುರಿಸಲಿದೆ. ಶೂಟೌಟ್‌ನಲ್ಲಿ ಕೊನೆಗೊಂಡ ರೋಚಕ ಸೆಮಿಫೈನಲ್ ಪಂದ್ಯಗಳಲ್ಲಿ ಬೆಂಗಳೂರು ನಗರ ವಿವಿ ಪುಣೆಯ ಸಾವಿತ್ರಿಬಾಯಿ ಫುಲೆ ವಿವಿಯನ್ನು 5–3ರಲ್ಲಿ ಮತ್ತು ಗುರುನಾನಕ್ ವಿವಿ ಪಂಜಾಬ್ ವಿವಿಯನ್ನು 5–3ರಲ್ಲಿ ಮಣಿಸಿತು.

ಎರಡನೇ ಸೆಮಿಫೈನಲ್‌ನಲ್ಲಿ ಹರೀಶ್ ಮುತಗಾರ 15ನೇ ನಿಮಿಷದಲ್ಲಿ ಗಳಿಸಿದ ಗೋಲಿನೊಂದಿಗೆ ಮುನ್ನಡೆ ಗಳಿಸಿದ ಬೆಂಗಳೂರು ನಗರ ವಿವಿಗೆ 31 ಮತ್ತು 54ನೇ ನಿಮಿಷಗಳಲ್ಲಿ ಮಯೂರ್ ಧನವಾಡೆ 'ಡಬಲ್' ಪೆಟ್ಟು ನೀಡಿದರು. 58ನೇ ನಿಮಿಷದಲ್ಲಿ ವಸಂತ ಕುಮಾರ್ ಗೋಕಾವಿ ಗಳಿಸಿದ ಗೋಲಿನೊಂದಿಗೆ ಬೆಂಗಳೂರು ತಂಡ ಸಮಬಲ ಸಾಧಿಸಿತು. ಶೂಟೌಟ್‌ನಲ್ಲಿ ಬೆಂಗಳೂರು ಪಾರಮ್ಯ ಮೆರೆಯಿತು. ಮಹಿಳೆಯರ ಫೈನಲ್‌ನಲ್ಲಿ ಮೈಸೂರು ವಿವಿ ಮತ್ತು ಗ್ವಾಲಿಯರ್ ವಿವಿಗಳು ಸೆಣಸಲಿವೆ.

ಹಾಕಿ ಸೆಮಿಫೈನಲ್‌ನಲ್ಲಿ ಬೆಂಗಳೂರು ನಗರ ವಿವಿಯ ಪುನೀತ್ ಆರ್ (ಎಡ) ಮತ್ತು ಪುಣೆ ವಿವಿಯ ರಮೇಶ್ ಪಿಳ್ಳೆ ಚೆಂಡಿಗಾಗಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಸಿಂಧುಗೆ ಕಂಚಿನ ಪದಕ

ಏಷ್ಯಾ ಬ್ಯಾಡ್ಮಿಂಟನ್: ಜಪಾನ್‌ನ ಅಕಾನೆ ಎದುರು ಸೋಲು

ಮನಿಲಾ, ಪಿಲಿಪ್ಪೀನ್ಸ್ (ಪಿಟಿಐ): ವೀರೋಚಿತ ಹೋರಾಟದಲ್ಲಿ ಸೋತ ಭಾರತದ ಪಿ.ವಿ.ಸಿಂಧು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಇಲ್ಲಿ ಶನಿವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು 21-13 19-21 16-21ರಿಂದ ಜಪಾನ್‌ನ ಅಕಾನೆ ಯಾಮಗುಚಿ ಎದುರು ಮಣಿದರು. ಒಂದು ತಾಸು ಆರು ನಿಮಿಷಗಳ ಹಣಾಹಣಿಯಲ್ಲಿ ಅಗ್ರಶ್ರೇಯಾಂಕದ ಜಪಾನ್ ಆಟಗಾರ್ತಿಗೆ ಜಯ ಒಲಿಯಿತು.

26 ವರ್ಷದ ಸಿಂಧು ಅವರಿಗೆ ಟೂರ್ನಿಯಲ್ಲಿ ಇದು ಎರಡನೇ ಪದಕ. 2014ರ ಗಿಮ್ಚಿಯೊನ್ ಆವೃತ್ತಿಯಲ್ಲಿ ಅವರಿಗೆ ಕಂಚು ಒಲಿದಿತ್ತು.

ಈ ವರ್ಷ ಸೈಯದ್ ಮೋದಿ ಮತ್ತು ಸ್ವಿಸ್ ಓಪನ್ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದ ಸಿಂಧು, ಮೊದಲ ಗೇಮ್‌ಅನ್ನು 16 ನಿಮಿಷಗಳಲ್ಲೇ ಸುಲಭವಾಗಿ ಕೈವಶ ಮಾಡಿಕೊಂಡರು.

ನಾಲ್ಕನೇ ಶ್ರೇಯಾಂಕದ ಸಿಂಧು, ಎರಡನೇ ಗೇಮ್‌ನಲ್ಲಿ ಪಾಯಿಂಟ್‌ಗಳ ಮಧ್ಯೆ ನಿಗದಿಗಿಂತ ಹೆಚ್ಚು ಸಮಯ ತೆಗೆದುಕೊಂಡಿದ್ದಕ್ಕೆ ಪೆನಾಲ್ಟಿಯಾಗಿ ಒಂದು ಪಾಯಿಂಟ್ ಕಳೆದುಕೊಂಡರು. ಈ ಹಂತದಲ್ಲಿ ರೆಫರಿ ಜೊತೆ ವಾಗ್ವಾದ ಕೂಡ ನಡೆಸಿದರು. ತೀವ್ರ ಪೈಪೋಟಿಯಿಂದ ಕೂಡಿದ್ದ ಗೇಮ್‌ಅನ್ನು ಅಕಾನೆ ಗೆದ್ದುಕೊಂಡರು.

ಅಂತಿಮ ಮತ್ತು ನಿರ್ಣಾಯಕ ಗೇಮ್‌ನಲ್ಲೂ ಲಯ ಮುಂದುವರಿಸಿದ ಜಪಾನ್ ಆಟಗಾರ್ತಿ, ಆರಂಭದಿಂದಲೇ ಸಿಂಧು ಹಿನ್ನಡೆಯಲ್ಲಿರುವಂತೆ ನೋಡಿಕೊಂಡರು. ಕೊನೆಯ ಹಂತದಲ್ಲಿ ಐದರಲ್ಲಿ ಎರಡು ಗೇಮ್ ಪಾಯಿಂಟ್‌ಗಳನ್ನು ಅಕಾನೆ ಉಳಿಸಿಕೊಂಡರು.

ಉಭಯ ಆಟಗಾರ್ತಿಯರ ನಡುವಣ ಇದುವರೆಗಿನ ಮುಖಾಮುಖಿಯಲ್ಲಿ ಸಿಂಧು 13ರಲ್ಲಿ, ಅಕಾನೆ ಒಂಬತು ಪಂದ್ಯಗಳಲ್ಲಿ ಜಯ ಸಾಧಿಸಿದ್ದಾರೆ.

ಸಿಂಧು ಅವರ ಸೋಲಿನೊಂದಿಗೆ ಚಾಂಪಿಯನ್‌ಷಿಪ್‌ನ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯವಾಯಿತು.

ಪಿ.ವಿ. ಸಿಂಧು ಆಟದ ಶೈಲಿ– ಪಿಟಿಐ ಚಿತ್ರ

ಗಾಲ್ಫ್: ವಿರಾಜ್, ಅವನಿಗೆ ಅರ್ಹತೆ

ಬೆಂಗಳೂರು: ವಿರಾಜ್ ಮಾದಪ್ಪ ಹಾಗೂ ರಶೀದ್ ಖಾನ್ ಈ ವರ್ಷ ಹ್ಯಾಂಗ್‌ಜೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಗಾಲ್ಫ್ ಟೂರ್ನಿಗೆ ಭಾರತ ತಂಡದಲ್ಲಿ ಅರ್ಹತೆ ಗಿಟ್ಟಿಸಿದ್ದಾರೆ. ಮಹಿಳಾ ವಿಭಾಗದಲ್ಲಿ ಅವನಿ ಪ್ರಶಾಂತ್ ಅವಕಾಶ ಗಳಿಸಿದ್ದಾರೆ.

ಇಲ್ಲಿಯ ಕರ್ನಾಟಕ ಗಾಲ್ಫ್ ಸಂಸ್ಥೆಯ ಅಂಗಣದಲ್ಲಿ ಶನಿವಾರ ಕೊನೆಗೊಂಡ ಟ್ರಯಲ್ಸ್‌ಗಳಲ್ಲಿ ಈ ಆಟಗಾರರು ಮಿಂಚಿದರು.

ಟ್ರಯಲ್ಸ್‌ನ ಪುರುಷರ ವಿಭಾಗದಲ್ಲಿ ವಿರಾಜ್ ಹಾಗೂ ರಶೀದ್ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಅವನಿ ಅಗ್ರಸ್ಥಾನ ಗಳಿಸಿದರು.

ಏಷ್ಯನ್ ಗೇಮ್ಸ್ ಈ ವರ್ಷ ಸೆಪ್ಟೆಂಬರ್ 10ರಿಂದ 25ರವರೆಗೆ ನಿಗದಿಯಾಗಿದೆ.

ರಿಯಲ್ ಮ್ಯಾಡ್ರಿಡ್‌ಗೆ ಲಾಲಿಗಾ ಕಿರೀಟ

ಮ್ಯಾಡ್ರಿಡ್ (ಎಎಫ್‌ಪಿ): ರಿಯಲ್ ಮ್ಯಾಡ್ರಿಡ್ ತಂಡವು ಲಾಲಿಗಾ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಶನಿವಾರ ರಿಯಲ್ ಮ್ಯಾಡ್ರಿಡ್ 4–0ಯಿಂದ ಎಸ್ಪಾನಿಯೊಲ್ ತಂಡವನ್ನು ಸೋಲಿಸಿ, ಇನ್ನೂ ನಾಲ್ಕು ಪಂದ್ಯಗಳು ಬಾಕಿ ಇರುವಂತೆಯೇ ಪ್ರಶಸ್ತಿಗೆ ಮುತ್ತಿಕ್ಕಿತು. ತಂಡದ ಪರ ರೋಡ್ರಿಗೊ (33, 43ನೇ ನಿಮಿಷ), ಮಾರ್ಕೊ ಅಸೆನ್ಸಿಯೊ (55ನೇ ನಿ.) ಮತ್ತು ಕರೀಂ ಬೆಂಜೆಮಾ (81ನೇ ನಿ.) ಗೋಲು ಗಳಿಸಿದರು.

ಚೆನ್ನೈ ಸೂಪರ್ ಕಿಂಗ್ಸ್‌ಗೆ ಮತ್ತೆ ಧೋನಿ ನಾಯಕ

ನವದೆಹಲಿ (ಎಎಫ್‌ಪಿ): ಮಹೇಂದ್ರ ಸಿಂಗ್ ಧೋನಿ ಅವರು ಮತ್ತೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಪಟ್ಟಕ್ಕೇರಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಸತತ ಸೋಲಿನಿಂದ ಕಂಗೆಟ್ಟಿರುವ ತಂಡದ ನಾಯಕ ಸ್ಥಾನಕ್ಕೆ ಆಲ್‌ರೌಂಡರ್ ರವೀಂದ್ರ ಜಡೇಜ ಶನಿವಾರ ರಾಜೀನಾಮೆ ನೀಡಿದ್ದಾರೆ.

'ರವೀಂದ್ರ ಜಡೇಜ ಅವರು ತಮ್ಮ ಆಟದ ಕಡೆಗೆ ಗಮನ ನೀಡುವುದಕ್ಕಾಗಿ ನಾಯಕತ್ವವನ್ನು ತೊರೆಯಲು ನಿರ್ಧರಿಸಿದ್ದಾರೆ. ತಂಡವನ್ನು ಮುನ್ನಡೆಸುವಂತೆ ಮಹೇಂದ್ರ ಸಿಂಗ್ ಧೋನಿ ಅವರನ್ನು ಕೋರಿದ್ದಾರೆ. ಧೋನಿ ಇದಕ್ಕೆ ಒಪ್ಪಿಕೊಂಡಿದ್ದಾರೆ' ಎಂದು ಪ್ರಕಟಣೆಯಲ್ಲಿ ಫ್ರಾಂಚೈಸ್ ತಿಳಿಸಿದೆ.

40 ವರ್ಷದ ಧೋನಿ ಐಪಿಎಲ್ 15ನೇ ಆವೃತ್ತಿಯ ಪಂದ್ಯಗಳು ಆರಂಭವಾಗಲು ಎರಡು ದಿನಗಳು ಇದ್ದಾಗ ನಾಯಕತ್ವ ತೊರೆಯಲು ನಿರ್ಧರಿಸಿದ್ದರು. ಆದರೆ ತಂಡ ಮೊದಲ ನಾಲ್ಕು ಪಂದ್ಯಗಳಲ್ಲಿ ಸೋತಿತ್ತು. ಈ ವರೆಗೆ ಒಟ್ಟು ಎಂಟು ಪಂದ್ಯಗಳ ಪೈಕಿ ಎರಡರಲ್ಲಿ ಮಾತ್ರ ಜಯ ಸಾಧಿಸಿದೆ.

ರವೀಂದ್ರ ಜಡೇಜ ಮತ್ತು ಮಹೇಂದ್ರ ಸಿಂಗ್ ಧೋನಿ –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ರಣಜಿ ಕ್ರಿಕೆಟ್ ನಾಕೌಟ್ ಹಂತ ಜೂನ್ 6ರಿಂದ

ನವದೆಹಲಿ(ಪಿಟಿಐ): ಬೆಂಗಳೂರಿನಲ್ಲಿ ಜೂನ್ 4ರಿಂದ ಆರಂಭವಾಗಬೇಕಿದ್ದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಕೌಟ್ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಈ ಪಂದ್ಯಗಳು ಜೂನ್ 6ರಿಂದ 10ರವರೆಗೆ ಕ್ವಾರ್ಟರ್‌ಫೈನಲ್ ಪಂದ್ಯಗಳು ನಡೆಯಲಿವೆ. ಬಂಗಾಳ–ಜಾರ್ಖಂಡ್, ಮುಂಬೈ–ಉತ್ತರಾಖಂಡ, ಕರ್ನಾಟಕ–ಉತ್ತರಪ್ರದೇಶ ಹಾಗೂ ಪಂಜಾಬ್–ಮಧ್ಯಪ್ರದೇಶ ತಂಡಗಳು ಎಂಟರ ಘಟ್ಟದಲ್ಲಿ ಮುಖಾಮುಖಿಯಾಗಲಿವೆ.

ಜೂನ್ 14 ರಿಂದ 18ರವರೆಗೆ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಫೈನಲ್ ಪಂದ್ಯವು ಜೂನ್ 22 ರಿಂದ 26ರವರೆಗೆ ನಿಗದಿಯಾಗಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಪಾಕ್ ಪ್ರಧಾನಿ ಪುತ್ರ ಪಂಜಾಬ್‌ನ ಸಿ.ಎಂ

ಲಾಹೋರ್(ಪಿಟಿಐ): ಪಾಕಿಸ್ತಾನದ ಪ್ರಧಾನಿ ಶಾಹಬಾಝ್ ಷರೀಫ್ ಅವರ ಪುತ್ರ ಹಮ್ಜಾ ಶಾಹಬಾಝ್ ದೇಶದಲ್ಲೇ ಅತಿಹೆಚ್ಚು ಜನಸಂಖ್ಯೆಯ ಪಂಜಾಬ್‌ನ ಮುಖ್ಯಮಂತ್ರಿ ಆಗಿ ಪ್ರಮಾಣ ಸ್ವೀಕರಿಸಿದರು. 47 ವರ್ಷದ ಹಮ್ಜಾ ಅವರಿಗೆ ರಾಷ್ಟ್ರೀಯ ಅಸೆಂಬ್ಲಿಯ ಸ್ಪೀಕರ್ ರಾಜಾ ಪರ್ವೇಜ್ ಆಶ್ರಫ್ ಅವರು ಪ್ರಮಾಣ ಬೋಧಿಸಿದರು.

'ಲಂಕಾ: ಮುಂದಿನ ವಾರ ಬಹುಮತ'

ಕೊಲಂಬೊ(ಪಿಟಿಐ): 'ರಾಜಪಕ್ಸ ಕುಟುಂಬ ಮುನ್ನಡೆಸುತ್ತಿರುವ ಸರ್ಕಾರದ ವಿರುದ್ಧ ಮುಂದಿನ ವಾರ ಅವಿಶ್ವಾಸ ನಿರ್ಣಯ ಮಂಡಿಸಿ, ನಮಗೆ ಬಹುಮತ ಇರುವುದನ್ನು ಸಾಬೀತುಪಡಿಸಲಿದ್ದೇವೆ' ಎಂದು ವಿರೋಧ ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ವಿದೇಶಿ ವಿನಿಮಯ ಕೊರತೆಯಿಂದ ಆರ್ಥಿಕ ಬಿಕ್ಕಟ್ಟಿನಲ್ಲಿರುವ ಸರ್ಕಾರ ಅಸ್ಥಿರಗೊಳಿಸಿ, ಹೊಸ ಸರ್ಕಾರ ರಚನೆಗೆ ಬಯಸುವವರು, ಅಗತ್ಯವಿರುವ 113 ಸಂಸದರ ಬೆಂಬಲ ತೋರಿಸಲಿ ಎಂದು ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ಪ್ರತಿಪಕ್ಷಗಳಿಗೆ ಸವಾಲು ಹಾಕಿದ್ದರು.

ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿರುವ ವಿರೋಧ ಪಕ್ಷದ ಮುಖ್ಯ ಸಚೇತಕ ಲಕ್ಷ್ಮಣ್ ಕಿರೀಲ್ಲಾ, 'ಬಹುಮತ ಹೇಗೆ ಸಾಬೀತುಪಡಿಸುವೆವು ಎನ್ನುವುದನ್ನು ಈಗಲೇ ಬಹಿರಂಗಪಡಿಸಲ್ಲ' ಎಂದರು.

ಒಮೈಕ್ರಾನ್‌ನ ಉಪತಳಿ ಪತ್ತೆ

ಸಿಂಗಪುರ(ಪಿಟಿಐ): ಸಿಂಗಪುರದ ಇಬ್ಬರಲ್ಲಿ ಒಮೈಕ್ರಾನ್‌ನ ಬಿಎ. 2.12.1 ಉಪತಳಿ ಪತ್ತೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಬೀಜಿಂಗ್‌ನಲ್ಲಿ ಕೋವಿಡ್ ನಿರ್ಬಂಧ ಬಿಗಿ

ಬೀಜಿಂಗ್(ಎಎಫ್‌ಪಿ): ಕೋವಿಡ್ ಹೊಸ ಅಲೆ ವೇಗವಾಗಿ ಹರಡುತ್ತಿದ್ದು, ಬೀಜಿಂಗ್‌ನಲ್ಲಿ ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡಲು ಒಂದು ವಾರದ ಒಳಗೆ ಕೊರೊನಾ ಸೋಂಕು ಪತ್ತೆ ಪರೀಕ್ಷೆ ಮಾಡಿಸಿದ ಪ್ರಮಾಣ ಪತ್ರ ಸಲ್ಲಿಸುವುದು ಮೇ 5ರಿಂದ ಜಾರಿಗೆ ಬರಲಿದೆ ಎಂದು ಚೀನಾ ಸರ್ಕಾರ ಹೇಳಿದೆ.

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹53,420
ಆಭರಣ ಚಿನ್ನ (1 ಗ್ರಾಂ)	₹4,980
ಬೆಳ್ಳಿ (ಕೆ.ಜಿಗೆ)	₹65,500

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹394

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1610 (1620)
ಸೂರ್ಯಕಾಂತಿ (ರಿಫೈನ್ಡ್)	₹1935 (1935)
ಪಾಮೋಲಿನ್	₹161 (1612)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200-670
ದ್ವಿತಳಿ (ಬಿ.ವಿ)	₹266-810

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹165
ಆರ್‌ಎಸ್‌ಎಸ್-5	₹159
ಗುಡ್ ಲಾಟ್	₹155

ತೆಂಗು ಧಾರಣೆ (ಸಾವಿರಕ್ಕೆ) (ಮಂಗಳೂರು)

1ನೇ ದರ್ಜೆ	₹16000-20000
2ನೇ ದರ್ಜೆ	₹10000-15000

ಹಾಲ್‌ಮಾರ್ಕ್: ಜೂನ್ 1ರಿಂದ ಎರಡನೇ ಹಂತ

ನವದೆಹಲಿ (ಪಿಟಿಐ): ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಮಾಡುವ ನಿಯಮದ ಎರಡನೇ ಹಂತವು ಜೂನ್ 1ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಎರಡನೇ ಹಂತದಲ್ಲಿ 32 ಜಿಲ್ಲೆಗಳಲ್ಲಿ ಜಾರಿಗೆ ಬರಲಿದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯ ಹೇಳಿದೆ.

ಮೊದಲ ಹಂತದಲ್ಲಿ 256 ಜಿಲ್ಲೆಗಳಲ್ಲಿ 14, 18 ಮತ್ತು 22 ಕ್ಯಾರೆಟ್‌ನ ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯವನ್ನು ಜಾರಿಗೆ ತರಲಾಗಿದೆ.

ಮುಂಬೈ ಧಾರಣೆ

ಶೇಂಗಾ

30-4-2022

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10200-10250

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	1635 (1637)
ಪಾಮ್ ವಾರದ ಡೆಲಿವರಿ	1608 (1610)
ಸೂರ್ಯಕಾಂತಿ ಎಣ್ಣೆ ಕಚ್ಚಾ	1890 (1890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,600 (51,700)

ಬೆಳ್ಳಿ ಕೆ.ಜಿ 63,700 (64,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಕೋವಿಡ್‌ನಿಂದಾದ ನಷ್ಟ ಭರ್ತಿಗೆ ಬೇಕು 12 ವರ್ಷ'

ಮುಂಬೈ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದಿಂದ ಆಗಿರುವ ನಷ್ಟದಿಂದ ಹೊರಬರಲು ಭಾರತದ ಆರ್ಥಿಕತೆಗೆ 12 ವರ್ಷಗಳು ಬೇಕಾಗಲಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ವರದಿ ಹೇಳಿದೆ.

ಸಾಂಕ್ರಾಮಿಕದ ಅವಧಿಯಲ್ಲಿ ಭಾರತದ ಆರ್ಥಿಕತೆಯು ₹ 52 ಲಕ್ಷ ಕೋಟಿಗಳಷ್ಟು ಉತ್ಪಾದನಾ ನಷ್ಟ ಅನುಭವಿಸಿದೆ. 2034–35ರ ವೇಳೆಗೆ ಈ ನಷ್ಟದಿಂದ ಹೊರಬರುವ ನಿರೀಕ್ಷೆ ಮಾಡಲಾಗಿದೆ ಎಂದು 2021–22ರ 'ಕರೆನ್ಸಿ ಆ್ಯಂಡ್ ಫೈನಾನ್ಸ್ (ಆರ್‌ಸಿಎಫ್)' ವರದಿಯಲ್ಲಿ ಅಂದಾಜು ಮಾಡಲಾಗಿದೆ.

2020–21ರ ಮೊದಲ ತ್ರೈಮಾಸಿಕದಲ್ಲಿ ಭಾರಿ ಕುಸಿತ ಕಂಡ ಆರ್ಥಿಕ ಬೆಳವಣಿಗೆಯು ನಂತರದಲ್ಲಿ ತುಸು ಚೇತರಿಕೆ ಮರಳಿತ್ತು. ಆದರೆ 2021–22ರ ಏಪ್ರಿಲ್–ಜೂನ್ ಅವಧಿಯಲ್ಲಿ ಕೋವಿಡ್‌ನ ಎರಡನೇ ಅಲೆಯಿಂದಾಗಿ ಮತ್ತೆ ಇಳಿಕೆ ಹಾದಿ ಹಿಡಿಯಿತು. 2022ರ ಜನವರಿಯಲ್ಲಿ ಮೂರನೇ ಅಲೆಯು ಬರುವ ಸಾಧ್ಯತೆಯಿಂದಾಗಿ ಆರ್ಥಿಕ ಚೇತರಿಕೆಗೆ ಮತ್ತಷ್ಟು ಹಿನ್ನಡೆ ಆಯಿತು ಎಂದು ಹೇಳಿದೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಸರಕುಗಳ ಬೆಲೆ ಹೆಚ್ಚಾಗುತ್ತಿದ್ದು, ಜಾಗತಿಕ ಪೂರೈಕೆ ವ್ಯವಸ್ಥೆಯ ಮೇಲೆಯೂ ತೀವ್ರ ಪರಿಣಾಮ ಉಂಟಾಗುತ್ತಿದೆ. ಇದರಿಂದಾಗಿ ಜಾಗತಿಕ ಮತ್ತು ದೇಶಿ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಗೆ ಹಿನ್ನಡೆಯಾಗುತ್ತಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಯೆಸ್ ಬ್ಯಾಂಕ್‌ಗೆ ಲಾಭ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್ 2021–22ನೇ ಹಣಕಾಸು ವರ್ಷದಲ್ಲಿ ₹ 367 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 3,788 ಕೋಟಿಗಳಷ್ಟು ನಷ್ಟ ಅನುಭವಿಸಿತ್ತು.

ತ್ರೈಮಾಸಿಕದಲ್ಲಿ ವರಮಾನವು ₹ 4,678 ಕೋಟಿಗಳಿಂದ ₹ 5,829 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ತಿಳಿಸಿದೆ.

2021–22ರಲ್ಲಿ ₹ 1,066 ಕೋಟಿ ನಿವ್ವಳ ಲಾಭ ಗಳಿಸಿದೆ. 2020–21ರಲ್ಲಿ ₹ 3,462 ಕೋಟಿಗಳಷ್ಟು ನಷ್ಟ ಅನುಭವಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ತಟ್ಟಿಬೆಟ್ಟೆ	34099-47119	ಕೆಂಪುಗೋಟು	32216-34969
ಬಂಟ್ವಾಳ		**ಶಿರಸಿ**		ರಾಶಿ	48488-54300
ಕೋಕ	12500-25000	ಬೆಟ್ಟೆ	30299-44699	ತಟ್ಟಿಬೆಟ್ಟೆ	38969-46298
ಹೊಸತು	27500-45000	ಬಿಳಿಗೋಟು	23699-32199	**ತಿಪಟೂರು ಕೊಬ್ಬರಿ**	
ಹಳತು	46000-54000	ಚಾಲಿ	35700-41099	ಕನಿಷ್ಠ	15900
ಕಾರ್ಕಳ		ರಾಶಿ	30600-50989	ಗರಿಷ್ಠ	17250
ಹೊಸತು	40000-45000	**ತೀರ್ಥಹಳ್ಳಿ**		ಮಾದರಿ	17000
ಹಳತು	46000-54000	ಬೆಟ್ಟೆ	48166-53368	ಒಟ್ಟು ಅವಕ (ಕ್ವಿಂಟಲ್)	1675
ಪುತ್ತೂರು		ಇಡಿ	41668-49099		
ಕೋಕ	11000-26000	ಗೊರಬಲು	28172-36499		
ಹೊಸತು	27500-45000	ರಾಶಿ	35099-49199		
ಸಿದ್ದಾಪುರ		ಸರಕು	50166-80300		
ಬಿಳಿಗೋಟು	23699-32399	**ಯಲ್ಲಾಪುರ**			
ಕೋಕ	21399-32682	ಆಪಿ	54695-56399		
ಹೊಸಚಾಲಿ	35699-40399	ಬಿಳಿಗೋಟು	28919-34399		
ಕೆಂಪುಗೋಟು	28699-30612	ಚಾಲಿ	38010-40910		
ರಾಶಿ	44119-48599	ಕೋಕ	22312-30305		

ಮೂಡಿಗೆರೆ ಕಾಫಿ

	ಮುದ್ರಮನೆ
ಎಪಿ	16000
ಎಸಿ	8900
ಆರ್‌ಪಿ	9600
ಆರ್‌ಸಿ	4250

ರಿಯಲ್‌ಮಿ ಜಿಟಿ 3 ನಿಯೊ ಬಿಡುಗಡೆ

• ವಿಜಯಕುಮಾರ್ ಎಸ್.ಕೆ.

ನವದೆಹಲಿ: ರಿಯಲ್‌ಮಿ ನಾಲ್ಕನೇ ವರ್ಷದ ಸಂಭ್ರಮಕ್ಕೆ ವಿಶೇಷ ರಿಯಾಯಿತಿಯೊಂದಿಗೆ ನಾಲ್ಕು ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

ರಿಯಲ್‌ಮಿ ಜಿಟಿ ನಿಯೊ–2 ಮುಂದುವರಿದ ಭಾಗವಾಗಿ ನಿಯೊ–3 ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿದೆ. ಇದು 150 ವಾಟ್ ವೇಗದ ಚಾರ್ಜಿಂಗ್ ಸೌಲಭ್ಯ ಹೊಂದಿರುವ ಈ ಕಂಪನಿಯ ಮೊದಲ ಸ್ಮಾರ್ಟ್‌ಫೋನ್ ಆಗಿದೆ. ಕೇವಲ 5 ನಿಮಿಷದಲ್ಲಿ ಶೇ 50ರಷ್ಟು ಬ್ಯಾಟರಿ ಚಾರ್ಜ್ ಆಗಲಿದೆ. ನೀಲಿ ಮತ್ತು ಬಿಳಿ ಬಣ್ಣದ ರೇಸಿಂಗ್ ಸ್ಟ್ರೈಪ್ ವಿನ್ಯಾಸ ಹೊಂದಿದೆ.

ನಿಯೊ –3ನಲ್ಲೇ ಎರಡು ಬಗೆಯ ಸ್ಮಾರ್ಟ್‌ಫೋನ್‌ಗಳಿವೆ. ಒಂದು ಫೋನ್ 4,500 ಎಂಎಎಚ್ ಬ್ಯಾಟರಿಯೊಂದಿಗೆ 150 ವಾಟ್ ವೇಗದ ಚಾರ್ಜಿಂಗ್ ಸಾಮರ್ಥ್ಯ ಹೊಂದಿದೆ. ಇದಕ್ಕೆ ₹42,999 ದರ ನಿಗದಿ ಮಾಡಲಾಗಿದೆ. 5,000 ಎಂಎಎಚ್ ಬ್ಯಾಟರಿಯೊಂದಿಗೆ 80 ವಾಟ್ ವೇಗದ ಚಾರ್ಜಿಂಗ್ ಸಾಮರ್ಥ್ಯದ ಎರಡು (8ಜಿಬಿ + -128ಜಿಬಿ ಮತ್ತು 12ಜಿಬಿ + 256ಜಿಬಿ) ಸ್ಮಾರ್ಟ್‌ಫೋನ್‌ಗಳನ್ನು ಬಿಡುಗಡೆ ಮಾಡಿದೆ. ಈ ಫೋನ್‌ಗಳ ಬೆಲೆಯನ್ನು ಕ್ರಮವಾಗಿ ₹36,999 ಮತ್ತು 38,999 ನಿಗದಿ ಮಾಡಲಾಗಿದೆ.

'ಲೋಕಾರ್ಪಣೆ ಪ್ರಯುಕ್ತ ಈ ಮೂರು ಸ್ಮಾರ್ಟ್‌ಫೋನ್‌ಗಳಿಗೆ ₹7 ಸಾವಿರ ರಿಯಾಯಿತಿಯ ಕೊಡುಗೆ ನೀಡಲಾಗಿದೆ. ರಿಯಲ್‌ಮಿ ಡಾಟ್ ಕಾಮ್ ಮತ್ತು ಫ್ಲಿಪ್‌ಕಾರ್ಟ್‌ನಲ್ಲಿ ಮೇ 4ರಿಂದ ಇವುಗಳನ್ನು ಖರೀದಿಸಬಹುದು' ಎಂದು ರಿಯಲ್‌ಮಿ ಇಂಡಿಯಾದ ಸಿಇಒ ಮಾಧವ್ ಸೇಟ್ ತಿಳಿಸಿದರು.

ಇದರೊಂದಿಗೆ ಪ್ಯಾಡ್ ಮಿನಿ, ಸ್ಮಾರ್ಟ್‌ಟಿವಿ (40 ಮತ್ತು 43 ಇಂಚುಗಳು), ಇಯರ್ ಬಡ್‌ಗಳನ್ನೂ ರಿಯಲ್ ಮಿ ಬಿಡುಗಡೆ ಮಾಡಿದೆ. ಪ್ಯಾಡ್ ಮಿನಿ ಮತ್ತು ಇಯರ್ ಬಡ್ಸ್‌ಗಳು ಮೇ 2ರಿಂದ, ಸ್ಮಾರ್ಟ್‌ಟಿವಿಗಳು ಮೇ 5ರಿಂದ ಮಾರುಕಟ್ಟೆಯಲ್ಲಿ ಲಭ್ಯವಾಗಲಿವೆ ಎಂದು ವಿವರಿಸಿದರು.

(ಕಂಪನಿಯ ಆಹ್ವಾನದ ಮೇರೆಗೆ ವರದಿಗಾರ ದೆಹಲಿಗೆ ಭೇಟಿ ನೀಡಿದ್ದರು)

ಸೆಮಿಕಂಡಕ್ಟರ್ ತಯಾರಿಕೆ: ವೇದಾಂತ ಸಿದ್ಧತೆ

ಬೆಂಗಳೂರು (ರಾಯಿಟರ್ಸ್): ವೇದಾಂತ ಕಂಪನಿಯು ದೇಶದಲ್ಲಿ ಸೆಮಿಕಂಡಕ್ಟರ್ ತಯಾರಿಕೆಗಾಗಿ ₹ 22,950 ಕೋಟಿ ಸಾಲ ಪಡೆಯಲು ಬ್ಯಾಂಕ್‌ಗಳ ಜೊತೆ ಮಾತುಕತೆ ನಡೆಸುತ್ತಿದೆ.

ಸೆಮಿಕಂಡಕ್ಟರ್ ಚಿಪ್ ತಯಾರಿಕೆಯಲ್ಲಿ ಮುಂಚೂಣಿಗೆ ಬರಲು ಕಂಪನಿಯು ಯೋಜನೆ ರೂಪಿಸಿದೆ. ಈ ನಿಟ್ಟಿನಲ್ಲಿ ತೈವಾನ್‌ನ ಫಾಕ್ಸ್‌ಕಾನ್ ಕಂಪನಿ ಜೊತೆಗೂಡಿ ಜಂಟಿ ಸಂಸ್ಥೆಯೊಂದನ್ನು ರೂಪಿಸಿದೆ. ಒಟ್ಟಾರೆ ₹ 1.50 ಲಕ್ಷ ಕೋಟಿ ಹೂಡಿಕೆಯ ಯೋಜನೆಯನ್ನು ಕಂಪನಿ ಹೊಂದಿದೆ.

ಸೆಮಿಕಂಡಕ್ಟರ್ ತಯಾರಿಕಾ ಘಟಕವು 2025ರಲ್ಲಿ ಕಾರ್ಯಾಚರಣೆ ಆರಂಭಿಸಲಿದ್ದು, ಫಾಕ್ಸ್‌ಕಾನ್ ಸಿಬ್ಬಂದಿಯನ್ನು ಅಲ್ಲಿ ನೇಮಿಸಲಾಗುವುದು ಎಂದು ಕಂಪನಿಯ ಡಿಸ್‌ಪ್ಲೇ ಮತ್ತು ಸೆಮಿಕಂಡಕ್ಟರ್ ವಹಿವಾಟಿನ ಜಾಗತಿಕ ವ್ಯವಸ್ಥಾಪಕ ನಿರ್ದೇಶಕ ಆಕರ್ಷ್ ಹೆಬ್ಬಾರ್ ತಿಳಿಸಿದ್ದಾರೆ. ಸೆಮಿಕಾನ್ ಇಂಡಿಯಾ ಸಮಾವೇಶದ ಸಂದರ್ಭದಲ್ಲಿ ಅವರು ಮಾತನಾಡಿದರು.

ಸೆಮಿಕಂಡಕ್ಟರ್ ತಯಾರಿಕೆಗಾಗಿ ಕೇಂದ್ರ ಸರ್ಕಾರದ ಬೆಂಬಲವನ್ನು ಕಂಪನಿಯ ಕೇಳಿದೆ. ಹಲವು ರಾಜ್ಯಗಳೊಂದಿಗೆ ಮಾತುಕತೆಯನ್ನೂ ನಡೆಸುತ್ತಿದೆ. ಸಬ್ಸಿಡಿ ಪಡೆದ ಬಳಿಕ ಮತ್ತು ಒಪ್ಪಂದ ಆದ ಬಳಿಕ ಕಂಪನಿಯು ಬ್ಯಾಂಕ್‌ಗಳಿಂದ ಸಾಲ ಪಡೆಯಲಿದೆ ಎಂದು ಹೇಳಿದ್ದಾರೆ.

ಘಟಕ ಸ್ಥಾಪನೆ ಸಂಬಂಧ ಕರ್ನಾಟಕ ಸೇರಿದಂತೆ ಗುಜರಾತ್, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ದೇಶದ ಸೆಮಿಕಂಡಕ್ಟರ್ ಮಾರುಕಟ್ಟೆಯು 2026ರ ವೇಳೆಗೆ ₹ 4.81 ಲಕ್ಷ ಕೋಟಿಗೆ ತಲುಪಲಿದೆ ಎಂದು ಸರ್ಕಾರ ಹೇಳಿದೆ.

ಶಿಯೋಮಿಯ ₹5,551 ಕೋಟಿ ಇ.ಡಿಯಿಂದ ಜಪ್ತಿ

ನವದೆಹಲಿ (ಪಿಟಿಐ): ವಿದೇಶಿ ವಿನಿಮಯ ನಿಯಮ ಉಲ್ಲಂಘನೆ ಹಾಗೂ ಕಾನೂನುಬಾಹಿರ ಹಣ ವರ್ಗಾವಣೆಯಲ್ಲಿ ತೊಡಗಿದ ಆರೋಪದಡಿ ಜಾರಿ ನಿರ್ದೇಶನಾಲಯವು (ಇ.ಡಿ) ಚೀನಾ ಮೂಲದ ಶಿಯೋಮಿ ಇಂಡಿಯಾ ಕಂಪನಿಯ ಸುಮಾರು ₹5,551 ಕೋಟಿ ಹಣವನ್ನು ಜಪ್ತಿ ಮಾಡಿದೆ.

ಶನಿವಾರ ದೆಹಲಿ ಸೇರಿದಂತೆ ಕಂಪನಿಯ ವಿವಿಧ ಬ್ಯಾಂಕಿಂಗ್ ವಹಿವಾಟುಗಳನ್ನು ಪರಿಶೀಲನೆ ನಡೆಸಿ ಇ.ಡಿ ಈ ಕ್ರಮ ಕೈಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಯೋಮಿ ಭಾರತದಲ್ಲಿ ಸ್ಮಾರ್ಟ್‌ಫೋನ್ ಸೇರಿದಂತೆ ವಿವಿಧ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಬಿಡಿ ಭಾಗಗಳ ತಯಾರಿಕೆ ಮತ್ತು ಮಾರಾಟದಲ್ಲಿ ಮುಂಚೂಣಿಯಲ್ಲಿದೆ. 2014ರಲ್ಲಿ ವಹಿವಾಟು ಆರಂಭಿಸಿದ ಕಂಪನಿ, 2015ರಿಂದ ಈ ರೀತಿಯ ಅಕ್ರಮ ಹಣ ವರ್ಗಾವಣೆಯಲ್ಲಿ ಶಾಮೀಲಾಗಿರುವುದು ಗೊತ್ತಾಗಿದೆ ಎಂದು ಹೇಳಿದ್ದಾರೆ.

ಉಕ್ರೇನ್‌ಗೆ ಪಾಶ್ಚಾತ್ಯರ ಶಸ್ತ್ರಾಸ್ತ್ರ ನೆರವು

ರಷ್ಯಾ ದಾಳಿ ತೀವ್ರ

ಕೀವ್ (ಎಎಫ್‌ಪಿ, ರಾಯಿಟರ್ಸ್): ಉಕ್ರೇನ್‌ನ ದಕ್ಷಿಣ ಮತ್ತು ಪೂರ್ವ ಭಾಗದ ಮೇಲಿನ ಹಿಡಿತಕ್ಕೆ ರಷ್ಯಾ ದಾಳಿ ತೀವ್ರಗೊಳಿಸಿದೆ. ಹಾರ್ಕಿವ್ ನಗರದ ಮೇಲೂ ಶನಿವಾರ ನಿರಂತರ ಶೆಲ್ ದಾಳಿ ನಡೆದಿದೆ. ಉಕ್ರೇನ್ ಕೂಡ ಪ್ರತಿರೋಧ ಮುಂದುವರಿಸಿದ್ದು, ರಷ್ಯಾದ ಹಳ್ಳಿ ಮೇಲೆ ಕ್ಷಿಪಣಿ ಉಡಾಯಿಸಿದೆ.

ಪ್ರತಿರೋಧಕ್ಕೆ ಸೀಮಿತವಾಗಿದ್ದ ಉಕ್ರೇನ್, ಪಾಶ್ಚಾತ್ಯರ ಭಾರಿ ಶಸ್ತ್ರಾಸ್ತ್ರಗಳು ಕೈಸೇರಿದ ಮೇಲೆ ರಷ್ಯಾದ ನೆಲದ ಮೇಲೆ ಪ್ರತಿ ದಾಳಿ ನಡೆಸುತ್ತಿದೆ. ಬ್ರಿಯಾನ್‌ಸ್ಕ್ ಪ್ರದೇಶದ ಜಿಚೆನಾ ಬಳಿಯ ತೈಲ ಘಟಕಕ್ಕೆ ಉಕ್ರೇನ್‌ನ ಎರಡು ಕ್ಷಿಪಣಿಗಳು ಅಪ್ಪಳಿಸಿವೆ. ಉಕ್ರೇನಿನ ಯುದ್ಧ ವಿಮಾನಗಳು ರಷ್ಯಾ ಗಡಿ ಪ್ರವೇಶಿಸಿರುವುದು ಕಂಡುಬಂದಿದೆ ಎಂದು ಪ್ರಾದೇಶಿಕ ಗವರ್ನರ್ ಅಲೆಕ್ಸಾಂಡರ್ ಬೊಗೊಮಾಜ್ ತಿಳಿಸಿದ್ದಾರೆ.

'ದಕ್ಷಿಣ ಮತ್ತು ಪೂರ್ವ ಪ್ರದೇಶಗಳಲ್ಲಿ ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸುವ ಕಾರ್ಯತಂತ್ರದಲ್ಲಿ ಯಶಸ್ವಿಯಾಗಿದ್ದೇವೆ. ಹಾರ್ಕಿವ್ ನಮ್ಮ ನಿಯಂತ್ರಣದಲ್ಲೇ ಇದೆ. ಆದರೂ, ರಷ್ಯಾದ ನಿರಂತರ ದಾಳಿಯಿಂದ ಇಡೀ ನಗರ ಜರ್ಜರಿತವಾಗಿದೆ' ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಅವರು ಕೀವ್‌ಗೆ ಭೇಟಿ ನೀಡಿದ್ದಾಗಲೇ ಆ ನಗರದ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದನ್ನು ರಷ್ಯಾ ಒಪ್ಪಿಕೊಂಡಿದೆ.

ಜಿ–20 ಶೃಂಗಸಭೆಗೆ ಆಹ್ವಾನ: ಇಂಡೊನೇಷ್ಯಾದಲ್ಲಿ ನವೆಂಬರ್‌ನಲ್ಲಿ ನಡೆಯುವ ಜಿ20 ಶೃಂಗಸಭೆಗೆ ರಷ್ಯಾ ಅಧ್ಯಕ್ಷ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಆಹ್ವಾನಿಸಲಾಗಿದೆ. ಪುಟಿನ್ ಅವರನ್ನು ಆಹ್ವಾನಿಸಿರುವುದಕ್ಕೆ ಅಸಮಾಧಾನಗೊಂಡಿರುವ ಅಮೆರಿಕ, ಜಿ20 ಸದಸ್ಯ ರಾಷ್ಟ್ರವಲ್ಲದ ಉಕ್ರೇನ್‌ಗೆ ಆಹ್ವಾನ ನೀಡಿರುವುದನ್ನು ಸ್ವಾಗತಿಸಿದೆ. ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಾಗಿ ಪುಟಿನ್ ಮತ್ತು ಝೆಲೆನ್‌ಸ್ಕಿ ಖಚಿತಪಡಿಸಿದ್ದಾರೆ.

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 1 ಮೇ 2022

ಮಹಾಭಾರತಕ್ಕೆ 'ಬಾಹುಬಲಿ'ಯ ಸ್ಪರ್ಶ 11

ರಾಯಬಾಗ್ ಪೌಳ್ಯಾಗ ಕುಂತು ಬರ್ದೇನ್ರಿ ಯುರೋಪಿನ ಕತಿ 12

ಎಲೆಲೆ ಕೊಂಬು–ಕೊಕ್ಕಿನ ಹಕ್ಕಿ! 13

ಕುಲ್ಫಿ ತಿನ್ನಿ ಕುಫ್ರಿಗೆ ಬನ್ನಿ!

ಬೆವರಿಳಿಸಿ ಸುಸ್ತು ಮಾಡುವ ಬೇಸಿಗೆಯಲ್ಲಿ ರಪ್ಪನೆ ತಣ್ಣನೆಯ ಗಾಳಿ ಬೀಸಿದರೆ.... ಹಾಯ್ ಎನಿಸುತ್ತದೆ ಜೀವಕ್ಕೆ. ಅಂಥ ಚಿಲ್–ಥ್ರಿಲ್ ಭಾವಕ್ಕೇ ಜನ ತಂಪು ಪ್ರದೇಶಗಳನ್ನು ಅರಸಿ ಹೋಗುವುದು. ಮಕ್ಕಳಿಗೆ ಬೇಸಿಗೆ ರಜೆ ಬಂತೆಂದರೆ ಅವರ ಕಾಟ, ಸೆಕೆಯ ಕಾಟವನ್ನು ತಾಳಲಾರದೆ ಅಲ್ಲಿ ಇಲ್ಲಿ ಸುತ್ತಲೇಬೇಕು. ಆದರೆ, ಸ್ಥಳದ ಆಯ್ಕೆಯ ವಿಚಾರದಲ್ಲಿ ಎಲ್ಲರೂ ಚೂಸಿಯೇ. ಹಿಂದಿನ ಕಾಲದಂತೆ ಈಗಿನ ತಲೆಮಾರು ಹಳೆಯ ಪ್ರಸಿದ್ಧ ಸ್ಥಳಗಳಿಗೆ ಹೋಗುವ ಬದಲು, ಹುಡುಕೀ ಹುಡುಕೀ ಹೊಸ ಹೊಸ ಜಾಗಗಳಿಗೆ ಪ್ರವಾಸಕ್ಕೆಂದು ಹೋಗುತ್ತಾರೆ. ಮುಖವನ್ನು ಕೆಂಪು ಮಾಡುತ್ತಿರುವ ಸುಡು ಬೇಸಿಗೆಯಲ್ಲೂ ಕೂಲ್ ಎನಿಸುವ ಅಂತಹ ಕೆಲ ಪ್ರದೇಶಗಳತ್ತ ಇಣುಕುನೋಟ

ಬಿರು ಬೇಸಿಗೆಯಲ್ಲಿ ತಂಪು ತಂಪು ಕೂಲ್ ಕೂಲ್ ಪ್ರವಾಸ



ಕುಫ್ರಿಯಲ್ಲಿ ಬಿಸಿಲಧಗೆ ಮರೆಸುವ ಹಿಮದ ಹಾದಿ...

ಶುಭಶ್ರೀ ಪ್ರಸಾದ್

'ಓ ಹೋ ಹಿಮಾಲಯ...'

'ಬಾ ನಲ್ಲೆ ಮಧುಚಂದ್ರಕೆ' ಸಿನಿಮಾದಲ್ಲಿ ನಾಯಕ, ನಾಯಕಿ ಶಿಮ್ಲಾ ಮನಾಲಿಯಲ್ಲಿ ಹಾಡಿ ಕುಣಿದ ಹಾಡಿದು. ಅದನ್ನು ನೋಡಿದವರ ಕನಸಿನ ಶಿಮ್ಲಾ ಮನಾಲಿ ಕಾಡಿದ್ದರೆ ಅಚ್ಚರಿಯೇನಲ್ಲ. ಬೆಂಗಳೂರಿನಿಂದ ಚಂಡೀಗಡಕ್ಕೆ ರೈಲು ಅಥವಾ ವಿಮಾನದಲ್ಲಿ ಪ್ರಯಾಣಿಸಿದರೆ, ಅಲ್ಲಿಂದ ಶಿಮ್ಲಾ ತಲುಪಬಹುದು. ಶಿಮ್ಲಾದಿಂದ ಮನಾಲಿಯ ಪ್ರಯಾಣ ಕೂಡ ಹಿತಕರವೇ. ಬಿಸಿಯಲ್ಲದ ಹವೆ, ಕಣ್ ಹಾಯಿಸಿದಷ್ಟು ಬೆಟ್ಟ ಗುಡ್ಡಗಳು ಮತ್ತು ಗಿಡ ಮರಗಳು.

ಹಿಮಾಚಲಪ್ರದೇಶದ ಮನಾಲಿಯಿಂದ ಸುಮಾರು 12- 13 ಕಿ.ಮೀ ಹತ್ತಿರದ ಆಕರ್ಷಕ ಹಾಗೂ ರಮಣೀಯ ತಾಣ ಸೋಲಾಂಗ್ ಕಣಿವೆ. ಮನಾಲಿಯಿಂದ ಸೋಲಾಂಗ್ ಕಣಿವೆಗೆ ಹೋಗುವ ಇಕ್ಕೆಲಗಳಲ್ಲೂ ದೇವದಾರು–ಪೈನ್ ಮರಗಳು, ಸೇಬಿನ ತೋಟಗಳು; ಇವೆಲ್ಲವನ್ನೂ ಮೀರಿಸಿದ ಆಕರ್ಷಣೆಯೆಂದರೆ ಸುತ್ತಮುತ್ತ ಕಾಣುವ ಹಿಮ. ಬಿರುಬೇಸಿಗೆಯ ಸಂಜೆಯಲ್ಲೂ ಶಾಲು, ಸ್ವೆಟರ್ ಇಲ್ಲದೆ ಹೊರಬರಲು ಕಷ್ಟವೆನಿಸುವ ಚಳಿ. ಕಳೆದ ತಿಂಗಳು ನಾವು ಅಲ್ಲಿಗೆ ಪ್ರವಾಸ ಹೋಗಿದ್ದೆವು. ಇದ್ದಕ್ಕಿದ್ದಂತೆ ನಾವು ಮಾರ್ಚ್ ಏಪ್ರಿಲ್‌ನಿಂದ ಡಿಸೆಂಬರ್‌ಗೆ ಹಾರಿಬಿಟ್ಟೆವೇನೋ ಎಂಬ ಅನುಮಾನ ಹುಟ್ಟಿಸುವಷ್ಟು ಕುಳುಕುಳು ಚಳಿ.

ಕುದುರೆ ಅಥವಾ ಚಮರಿಮೃಗ ಅಥವಾ ಮೋಟಾರ್ ವಾಹನದಲ್ಲಿ ಸೋಲಾಂಗ್ ಕಣಿವೆಯ ಹಿಮದ ಬೆಟ್ಟವನ್ನು ಹತ್ತಬೇಕು. ಸಾಗರ ತೀರದಲ್ಲಿ ನಿಂತು ನೋಡಿದರೆ ಹೇಗೆ ಕಣ್ಣುದ್ದಕ್ಕೂ ನೀರೇ ಕಾಣುತ್ತದೋ, ಹಾಗೆಯೇ ಇಲ್ಲಿ ಕಣ್ಣು ಹಾಯಿಸಿದಷ್ಟೂ ದೂರ ಹಿಮವೇ ಹಿಮ. ಹಿಮದ ಗುಡ್ಡ, ಹಿಮ ಕರಗಿ ನೀರಾಗಿ ಹರಿವ ಪುಟ್ಟ ಪುಟ್ಟ ಕಾಲುವೆಗಳು, ಹಿಮದ ಜಾರುಗುಪ್ಪೆಗಳು, ಕೈಯಲ್ಲಿ ಹಿಡಿದು ಪುಡಿಪುಡಿ ಮಾಡಬಹುದಾದ ಹಿಮದ ಗುಡ್ಡೆಗಳು, ಒಬ್ಬರಿಗೊಬ್ಬರು ಹಿಮವನ್ನು ಎರಚಾಡಿ ಆಟವಾಡಬಹುದಾದ ರಮಣೀಯ ಸ್ಥಳ ಸೋಲಾಂಗ್ ವ್ಯಾಲಿ.

ಸ್ಕೀಯಿಂಗ್, ಪ್ಯಾರಾಗ್ಲೈಡಿಂಗ್, ಟ್ರೆಕ್ಕಿಂಗ್, ಕುದುರೆ ಸವಾರಿ, ರಾತ್ರಿ ಟೆಂಟ್ ವಾಸ, ಸ್ನೋ ಸ್ಕೂಟರ್ ಸವಾರಿ, ಝೂರ್ಬಿಂಗ್, ಇಳಿಜಾರುಗಳಲ್ಲಿ ಸೈಕಲ್ ಸವಾರಿ, ರೋಪ್ ವೇ ಯಾನ, ಜೀಪ್ ಸಫಾರಿಗೆ ಇದು ಹೆಸರುವಾಸಿ. ಇಲ್ಲಿನ ಪ್ರಮುಖ ಆಹಾರವೆಂದರೆ ಖಟ್ಟಾ, ಬಬ್ರು ಮತ್ತು ಅಕ್ತೋರಿ. ಸಿಹಿಗುಂಬಳದಿಂದ ಮಾಡುವ ಖಟ್ಟಾ ಆ ಸುತ್ತಲ ಪ್ರದೇಶದ ಪ್ರಸಿದ್ಧ ರಸ್ತೆಬದಿಯ ತಿಂಡಿಯೂ ಹೌದು. ಒಣಮಾವಿನ ಪುಡಿಯನ್ನು ಸೇರಿಸಿ ತಯಾರಿಸುವ ಖಟ್ಟಾದ ಪ್ರತೀ ತುಣುಕೂ ನಾಲಗೆಗೆ ಹಿತಕಾರಿ. ಕಚೋರಿಯಂತಹ ಬಬ್ರು ಇಲ್ಲಿನ ಮತ್ತೊಂದು ವಿಶೇಷ ಸ್ನ್ಯಾಕ್ಸ್. ಎಣ್ಣೆಯಲ್ಲಿ ಕರಿದುಮಾಡುವ ಬಬ್ರು ಚಟ್ನಿಯೊಂದಿಗೆ ರುಚಿಕರ. ಅಕ್ತೋರಿ ಒಂದು ರೀತಿಯ ಕೇಕ್ ಎನ್ನಬಹುದು. ಜೇನುತುಪ್ಪವನ್ನು ಮೇಲೆ ಸವರಿಕೊಂಡು ಆನಂದಿಸಬಹುದಾದ ಖಾದ್ಯ ಇದು.

ಹಿಮಾಚಲ ಪ್ರದೇಶದ ಒಂದು ಸಣ್ಣ ಗಿರಿಧಾಮ ಕುಫ್ರಿ. ಕುಫ್ರಿಗೂ ಚಳಿಗೂ ಅವಿನಾಭಾವ ಸಂಬಂಧ. ಕುಫ್ರಿಯಲ್ಲಿ ನಾವು ನೋಡಲೇಬೇಕಾದ ಸ್ಥಳವೆಂದರೆ ಫನ್ ವರ್ಲ್ಡ್. ಸಮುದ್ರ ಮಟ್ಟದಿಂದ ಸುಮಾರು 2800 ಮೀಟರ್ ಎತ್ತರದಲ್ಲಿರುವ ಇದು, ಪ್ರಪಂಚದ ಅತಿ ಎತ್ತರದ ಅಮ್ಯೂಸ್‌ಮೆಂಟ್ ಪಾರ್ಕ್‌ಗಳಲ್ಲಿ ಒಂದಾಗಿದೆ. ಕುಫ್ರಿಯಲ್ಲಿ ಬೆಟ್ಟದ ಮೇಲೆ ಹೋಗಲು ಕುದುರೆ ಬಿಟ್ಟು ಬೇರೆ ಯಾವ ಸಾಧನವೂ ಇಲ್ಲ. ಕರಗಿ ನೀರಾಗಿ ಹರಿಯುವ ಹಿಮ, ಅಲ್ಲಲ್ಲಿ ಕಾಣುತ್ತಲೇ ಸಿಗುವ ಹಿಮದ ಕರಣೆ... ದಕ್ಷಿಣ ಭಾರತದವರಿಗೆ ಕೈಗೇ ಸ್ವರ್ಗ ಸಿಕ್ಕಂತೆ ಭಾಸ.

ಕುಫ್ರಿಯಲ್ಲಿ ಮಾಡಲೇಬೇಕಾದ ಅತ್ಯಂತ ವಿಶಿಷ್ಟವಾದ ಚಟುವಟಿಕೆ ಎಂದರೆ ಯಾಕ್ ರೈಡ್. ಚುಮು ಚುಮು ಚಳಿಯಲ್ಲಿ ಚಮರೀಮೃಗದ ಮೇಲಿ ಕುಳಿತು ಕೈಲಿ ಗನ್ ಹಿಡಿದು ತೆಗೆಸಿಕೊಳ್ಳುವ ಫೋಟೊ ಆಜೀವಪರ್ಯಂತ ನೆನಪಿನಲ್ಲಿ ಉಳಿಯುತ್ತದೆ. ಇದರೊಟ್ಟಿಗೆ ಹಿಮಾಚಲದವರಂತೆ ವೇಷಭೂಷಣ ತೊಡುವ ಅವಕಾಶವೂ ಸದಾ ಹಸಿರಾಗಿರುವಂತಹ ನೆನಪಾಗಿರಲಿದೆ.

ಹಿಮಾಚಲದ ಸಾಂಪ್ರದಾಯಿಕ ಆಹಾರವೆಂದರೆ ಬಿಳಿ ಬ್ರೆಡ್ಡು ಮತ್ತು ಕೆಂಪು ಮಾಂಸ. ಧಮ್ ಎನ್ನುವುದು ಅಲ್ಲಿಯವರ ಸಮಾರಂಭಗಳಲ್ಲಿ ಉಣಬಡಿಸುವ ಆಹಾರ. ಪತ್ರೊಡೆ, ಚೀಲೆ, ಬಬ್ರು ಅಲ್ಲಿನ ಸ್ನ್ಯಾಕ್ಸ್‌ಗಳು. ಗೋಧಿ ಎಲೆ ಮತ್ತು ಗೋಧಿ ಹಿಟ್ಟಿನಿಂದ ಮಾಡಿದ ಅಕ್ತೋರಿ ಅಲ್ಲಿ ಆತಿಥ್ಯಕ್ಕೆ ನೀಡುವ ಆಹಾರ.

ದೇವರಮನೆ

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ದೇವರಮನೆ ನಿಜಕ್ಕೂ ದೇವರ ಮನೆಯಂತೆಯೇ ಭಾಸ. ದೇವರಮನೆ ಬೆಟ್ಟ ತನ್ನ ಮೇಲೆಲ್ಲ ಬರಿಯ ಹಸಿರು ಹೊದಿಕೆಯನ್ನೇ ಹೊದ್ದಿದೆ. ಬೇಸಿಗೆ ಕಾಲದಲ್ಲೂ ಹುಲ್ಲುಗಾವಲಿನಂತಿರುವ ದೇವರಮನೆ ನಗರ ಪ್ರದೇಶದ ಜನರಿಗೆ ಸ್ವರ್ಗದಂತೆ ಕಂಡರೆ ಅಚ್ಚರಿ ಪಡಬೇಕಿಲ್ಲ.

ದೇವರಮನೆ ಕಣಿವೆಗಳ ಮಧ್ಯದ ಒಂದು ಹಳ್ಳಿ. ಸುತ್ತ ಪುಟ್ಟಪುಟ್ಟ ಹಸಿರಿನ ಗುಡ್ಡಗಳು, ನಡುವೆ ಕಣಿವೆ. 800 ವರ್ಷಗಳ ಇತಿಹಾಸ ಹೊಂದಿರುವ ಕಾಲಭೈರವೇಶ್ವರ ಸ್ವಾಮಿ ದೇಗುಲವೂ ಇಲ್ಲಿನ ಪ್ರಮುಖ ಆಕರ್ಷಣೆಗಳಲ್ಲೊಂದು. ಸುತ್ತಮುತ್ತಲ ಬಹುತೇಕರಿಗೆ ಈತ ಮನೆದೇವರು. ಆ ಕಾರಣದಿಂದಲೋ ಏನೋ ಇದಕ್ಕೆ ದೇವರಮನೆ ಎಂದು ಹೆಸರು.

ಬೆಟ್ಟದ ಮೇಲೆ ಬೀಸುವ ಹಿಮದ ಗಾಳಿಗೆ ಕಣ್ರೆಪ್ಪೆ ತೇವವಾಗುತ್ತದೆ. ಮುಂಗುರುಳು ನಾಟ್ಯವಾಡುತ್ತದೆ. ಮಧ್ಯಮ ಮಟ್ಟದ ಟ್ರೆಕ್ಕಿಂಗ್ ಮತ್ತು ಛಾಯಾಗ್ರಹಣಕ್ಕೆ ಹೇಳಿಮಾಡಿಸಿದ ಸ್ಥಳ ದೇವರಮನೆ. ಕುಟುಂಬದವರೊಂದಿಗೆ, ಸ್ನೇಹಿತರೊಂದಿಗೆ ಆಟವಾಡಲು ಅಲ್ಲಿಯೇ ಒಂದು ನದೀಪಾತ್ರವಿದೆ. ಒಂದು ಕೊಳವೂ ಇದೆ. ರಾತ್ರಿಯ ವೇಳೆ ಕಾಡಾನೆಗಳು ನೀರು ಕುಡಿಯಲು ಈ ಕೊಳದ ಬಳಿ ಬರುತ್ತವೆಯಂತೆ.

ದೇವರಮನೆ ಬೆಟ್ಟದ ಆಸುಪಾಸಿನಲ್ಲಿಯೇ ಹೊನ್ನಮ್ಮ ಹಳ್ಳ ಫಾಲ್ಸ್, ಹೆಬ್ಬೆ ಫಾಲ್ಸ್‌ಗಳಿವೆ. ಮೈದಾದಿ ವ್ಯೂ ಪಾಯಿಂಟ್ ನೋಡಲೇಬೇಕಾದ ಸ್ಥಳ. ಅಪ್ಪೆ ಗುಂಡಿ, ಪಾಂಡವರ ಬೆಟ್ಟ, ಝರಿ ಫಾಲ್ಸ್, ಮಗಜಹಳ್ಳಿ ಫಾಲ್ಸ್, ಕೊಡಿಗೆ ಫಾಲ್ಸ್, ದೇವೃಂದ ಪ್ರಸನ್ನರಾಮೇಶ್ವರ ದೇಗುಲ ಇವೆಲ್ಲವುಗಳು ಪ್ರವಾಸಿಗರ ಮೈಮನ ತಣಿಸುತ್ತವೆ. ಫಾಲ್ಸ್‌ಗಳು ಈಗ ಸೊರಗಿದರೂ ಅಲ್ಲಿನ ತಾಣಗಳು ತಂಪನ್ನು ಎರೆಯುತ್ತವೆ. ಈ ಪ್ರದೇಶದಿಂದ ದಕ್ಷಿಣಕನ್ನಡದ ಕೆಲ ಭಾಗಗಳನ್ನು ವೀಕ್ಷಿಸಬಹುದು. ಬಹುಶಃ ಪ್ರಚಾರದ ಕೊರತೆಯಿಂದ ಹೊರಗಿನವರು ಇಲ್ಲಿಗೆ ಬರುವುದು ತೀರ ಹೆಚ್ಚೇನಲ್ಲ. ಆದರೆ ಚಿಕ್ಕಮಗಳೂರಿನವರು ಆಗಾಗ್ಗೆ ಇಲ್ಲಿಗೆ ಬಂದು ದೇವನ ದರ್ಶನವನ್ನು ಪಡೆಯುತ್ತಾರೆ. ಅಲ್ಲಿಯೇ ಒಂದೆರಡು ದಿನ ತಂಗಲು ಹೋಂ ಸ್ಟೇ ಕೂಡ ಇದೆ. ಹೀಗಾಗಿ ಬಯಸಿದರೆ ರಾತ್ರಿಯಲ್ಲಿ ಗಾಳಿಯ ಕಿರು ಸದ್ದನ್ನು ಆಲಿಸುತ್ತಾ ಮಲಗಬಹುದು.

ಗೋಪಿನಾಥಂ ಬೆಟ್ಟ

ಚಿಕ್ಕಬಳ್ಳಾಪುರದ ನಂದಿ ಬೆಟ್ಟದಿಂದ ಸುಮಾರು 7 ಕಿ.ಮೀ ದೂರದಲ್ಲಿರುವ ದೇವಿಶೆಟ್ಟಿಹಳ್ಳಿ ಸಮೀಪದ ಗೋಪಿನಾಥಂ ಬೆಟ್ಟ ಅತ್ಯಂತ ಪ್ರಶಾಂತ ಮತ್ತು ತಣ್ಣಗಿನ ಚಿಕ್ಕ ಬೆಟ್ಟ. ಝಿಗ್ ಝಾಗ್ ರೀತಿಯಲ್ಲಿ ಇರುವ ಬೆಟ್ಟದ ಹಾದಿಯನ್ನು ನಡೆದೂ ಕ್ರಮಿಸಬಹುದು, ಕಾರಿನಲ್ಲಿಯೂ ಹೋಗಬಹುದು. ಇಲ್ಲಿಂದ ಪಂಚಗಿರಿಗಳಾದ ನಂದಿಗಿರಿ, ಚಂದ್ರಗಿರಿ, ಬ್ರಹ್ಮಗಿರಿ, ಹೇಮಗಿರಿ ಮತ್ತು ಸ್ಕಂದಗಿರಿ ಬೆಟ್ಟಗಳ ನೋಟ ನಯನ ಮನೋಹರ. ಈ ಬೆಟ್ಟದಲ್ಲಿ 600 ವರ್ಷಗಳಷ್ಟು ಹಳೆಯದಾದ ಉದ್ಭವಮೂರ್ತಿ ಎನ್ನಲಾಗುವ ಗೋವರ್ಧನಗಿರಿ ಲಕ್ಷ್ಮೀ ನರಸಿಂಹಸ್ವಾಮಿಯ ದೇಗುಲವಿದೆ. ಮತ್ತೊಂದು ಬದಿಯಲ್ಲಿ ಕೃಷ್ಣ ಗುಹೆ ಕೂಡ ಇದೆ. ಬೆಟ್ಟದ ಮೇಲೆ ಅಲುಗಾಡದೆ ನಿಲ್ಲುವುದೇ ನಿಜಕ್ಕೂ ಒಂದು ಸಾಹಸ. ಹೆಂಗಸರು ತಮ್ಮ ಸೀರೆಯನ್ನು ಭದ್ರವಾಗಿಟ್ಟುಕೊಳ್ಳಲು ದೊಡ್ಡ ಸರ್ಕಸ್ಸನ್ನೇ ನಡೆಸಬೇಕು. ಎಂಥ ನಿಡುಬೇಸಿಗೆಯಲ್ಲೂ ರೊಯ್ಯನೆ ರಭಸದಿಂದ ಬೀಸುವ ತಂಗಾಳಿಯೇ ಗೋಪೀನಾಥಂ ಬೆಟ್ಟದ ವಿಶೇಷ. ಒಂದು ಮದುವೆಗೆಂದು ನಾನು ಗೋಪೀನಾಥಂ ಬೆಟ್ಟಕ್ಕೆ ಹೋಗಿದ್ದಾಗ ನನ್ನ ಸೀರೆಯಲ್ಲಿ ಗಾಳಿ ತುಂಬಿಕೊಂಡು ಮಣಿಪುರಿ ನೃತ್ಯದ ವೇಷಭೂಷಣವನ್ನು ನೆನಪಿಸುವಂತಿತ್ತು. ಬೆಟ್ಟದ ಮೇಲ್ಮೈಯಿಂದ ಸುತ್ತಲಿನ ಹಸಿರು ಪರಿಸರ ಅಗೋಚರ ಆನಂದವನ್ನು ತುಂಬುತ್ತದೆ. ಆಸ್ತಿಕರಿಗಾಗಲಿ, ನಾಸ್ತಿಕರಿಗಾಗಲಿ ಇದೊಂದು ರಮ್ಯ ತಾಣ. ಪ್ಯಾರಾಗ್ಲೈಡಿಂಗ್ ಕೂಡ ಮಾಡಬಹುದಾದ ಅವಕಾಶ ಇಲ್ಲಿದೆ. ಒತ್ತಡದ ನಡುವೆ ಕೆಲಸ ಮಾಡುವವರಿಗೆ ಒಂದು ವೀಕ್‌ಎಂಡ್ ನಿರುಮ್ಮಳವಾಗಿ ಕಾಲಕಳೆಯಬಹುದಾದ ಸ್ಥಳ ಗೋಪೀನಾಥಂ ಬೆಟ್ಟ.

ಮಾಳ

ಉಡುಪಿಯ ಕಾರ್ಕಳದ ಸಮೀಪವಿರುವ ಮಾಳ ಎಂಬ ತಂಪು ಪ್ರದೇಶಕ್ಕೆ ರೈಲುಮಾರ್ಗವಾಗಿಯೂ, ಬಸ್ಸಿನಿಂದಲೂ, ಖಾಸಗಿ ವಾಹನದ ಮೂಲಕವೂ ತಲುಪಬಹುದು. ಕಾರ್ಕಳದಿಂದ ಟ್ಯಾಕ್ಸಿಯೂ ಲಭ್ಯ. ಬೆಂಗಳೂರಿನಿಂದ ಸುಮಾರು ನಾಲ್ಕುನೂರು ಕಿ.ಮೀ. ದೂರದ ಮಾಳ ಪ್ರಕೃತಿ ಸೊಬಗಿನಿಂದ ಕೂಡಿದ ತಂಪಾಗಿರುವ ಹಳ್ಳಿ.

ದಕ್ಷಿಣ ಕನ್ನಡದ ಬೇಸಿಗೆಯ ಬಿಸಿಯಲ್ಲಿ ತಂಪಾದ ಸ್ಥಳ ಈ ಮಾಳ. ಇಲ್ಲಿನ ಕಾಡಲ್ಲಿ ನಡೆಯುತ್ತ ಹಸಿರು ಸೊಗಸನ್ನು ಅನುಭವಿಸಿಯೇ ತೀರಬೇಕು. ಝುಳು ಝುಳು ಹರಿವ ಜಲಧಾರೆಯ ಸಂಗೀತ ಕರ್ಣಾನಂದಕರ.

ಸಹಸ್ರಾರು ಜೀವರಾಶಿಗಳನ್ನು, ಅನೇಕ ಪುಟ್ಟ ತೊರೆಗಳನ್ನು ಹೊತ್ತ ಮಾಳ ಕಾರ್ಕಳಕ್ಕೊಂದು ಶಿಖರಪ್ರಾಯ ಪ್ರವಾಸಿ ತಾಣ, ಚಾರಣಿಗರ ಸಗ್ಗ. ಹಾದಿಯುದ್ದಕ್ಕೂ ಹಸಿರರಾಶಿಯೇ. ಹಕ್ಕಿ ಪಕ್ಷಿಗಳಿಂಚರಕ್ಕೆ ಕಿವಿಗೊಟ್ಟರೆ ಬೇರೆಯದೇ ಲೋಕಕ್ಕೆ ಅಡಿಯಿಟ್ಟಂತೆನಿಸುತ್ತದೆ. ಮನಸು ಪ್ರಶಾಂತವಾಗುತ್ತದೆ. ಇಡೀ ಮಾಳದ ಹಾದಿ ಕಣ್ಣಿಗೆ ರಸಗವಳ.

ದಾನಗುಂಡಿ ಜಲಪಾತ, ಕುರೆಂಗಲ್ ಜಲಪಾತ, ಪಶ್ಚಿಮಘಟ್ಟದ ಮೇಲ್ಮೈಯಿಂದ ಜಿಗಿಜಿಗಿದು ಮಲೆನಾಡಿಗೆ ಸೇರುತ್ತದೆ. 500-600 ಅಡಿ ಎತ್ತರದಿಂದ ಕುಣಿಯುತ್ತಾ ಬಂಡೆಗಲ್ಲಿಗೆ ರಾಚುವ ದಾನಗುಂಡಿಯ ಜಲಪಾತದ ಆರ್ಭಟ ನೋಡಲು ಮಳೆಗಾಲದಲ್ಲಿ ಇಲ್ಲಿಗೆ ಮತ್ತೊಮ್ಮೆ ಬರಬೇಕು. ನೀರಯಾನದ ಸಂಗೀತಕ್ಕೆ ಕಿವಿಯಾನಿಸುವ ಬಯಕೆ ಮತ್ತೆ ಮತ್ತೆ ಮೈದುಂಬುತ್ತದೆ.

ಜಲಪಾತದ ಆಚೆಗೆ ಕಾಡಜನರೇ ನಿರ್ಮಿಸಿದ ಅಡಿಕೆ ಮರದ ತೂಗು ಸೇತುವೆ ಮೇಲೆ ನಿಂತು ಸುತ್ತಲೂ ನೋಡಲು ಬಲು ರಮ್ಯ. ಮಾಳದಿಂದ ಸುಮಾರು 7 ಕಿಮೀ ದೂರದಲ್ಲಿ ಗಂಗಾಮೂಲ ಎಂಬ ಪವಿತ್ರ ಗುಹಾ ಕ್ಷೇತ್ರವಿದೆ. ತುಂಗಾ ಹಾಗೂ ಭದ್ರಾನದಿಗಳ ಉಗಮ ಸ್ಥಾನವಾದ್ದರಿಂದ ಪವಿತ್ರ ತೀರ್ಥ ಸಂಗಮವನ್ನು ಕಾಣಬಹುದು. ಮಾಳದಲ್ಲಿಯೂ ಹೋಂ ಸ್ಟೇ ಇದೆ. ಪ್ರಸನ್ನವಾದ ಈ ಪ್ರದೇಶದಲ್ಲಿ ರಾತ್ರಿ ತಂಗಿ ನಿಶಾಚರ ಮೃಗಪಕ್ಷಿಗಳ ಧ್ವನಿಯನ್ನು ಆಲಿಸಬಹುದು.



ಮಾಳದಲ್ಲಿ ಕಣ್ಣು ಹಾಯಿಸಿದಷ್ಟೂ ದೂರ ಹಸಿರ ಮೆರವಣಿಗೆಯಾದರೆ ಕಾಲು ಇಟ್ಟಲ್ಲೆಲ್ಲ ತಂಪೆರೆಯುವ ನೀರು ಚಿತ್ರ: ನಾಗೇಶ ಶೆಣೈ, ಮಾಳ



ಬಿಸಿಲಿನೊಂದಿಗೆ ಹೆಜ್ಜೆಹಾಕಿ!

ಮಳೆಗಾಲದಲ್ಲಿ ಮಳೆ ಆನಂದಿಸಲು ಹೋಗುವಂತೆ, ಚಳಿಗಾಲದಲ್ಲಿ ಚಳಿ ಆನಂದಿಸಲು ಹೋಗುವಂತೆ ಬೇಸಿಗೆಯಲ್ಲಿ ಬಿಸಿಲನ್ನು ಆಸ್ವಾದಿಸುವ ಮನಸ್ಸು ನಿಮಗಿದೆಯೇ? ಹಾಗಾದರೆ ಹಂಪಿಗೆ ಬನ್ನಿ. ಎತ್ತ ನೋಡಿದರೂ ಬಂಡೆಗಲ್ಲುಗಳು ಇರುವ, ಆ ಬಂಡೆಗಲ್ಲುಗಳ ನಡುವೆ ಸ್ಮಾರಕಗಳು ಪವಡಿಸಿರುವ ಈ ಊರಿನಲ್ಲಿ ಮಧ್ಯಾಹ್ನದ ಬಿಸಿಲು ಅಕ್ಷರಶಃ ಕೆಂಡವನ್ನೇ ಸುರಿಸುತ್ತದೆ. ಬಂಡೆಗಲ್ಲಿನ ಮೇಲೆ ಬರಿಗಾಲಲ್ಲಿ ನಾಲ್ಕಾರು ಹೆಜ್ಜೆ ಇಟ್ಟರೂ ಸಾಕು, ಬರೆ ಎಳೆದಂತೆ ಚರ್ಮ ಸುಟ್ಟು ಬಣ್ಣ ಬದಲಾಯಿಸುತ್ತದೆ.

ನೆತ್ತಿಯ ಮೇಲಿನಿಂದ ಸೂರ್ಯ 'ಪರಮಾತ್ಮ'ನಂತೂ ಒಂದೇಸಮನೆ ಕೆಂಡವನ್ನು ಸುರಿಸುತ್ತಾನೆ. ಇಲ್ಲಿನ ದೇವಾಲಯಗಳಲ್ಲಿರುವ ದೇವಾನುದೇವತೆಗಳು ಅದು ಹೇಗೆ ಈ ತಾಪವನ್ನು ಸಹಿಸಿಕೊಂಡಿದ್ದಾರೋ ಏನೋ. ಅಂದಹಾಗೆ, ಇಂತಹ ಬಿಸಿಲಿನಲ್ಲಿ, ಬಿಸಿಗಾಳಿಯಲ್ಲಿ ಮಾತಂಗ ಪರ್ವತವನ್ನೋ ಅಂಜನಾದ್ರಿ ಬೆಟ್ಟವನ್ನೋ ಏರುವ ಮಜವೇ ಬೇರೆ! ಗುಂಡಿಗೆ ಗಟ್ಟಿ ಇದ್ದವರು ಖಂಡಿತ ಈ ಸಾಹಸಕ್ಕೆ ಕೈಹಾಕಬಹುದು. ಅಂಜನಾದ್ರಿ ಬೆಟ್ಟದ ಕಲ್ಲುಸಂದಿಯಿಂದ ತೂರಿಬರುವ ತಣ್ಣನೆಯ ಹವೆಯನ್ನು ಯಾವ ಎ.ಸಿ. ಯಂತ್ರವೂ ಕೊಡುವುದಿಲ್ಲ ಬಿಡಿ.

ಬಿಸಿಲಲ್ಲಿ ಬಂದವರಿಗೆ ಇಲ್ಲಿನ ಪ್ರತೀ ಸ್ಮಾರಕದ ಮುಂದೆಯೂ ಎಳನೀರು, ಮಜ್ಜಿಗೆ, ಜ್ಯೂಸ್‌ನ ಸಮಾರಾಧನೆ. ಬೇಸಿಗೆಯಲ್ಲಿ ತಣ್ಣನೆಯ ಐಸ್ ಕ್ರೀಮ್ ತಿನ್ನುವ ಹಿತವಿದೆಯಲ್ಲಾ, ನೆತ್ತಿ ಸುಡುವಾಗ ತಣ್ಣನೆಯ ನಿಂಬೆ ಪಾನಕ ಕುಡಿವುದಿದೆಯಲ್ಲಾ, ಬಿಸಿಲಲ್ಲಿ ಓಡಿ ಬಂದವರಿಗೆ ತಣ್ಣನೆಯ ಗಾಳಿ ಬೀಸುವುದಿದೆಯಲ್ಲಾ – ಇವೆಲ್ಲ ಕಷ್ಟದ ಬದುಕನ್ನು ಸುಲಭವಾಗಿಸುವ ಮಾರ್ಗಗಳ ಬಿಂಬಗಳು. ಅಂತೆಯೇ ಪ್ರವಾಸ ಕೂಡ. ಅದನ್ನು ಅನುಭವಿಸಿಯೇ ಆನಂದಿಸಬೇಕು.

ಬಿಸಿಲೆ ಅರಣ್ಯದಲ್ಲಿ ವಿಹರಿಸಲು ಬೆಳ್ಳಕ್ಕಿಗಳ ಆಮಂತ್ರಣ ಚಿತ್ರ: ಜಾನಕೆರೆ ಪರಮೇಶ್

ಬಿಸಿಲೆ ಘಾಟ್

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಿಂದ 35 ಕಿ.ಮೀ. ದೂರದಲ್ಲಿರುವ ಬಿಸಿಲೆ ಎಂಬ ಘಟ್ಟ ಪ್ರದೇಶವು 40 ಹೆಕ್ಟೇರುಗಳಷ್ಟು ಮೀಸಲು ಅರಣ್ಯವಾಗಿ ಹರಡಿಕೊಂಡಿದೆ. ಬಿಸಿಲೆಯಿಂದ ಆರಂಭವಾಗಿ ಕುಕ್ಕೆ ಸುಬ್ರಹ್ಮಣ್ಯದ ತನಕ ಹಬ್ಬಿರುವ ಈ ವಿಶಾಲವಾದ ಅರಣ್ಯ ಪ್ರದೇಶದಲ್ಲಿ ಕುಮಾರ ಪರ್ವತ, ಎಣ್ಣೆಕಲ್ಲು, ಪಟ್ಲ, ದೊಡ್ಡಬೆಟ್ಟ, ಪುಷ್ಪಗಿರಿ ಮತ್ತು ಕನ್ನಡಿಕಲ್ಲು ಎಂದು ಹೆಸರಿಸಲಾದ ಅನೇಕ ಬೆಟ್ಟಗುಡ್ಡಗಳಿವೆ.

ಅರಣ್ಯ ಎಂದಮೇಲೆ ಕಾಡುಪ್ರಾಣಿಗಳಿಗೇನು ಕೊರತೆ? ಇಲ್ಲಿ ಕಾಡುಹಂದಿ, ಕಡವೆ, ಜಿಂಕೆ, ಆನೆ, ಕಾಡುಕೋಣಗಳನ್ನು ನೋಡಬಹುದು. ಸುತ್ತಲಿನ ಪರಿಸರವನ್ನು ವೀಕ್ಷಿಸಲು ಬಿಸಿಲೆ ವೀಕ್ಷಣಾ ಗೋಪುರವನ್ನೂ ನಿರ್ಮಿಸಲಾಗಿದೆ. ಇಲ್ಲಿಂದ ಸುತ್ತಲಿನ ಬೆಟ್ಟದುಡ್ಡಗಳು ಮತ್ತು ಗಿರಿ ಹೊಳೆ ಬಲು ಸುಂದರವಾಗಿ ಕಾಣುತ್ತದೆ. ಭಾರತದ ಅತ್ಯಂತ ಸುಂದರವಾದ ಮಳೆಕಾಡುಗಳಲ್ಲಿ ಇದೂ ಒಂದು.

ನಿತ್ಯ ಹರಿದ್ವರ್ಣವನವಾದ ಬಿಸಿಲೆ ಘಾಟ್‌ನಲ್ಲಿ ಚಾರಣಕ್ಕೂ ಅವಕಾಶವಿದೆ. ಮಧ್ಯೆ ಮಧ್ಯೆ ಕಲ್ಲು ಬಂಡೆಗಳಿಂದ ಹರಿವ ನೀರಿನ ಝರಿ ಕಣ್ಣಿಗೆ ಹಬ್ಬ. ಇಲ್ಲಿನ ಬಿಸ್ಲೆ ಗುಡ್ಡ ಅಥವಾ ಸನ್ನಿ ಗುಡ್ಡ ಅತ್ಯಂತ ಮನೋಹರವಾದ ಪ್ರವಾಸಿ ತಾಣ.

ಹಾಡುಗಾರನ ಹೃದಯ ಹಾದಿ

ಅಶೋಕ ಹುಗ್ಗಣ್ಣವರ

ಹೊನ್ನಾವರದಲ್ಲಿ ಇಂದು 'ಸಂಗೀತ ಗುರು', ಗಾಯಕ ಅಶೋಕ ಹುಗ್ಗಣ್ಣವರ ಅವರಿಗೆ ಶಿಷ್ಯವೃಂದದಿಂದ ನಾದಾಭಿನಂದನೆ. ಅವರ ಬದುಕು, ವ್ಯಕ್ತಿತ್ವದ ಒಂದು ನೋಟ ಇಲ್ಲಿದೆ

ಶ್ರೀಧರ ಬಳಗಾರ

ಕಾಡು ಮತ್ತು ಕಡಲಿನ ಉತ್ತರ ಕನ್ನಡಕ್ಕೂ ಬೆಳವಲ ನಾಡು ಧಾರವಾಡ ಸೀಮೆಗೂ ಮೊದಲಿನಿಂದಲೂ ಸಾಂಸ್ಕೃತಿಕ ಸಂಬಂಧವಿದೆ. ಮಳೆಗೆ ಸಮುದ್ರ ತೀರದ ಕನ್ನಡ ಜಿಲ್ಲೆಯ ಮೋಡವನ್ನು ಧಾರವಾಡ ನೋಡುತ್ತಿದ್ದರೆ ಬೆಳೆಗೆ ಬೆಳವಲದ ಹಸುರು ಬಯಲತ್ತ ಕನ್ನಡ ಜಿಲ್ಲೆ ಮುಖ ಹಾಕುತ್ತದೆ. ಉತ್ತರ ಕನ್ನಡದವರು ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಉನ್ನತ ಶಿಕ್ಷಣವನ್ನು ಅರಸಿ ಹೋದವರು; ವೈದ್ಯಕೀಯ ಚಿಕಿತ್ಸೆಗಾಗಿ ಅಲ್ಲಿಯ ಆಸ್ಪತ್ರೆಗಳನ್ನು ಅವಲಂಬಿಸಿದವರು; ಸಂತೆ ವ್ಯಾಪಾರವನ್ನು ತಪ್ಪಿಸಿದವರಲ್ಲ; ಧಾರವಾಡ ಆಕಾಶವಾಣಿಯಲ್ಲಿ ಸುಗಮ ಸಂಗೀತ ಹಾಡಿ, ಯುವವಾಣಿಯಲ್ಲಿ ಕವಿತೆಗಳನ್ನು ಓದಿ, ಕೃಷಿರಂಗದ ಸಂದರ್ಶನದಲ್ಲಿ ಭಾಗವಹಿಸಿ, ತಾಳಮದ್ದಲೆ ಪ್ರಸ್ತುತಿಪಡಿಸಿ ತರಂಗಾಂತರದಿಂದ ಹತ್ತಿರವಾದವರು. ಪ್ರತೀ ಮನೆಯ ರೇಡಿಯೊದಲ್ಲಿ ಧಾರವಾಡದ ಬೇಂದ್ರೆ, ಮನ್ಸೂರ್ ಅಶರೀರವಾಣಿಯಾಗಿ ಹಾಜರಾದವರು; ಕನ್ನಡ ಶಾಲೆಯ ಪಠ್ಯ ಪುಸ್ತಕದಲ್ಲಿ ಪರಿಚಯಿಸಿಕೊಂಡವರು.

ಉನ್ನತ ಪದವಿ ಓದಿಗೆ ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದ ಉತ್ತರ ಕನ್ನಡ ಜಿಲ್ಲೆಯವರಿಗೆ ಧಾರವಾಡದಲ್ಲಿ ಸಾಹಿತ್ಯ ಮತ್ತು ಸಂಗೀತ ಬೋನಸ್ಸಾಗಿ ದೊರಕುತ್ತಿತ್ತು. ಓದಿನ ದಿನಗಳಲ್ಲಿ ಹಾಸ್ಟೇಲಿನಲ್ಲೊ ಕೈ ಅಡಿಗೆಯ ಬಾಡಿಗೆ ಖೋಲಿಯಲ್ಲೊ ಉಳಿಯುತ್ತಿದ್ದವರಿಗೆ ಉತ್ತರ ಭಾರತದಿಂದ ಬರುತ್ತಿದ್ದ ಲೋಕ ಪ್ರಸಿದ್ಧ ಸಂಗೀತಗಾರರ ಗಾಯನ ಕಲಾಭವನದಲ್ಲಿ ಇಡೀ ರಾತ್ರಿ ಉಚಿತವಾಗಿ ಸಿಗುತ್ತಿತ್ತು. ಮುರುಘಾಮಠದ ಜಾತ್ರೆಯಲ್ಲಿ ಮನ್ಸೂರರು ಹಾಡುತ್ತಿದ್ದ ಅಕ್ಕನ ವಚನದ ಗುಂಗಿಗೆ ಮಾರುಹೋಗುತ್ತಿದ್ದರು. ಕುಂದಗೋಳ ನಾಡಗೀರ ವಾಡೆಯಲ್ಲಿ ಅಹೋರಾತ್ರಿ ಜರುಗುತ್ತಿದ್ದ ಸಂಗೀತ ಉತ್ಸವದಲ್ಲಿ ಭೀಮಸೇನ ಜೋಶಿಯವರು ಹಾಡುತ್ತಿದ್ದ ರಾಗದ ಉಯ್ಯಾಲೆಯಲ್ಲಿ ವರ್ಷವಿಡೀ ತೂಗಿಕೊಳ್ಳುತ್ತಿದ್ದರು. ಓಪನ್ ಏರ್ ಥಿಯೆಟರ್‌ನಲ್ಲಿ ರಾಜಗುರು ಅವರ ರಂಗಗೀತೆಯ ಮಾಧುರ್ಯಕ್ಕೆ ಉಕ್ಕುತ್ತಿದ್ದರು. ರೊಟ್ಟಿ ತಟ್ಟುವ ಸಪ್ಪಳ, ಟಾಂಗಾ ಕುದುರೆಯ ಲಾಳದ ಗೊರಸಿನ ತಾಳ ಕೇಳುತ್ತಿದ್ದ ಓಣಿಗಳಲ್ಲಿ ಕವಿತೆಯಲ್ಲಿ ಭಾವ ನೇಯುತ್ತಿದ್ದ ಕವಿ ಮತ್ತು ಅದಕ್ಕೆ ನಾದ ನಾದುತ್ತಿದ್ದ ಸಂಗೀತಗಾರರು ಕಾಣುತ್ತಿದ್ದದ್ದು ಅಪರೂಪವಾಗಿರಲಿಲ್ಲ. ಇಂಥ ನಾದಮಯ ಪರಿಸರದ ನಿರಂತರ ಪ್ರಭಾವದಿಂದ ಅಶೋಕ ಹುಗ್ಗಣ್ಣವರ ಹಿಂದೂಸ್ತಾನಿ ಸಂಗೀತ ಕಲಾವಿದರಾಗಿ ರೂಪುಗೊಂಡವರು.

ಉತ್ತರ ಕನ್ನಡ ಜಿಲ್ಲೆಯಿಂದ ತಮ್ಮ ದೈವ ಅರಸುತ್ತ ಬೆಳವಲ ನಾಡಿಗೆ ಹಲವರು ಕಲಿಯಲು ಹೊರಟರೆ ಬಯಲಿಂದ ಹರಿದು ಬಂದ ಶಾಲ್ಮಲಾ, ವರದಾ, ಬೇಡ್ತಿ ನದಿಗಳಂತೆ ಸಮುದ್ರ ತೀರದ ಹೊನ್ನಾವರಕ್ಕೆ ಹುಗ್ಗಣ್ಣವರ್ ಸಂಗೀತ ಸಾಕ್ಷಾತ್ಕಾರಗೊಳಿಸಿಕೊಳ್ಳಲು ಬಂದರು. ಪರಜೀವವನ್ನು ಪೊರೆಯಲೆಂದೆ ಹರಿವ ನದಿಯ ಗುಣ ಹುಗ್ಗಣ್ಣವರ ಮನೆತನದಲ್ಲಿ ಅಂತರ್ಗತವಾಗಿತ್ತೆಂದು ಅವರ ನಿಡುಗಾಲ ಸ್ನೇಹಿತ ಗಾಯಕ ನಾಗರಾಜರಾವ್ ಹವಾಲ್ದಾರರು ತಮ್ಮ ಲೇಖನವೊಂದರಲ್ಲಿ ಉಲ್ಲೇಖಿಸಿದ್ದಾರೆ. (ಸ್ವರ ಸನ್ನಿಧಿ, ಡಾ. ನಾಗರಾಜರಾವ್ ಹವಾಲ್ದಾರ್; ವಸಂತ ಪ್ರಕಾಶನ, ಬೆಂಗಳೂರು). ಹವಾಲ್ದಾರರ ನಿರೂಪಣೆ ಹೀಗಿದೆ: 'ನಮ್ಮ ಸಮಕಾಲೀನರು ಪ್ರೈಮರಿ ಶಾಲೆಯಲ್ಲಿದ್ದಾಗ 'ಹುಗ್ಗಿಯ ಚಿನ್ನಕ್ಕ' ಅಂತ ಒಂದು ಪಾಠ ಇತ್ತು. ಒಂದು ಮಂತ್ರ ಹೇಳಿದರೆ ಅಕ್ಷಯ ಪಾತ್ರೆಯಲ್ಲಿ ಬೇಕಾದಷ್ಟು 'ಹುಗ್ಗಿ' ರೆಡಿ ಆಗಿಬಿಡ್ತಿತ್ತು. ಮನೆಯವರಿಗೆಲ್ಲ ಸಾಕು ಅನಿಸಿದ ಮೇಲೆ, ಮತ್ತೊಂದು ಮಂತ್ರ ಹೇಳಿದರೆ ಪಾತ್ರೆ ಸುಮ್ಮನಾಗುತ್ತಿತ್ತು. ಎಂತಹ ಸುಂದರ, ಸರಳ ಕಲ್ಪನೆ! ಮುಂದೆ ಬೇರೊಬ್ಬರು ದುರಾಸೆಗೆ ಆ ಪಾತ್ರೆ ಕದೀತಾರೆ... ಕತೆ ಮುಂದುವರಿಯುತ್ತೆ. ಆದರೆ, ಹುಗ್ಗಿಯ ಪಾತ್ರೆಯಂತೆ, ನಿಜ ಜೀವನದಲ್ಲಿ ಒಂದು ಕುಟುಂಬ ಪೂರ್ತಿ, ಜನಸೇವೆ ಸಲುವಾಗಿ ಮುಡಿಪಾಗಿತ್ತು ಅಂದ್ರೆ ನೀವು ನಂಬ್ತೀರಾ..? ಹಕೀಕತು ಹಿಂಗದ ಕೇಳ್ರಿ:

ಕುಂದಗೋಳ ತಾಲ್ಲೂಕಿನಲ್ಲಿ ಯರಗುಪ್ಪಿ ಒಂದು ಹಳ್ಳಿ. ಕೆಲವರ್ಷಗಳ ಹಿಂದೆ ಭೀಕರ ಬರಗಾಲ ಬಂತು. ಹಳ್ಳಿ ಜನ ಎಲ್ಲಾ ಕಂಗಾಲಾದ್ರು. ಕೆಲವರು ಊರು ಬಿಡ್ಲಿಕ್ಕೆ ಹತ್ತಿದ್ರು. ಆಗ, ಅದೇ ಹಳ್ಳಿಯ, ಇದ್ದುದರಲ್ಲೇ ಸ್ಥಿತಿವಂತರು ಅನ್ನೋ ಒಂದು ಕುಟುಂಬ ಊರ ಜನಕ್ಕೆಲ್ಲ 'ಹುಗ್ಗಿ' ಮಾಡಿ, ಮಾಡಿ ಆದಷ್ಟು ದಿವಸ ಉಣಬಡಿಸಿದರು. ನಿಜ ಅರ್ಥದಲ್ಲಿ ದಾಸೋಹ ನಡೆಸಿದರು. ಹಾಗಾಗಿ ಆ ಮನೆತನಕ್ಕೆ ಅಂದಿನಿಂದ 'ಹುಗ್ಗಣ್ಣವರ' ಅಂತ ಅಡ್ಡ ಹೆಸರು ಬಂತು. ಈ ಹೃದಯ ಶ್ರೀಮಂತಿಕೆಯ ಮನೆತನದವರೇ ಡಾ. ಅಶೋಕ ಹುಗ್ಗಣ್ಣವರ.'

ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಎಂಬತ್ತರ ದಶಕ ಪಂ.ಮಲ್ಲಿಕಾರ್ಜುನ ಮನ್ಸೂರವರನ್ನು ವಿಭಾಗದ ಮುಖ್ಯಸ್ಥರನ್ನಾಗಿ ಪಡೆದ ಕಾಲ. ಅದೇ ವಿಭಾಗದಲ್ಲಿ ಪಾಠ ಮಾಡುತ್ತಿದ್ದ ಪಂ. ಸಂಗಮೇಶ್ವರ ಗುರವ್ ಅವರ ವಿಶೇಷ ಗಮನವನ್ನು ಹುಗ್ಗಣ್ಣವರ ತನ್ನ ಗಟ್ಟಿ ಕಂಠ, ಲಯ ಜ್ಞಾನ, ರಾಗ ಸ್ಪಷ್ಟತೆಯಿಂದ ಸೆಳೆದರು. ಪಂ. ಗುರವ್ ಅವರಿಂದ ಕಿರಾನಾ ಘರಾನಾ ಗಾಯನ ಶೈಲಿಯ ದೀಕ್ಷೆಯನ್ನು ಪಡೆದರು. ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಸಂಗೀತರತ್ನ ಪದವಿ ಜೊತೆ ಮಾಸ್ಟರ್ ಆಫ್ ಮ್ಯೂಸಿಕ್ ಸ್ವರ್ಣಪದಕದೊಂದಿಗೆ ನಾದ ಪಯಣವನ್ನು ಆರಂಭಿಸಿದರು. ಇದರೊಟ್ಟಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಶೋಧನಯ ಮಹಾ ಪ್ರಬಂಧವನ್ನು ಸಲ್ಲಿಸಿ ಡಾಕ್ಟರೇಟ್ ಪಡೆದರು.

ಹೊನ್ನಾವರದ ಕಾಲೇಜಿನ ಸಂಗೀತ ವಿಭಾಗವನ್ನು ಪ್ರಾಧ್ಯಾಪಕರಾಗಿ ಹುಗ್ಗಣ್ಣವರ ಪ್ರವೇಶಿಸಿದ ನಂತರ ಮನೆತನದ ಹುಗ್ಗಿಯ ದಾಸೋಹ ಪರಂಪರೆ ಸ್ನೇಹದ ಸೇತುವೆ ಕಟ್ಟುತ್ತ ಸಂಗೀತವನ್ನು ಆಪ್ತರಲ್ಲಿ ಹಂಚಿಕೊಳ್ಳಲು ತೆರೆದ ದಾರಿಯಲ್ಲಿ ಮುಂದುವರಿಯಿತು. ಅವರು ಬರುವಷ್ಟರಲ್ಲಿ ಜಿಲ್ಲೆಯ ಮಣ್ಣು ಅಲ್ಲಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ, ಯಕ್ಷಗಾನ ಭಾಗವತಿಕೆ, ನಾಟಕದ ಪದ, ಮದುವೆ ಹಾಡು, ಸುಗ್ಗಿ ಹಾಡು, ಭಜನೆಗಳಿಂದ ಉಳುಮೆಗೆ ಹದವಾಗಿತ್ತು. ಸಂಗೀತದ ಅಭಿರುಚಿಯ ಬೀಜವನ್ನು ಬಿತ್ತುವ ಕೆಲಸಕ್ಕೆ ಮುಂದಾದರು. ಸಂಗೀತದ ಬಗ್ಗೆ ತುಸು ಒಲವಿದ್ದ ಸ್ನೇಹಿತರ ಮನೆಗೆ ಹೋಗಿ ಹಳೆಯ ಹಾರ್ಮೋನಿಯಂ ಹೊರ ತೆಗೆದು ಲಯದತ್ತ ಒಲವಿರುವ ಮಕ್ಕಳನ್ನು ಎದುರಿಗೆ ಕೂರಿಸಿ ಸಂಗೀತದ ಪ್ರಥಮ ಪಾಠ ಮಾಡಿ, 'ಕಂಠ ಚಲೊ ಐತಿ ಹಾಡಾಕೆ ಹಚ್ಚರಿ' ಎಂದು ಹೆತ್ತವರಿಗೆ 'ಹುಚ್ಚು' ಹಿಡಿಸುತ್ತಿದ್ದರು. ಕರೆದವರ ಮನೆಗೆ ಪ್ರೀತಿಯಿಂದ ಹೋಗಿ ಸಂಗೀತದ ದೀಪ ಹಚ್ಚಿದರು; ಅದು ನಂದದಂತೆ ಆಸಕ್ತರ ಸಹಕಾರದಿಂದ ಸಂಗೀತ ಶಾಲೆಯನ್ನು ತೆರೆಯಿಸಿದರು. ವಾರಕ್ಕೊಮ್ಮೆ ಶಾಲೆಗೆ ಹೋಗಿ ಪಾಠ ಮಾಡಿದರು. 'ಹಾರ್ಮೋನಿಯಂ ಜೋಡಿ ಹಾಡಿದ್ರ ನಿಮ್ಮ ಒರಿಜಿನಲ್ ಸ್ವರ ಮುಚ್ಚಿ ಹೋಗ್ತದ; ತಾನ್‌ಪೂರ ಶೃತಿ ಜತಿ ಟ್ಯೂನ್ ಮಾಡಕೋರಿ' ಎಂದು ಅರಂಭದಲ್ಲೆ ಸರಿ ದಾರಿಯನ್ನು ತೋರಿಸುತ್ತಿದ್ದರು.

ಹಾಡುಗಾರಿಕೆಯಲ್ಲಿ ಇರಬೇಕಾದ ಶಾಸ್ತ್ರೀಯ ಶಿಸ್ತಿನೊಂದಿಗೆ, ಸಲ್ಲಬೇಕಾದ ಗಾಂಭೀರ್ಯದ ಜೊತೆಗೆ ಅವರೆಂದೂ ರಾಜಿ ಮಾಡಿಕೊಂಡವರಲ್ಲ. ಯಾವೊತ್ತೂ ಅವರ ರಿಯಾಜ್, ವಿದ್ಯಾರ್ಥಿಗಳಿಗೆ ಕಟು ಮಧುರ ಅನುಭವವೇ. ಅದೊಂದು ಅಪೂರ್ವ ರಾಗ ಸಂವಾದ ಮತ್ತು ಮೋಹಕ ಸಂವಹನ. ಸಂಗೀತದ ಬಗ್ಗೆ ಅಚಲ ನಿಷ್ಠೆ, ಸಾಧಿಸುವ ಛಲ, ತಕ್ಷಣ ಸೂಕ್ಷ್ಮಗಳನ್ನು ಗ್ರಹಿಸುವ ಪ್ರತಿಭೆಯನ್ನು ಶಿಷ್ಯರಲ್ಲಿ ಗುರುತಿಸಿ ನಸುಕಿಗೆ ಅವರ ಮನೆಗೆ ಹೋಗಿ ತಡ ರಾತ್ರಿಯವರೆಗೆ ರಿಯಾಜ್ ಮಾಡಿಸುತ್ತಿದ್ದರು.

ಶಿಷ್ಯರನ್ನು ಸಂಗೀತ ಕಛೇರಿಗೆ ಕರೆದೊಯ್ದು ಅಲ್ಲಿ ಕಲಾವಿದರನ್ನು ಪರಿಚಯಿಸುವುದು, ಕಲಾ ರಸಿಕರೆದುರು ಕಲಾವಿದ ತನ್ನ ಅತ್ಯುನ್ನತ ಎತ್ತರಕ್ಕೆ ಏರಿ ಅದ್ಭುತ ಗಾಯನವನ್ನು ಪ್ರಸ್ತುತಿ ಪಡಿಸುವ ಕ್ಷಣಕ್ಕೆ ಸಾಕ್ಷಿಯಾಗಲು ಅವಕಾಶ ಒದಗಿಸುವುದು, ಸಂಗೀತ ಅಭ್ಯಾಸದ ಜೊತೆ ಜೊತೆಯಲ್ಲೇ ವೇದಿಕೆಯಲ್ಲಿ ಗಾಯನ ಪ್ರಸ್ತುತಿಗೆ ಅವಕಾಶ ಒದಗಿಸುವುದು ಪರಸ್ಪರ ಪೂರಕವಾಗಿ ಸಾಗುತ್ತಿತ್ತು. ದೇವಸ್ಥಾನ, ಸಣ್ಣ ಉತ್ಸವಗಳು, ಬೈಟಕುಗಳು ಯಾವುದೇ ವೇದಿಕೆ ಆಗಿರಲಿ, ಶಿಷ್ಯರಿಗೆ ರೂಢಿ ಇರಲೆಂದು ಅವಕಾಶ ಮಾಡಿ ಕೊಡುವುದು, ಸಂಗೀತ ಪರೀಕ್ಷೆಗೆ ಕಟ್ಟಿಸುವುದು, ಶಿಷ್ಯವೇತನಕ್ಕೆ ಪ್ರಯತ್ನಿಸುವುದು, ಆಕಾಶವಾಣಿ ಗ್ರೇಡ್ ಕಲಾವಿದರಾಗಲು ಪ್ರೋತ್ಸಾಹಿಸುವುದು, ಕನ್ನಡ ಸಂಸ್ಕೃತಿ ಇಲಾಖೆ ಏರ್ಪಡಿಸುತ್ತಿದ್ದ ಸ್ಪರ್ಧೆಯಲ್ಲಿ ಭಾಗವಹಿಸಲು ಸಿದ್ಧತೆ ಮಾಡಿಕೊಳ್ಳುವುದು ನಿರಂತರ ನಡೆಯುತ್ತಿತ್ತು. ಇದರಿಂದ ವಿದ್ಯಾರ್ಥಿಗಳಲ್ಲಿ ಸಭಾ ಕಂಪನವಿರದೆ ಹಾಡುವ ಆತ್ಮವಿಶ್ವಾಸ ವೃದ್ಧಿಸುತ್ತಿತ್ತು. ಕಲಾವಿದರಿಗಿಂತ ಸಂಗೀತ ದೊಡ್ಡದು ಎಂಬ ವಿನೀತ ಭಾವವನ್ನು ತಮ್ಮ ಶಿಷ್ಯರಲ್ಲೂ ಅವರು ಪೋಷಿಸಿದರು.

ಅವರು ಸಂಗೀತದ ಮೂಲಕ ನೇಯ್ದ ಸ್ನೇಹಜಾಲದ ವ್ಯಾಪ್ತಿ ವಿಸ್ತಾರವಾದದ್ದು. ವಿವಿಧ ಜಾತಿ, ಮತ, ವರ್ಗ, ಪ್ರದೇಶ, ಭಾಷೆಯ ಮನುಷ್ಯರು ಸಂಗೀತದ ಸನ್ನಿಧಿಯಲ್ಲಿ ಪರಸ್ಪರ ಕೈ ಹಿಡಿದು ಪರಿಚಯಿಸಿಕೊಂಡು ಒಂದಾದ ಸಮಾಜವನ್ನು ನಿರ್ಮಿಸಿದರು. ಸಮಾಜದ ಎಲ್ಲ ವೃತ್ತಿಯವರು, ವಯಸ್ಸಿನವರು, ಬಡವರು, ಸಿರಿವಂತರು ಅವರ ಆತ್ಮೀಯತೆಗೆ ಒಳಗಾಗಿ ಸಂಗೀತವನ್ನು ಗೌರವಿಸುವ ಆಪ್ತ ಕೂಟಗಳಾಗಿ, ಪರಿಚಾರಕರಾಗಿ ನಾಡಿನಾದ್ಯಂತ ಗುರುತಿಸಿಕೊಂಡರು. ಶಿಷ್ಯರಿಗೋಸ್ಕರ ನಾಡಿನ ಹಲವು ಸಂಘ-ಸಂಸ್ಥೆಗಳು ಸಂಗೀತ ಸೇವೆಗೆ ಮುಂದಾಗಲು ಕಾರಣರಾದರು.

ದೇಶ-ವಿದೇಶಗಳಲ್ಲಿ ಸಂಗೀತ ಕಛೇರಿ ನಡೆಸಿದರೂ ವಿಶಾಲ ಆಕಾಶದಲ್ಲಿ ಹಾರುವ ಹಕ್ಕಿ ಮರಿಗಳನ್ನು ನೆನೆಸಿ ಗೂಡಿಗೆ ಮರಳುವಂತೆ ಊರಿಗೇ ಬಂದು ತಮ್ಮ ಎಂದಿನ ಗಾಯನ ಒಕ್ಕಲುತನವನ್ನು ಮುಂದುವರಿಸಿದರು. ಪ್ರಶಸ್ತಿ, ಸಂಭಾವನೆ, ಅಧಿಕಾರ, ಪ್ರಚಾರಗಳಿಂದ ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ಅಭಿಮಾನಿಗಳ ಪ್ರೀತಿಯೇ ಸನ್ಮಾನವೆಂದು ನಂಬಿ ಪ್ರಸನ್ನರಾದವರು. ಕರ್ನಾಟಕದಲ್ಲಿ ಗುರು-ಶಿಷ್ಯ ಪರಂಪರೆಯನ್ನು ಪೊರೆದ ಕೆಲವೇ ಅಗ್ರಗಣ್ಯ ಸಂಗೀತ ಗುರುಗಳಲ್ಲಿ ಹುಗ್ಗಣ್ಣವರ ಅವರೂ ಒಬ್ಬರು. ಸಂಗೀತ ಪರಂಪರೆಗೆ ಹೊಸ ಪ್ರತಿಭಾವಂತ ಗಾಯಕರನ್ನು ಸೇರಿಸುವ ಅವರ ನಿರಂತರ ತಪಸ್ಸನ್ನು ಮರೆಯಲು ಸಾಧ್ಯವಿಲ್ಲ.

ಸೋದರಮಾವನೇ ಮೊದಲ ಗುರು

ಕುಂದಗೋಳ ಪರಿಸರದ ಸಂಗೀತ ಪರಂಪರೆ ಅಶೋಕರವರ ಪ್ರತಿಭೆಯನ್ನು ಪೊರೆದದ್ದು ಆಕಸ್ಮಿಕವೇನಲ್ಲ. ಅವರ ಸೋದರಮಾವ ಯರಗುಪ್ಪಿ ಲಿಂಗರಾಜ ಬುವಾ, ಅವರ ಆರಂಭಿಕ ಗುರು. ಲಿಂಗರಾಜರು ನೀಲಕಂಠ ಬುವಾ ಅವರ ಶಿಷ್ಯರು. ಲಿಂಗರಾಜ ಬುವಾ ಸಂಗೀತ ನಾಟಕಗಳಲ್ಲಿ ಮಲ್ಲಿಕಾರ್ಜುನ ಮನ್ಸೂರ್ ಅವರೊಟ್ಟಿಗೆ ಹಾಡಿದವರು. ಅನಾರೋಗ್ಯದಿಂದಾಗಿ ಅವರ 'ಸ್ವರ ಸಂಚಾರ' ಜನಿಸಿದ ಊರಿಗೇ ಸೀಮಿತವಾಯಿತು. ಹಾಡುತ್ತ, ಹಾಡುತ್ತಿದ್ದ ರಾಗವೇ ಆಗಿಬಿಡುತ್ತಿದ್ದ ಕಲಾವಿದರು ಅವರು. ಸುತ್ತಲಿನ ಹಳ್ಳಿಯ ವಿದ್ಯಾರ್ಥಿಗಳಿಗೆ ಸಂಗೀತ ಪಾಠ ಮಾಡುತ್ತ, ನಾಟಕದ ಹಾಡುಗಳಿಗೆ ರಾಗ ಸಂಯೋಜನೆ ಮಾಡುತ್ತ ಇದ್ದ ಅವರ ಪ್ರಭಾವಳಿಗೆ ಹುಗ್ಗಣ್ಣವರ ಒಳಗಾದರು. ಶರೀಫರ ಪದ, ರಂಗಗೀತೆ, ತತ್ವ ಪದಗಳಲ್ಲಿ ನಿಷ್ಣಾತರಾದ ಅವರ ಗರಡಿಯಲ್ಲಿ ಅಶೋಕ ಸಂಗೀತ ಗಾರುಡಿಗರಾದರು. ಮಾವನ ಒಡನಾಟದಲ್ಲಿ ನೋಡಿ, ಆಲಿಸಿ, ಅವರು ಮಾಡಿಸುತ್ತಿದ್ದ ಅಪರೂಪದ ರಾಗಗಳ, ಬಂದಿಶ್‌ಗಳ ರಿಯಾಜಿನಿಂದ ಸಂಗೀತ ಅಶೋಕರವರ ಅಂತಃಕರಣದಲ್ಲಿ ಇಂಗಿತು.

ಕುಂದಗೋಳದ ಸುತ್ತಲಿನ ಪರಿಸರ ನಾದಮಯವಾಗಿತ್ತು. ನಾಡಿಗೇರ ವಾಡೆಯಲ್ಲಿ ವರ್ಷವೂ ನಡೆಯುತ್ತಿದ್ದ ಸವಾಯಿ ಗಂಧರ್ವ ಸ್ಮೃತಿ ಸಂಗೀತೋತ್ಸವದ ಜತೆಗೆ ಶರೀಫರ ತತ್ವ ಪದಗಳು, ಆಲಾವಿ ಹಾಡುಗಳು, ಗುಡಿಗಳಲ್ಲಿ ಹಾಡುತ್ತಿದ್ದ ಭಜನೆಗಳು, ರಂಗಗೀತೆಗಳು, ಉರುಸುಗಳು, ಜಾನಪದ ಹಾಡುಗಳು ನಿತ್ಯದ ಕಾಯಕಗಳಲ್ಲಿ ಹಾಸುಹೊಕ್ಕಾಗಿದ್ದವು. ಕುಂದಗೋಳದ ಸುತ್ತಮುತ್ತಲಿನ ಪ್ರದೇಶದ ಫಕೀರಪ್ಪ ಹೂಗಾರ, ಕಬ್ಬನೂರು ಶಿವಲಿಂಗ ಶಾಸ್ತ್ರಿ, ಬೆನಕನಹಳ್ಳಿ ಮಹಾದೇವಪ್ಪ, ನಾರಾಯಣಪುರದ ರುದ್ರಗೌಡ ಮುಂತಾದವರು ಚೆಲ್ಲಿದ್ದ ನಾದ ನಂದಾದೀಪದ ಬೆಳಕಿನಲ್ಲಿ ಬೆಳೆಯುವ ಯೋಗ ತನಗೆ ಪ್ರಾಪ್ತವಾಯಿತೆಂದು ಅಶೋಕ ಅವರು ಹೇಳಿದ್ದುಂಟು. ಅನಂತರ ಅಶೋಕರವರು ಮಾಂತ್ರಿಕ ನಾದ ಪಾತ್ರೆ ಹಿಡಿದು ಧಾರವಾಡಕ್ಕೆ ಹೋದರು.

ಮಹಾಭಾರತಕ್ಕೆ 'ಬಾಹುಬಲಿ'ಯ ಸ್ಪರ್ಶ

ಎಸ್. ಸೂರ್ಯಪ್ರಕಾಶ ಪಂಡಿತ್

ಅರ್ಜುನನ ವಿಷಾದಯೋಗ; ಅರ್ಜುನ ಮತ್ತು ಕೃಷ್ಣ

ನೆರಳು ಬೆಳಕಿನಾಟದಲ್ಲಿ ಮಹಾಸಂಗ್ರಾಮದ ಚಿತ್ರಣ

'ಜಗತ್ತಿನಲ್ಲಿರುವುದೆಲ್ಲವೂ ಮಹಾಭಾರತದಲ್ಲಿದೆ; ಮಹಾಭಾರತದಲ್ಲಿ ಇಲ್ಲದ್ದು ಲೋಕದಲ್ಲಿ ಎಲ್ಲೂ 'ಇರದು' ಎಂಬ ಪ್ರಶಂಸೆಯೊಂದೇ ಸಾಕು ಮಹಾಭಾರತದ ಮೌಲ್ಯವನ್ನು ಎತ್ತಿಹಿಡಿಯಲು. ಮಹಾಭಾರತದ ಭಾಗವಾಗಿರುವುದೇ ಭಗವದ್ಗೀತೆ; ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ತತ್ತ್ವಗಳ ಗುಚ್ಛ. ಕೃಷ್ಣಾರ್ಜುನರ ಈ ಸಂವಾದದ ಬಳಿಕವೇ ಮಹಾಭಾರತದ ಯುದ್ಧ ನಡೆದದ್ದು; ಹದಿನೆಂಟು ದಿನಗಳ ಮಹಾಸಂಗ್ರಾಮವದು!

ಭಗವದ್ಗೀತೆಯಲ್ಲಿ ವಿಶ್ವರೂಪ ದರ್ಶನದ ಪ್ರಸಂಗವೊಂದಿದೆ; ಶ್ರೀಕೃಷ್ಣನು ಅರ್ಜುನನಿಗೆ ತನ್ನ ಮಹಿಮೆಯ ವಿಸ್ತಾರವನ್ನು ಪ್ರತ್ಯಕ್ಷವಾಗಿ ತೋರಿಸಿದ ಸಂದರ್ಭವದು. ಸೃಷ್ಟಿಯಲ್ಲಿರುವ ಎಲ್ಲ ವಿವರಗಳೂ ತನ್ನಲ್ಲಿಯೇ ಒಂದಾಗಿವೆ ಎನ್ನುವುದನ್ನು ಶ್ರೀಕೃಷ್ಣ ತೋರಿಸುವ ಪ್ರಸಂಗ ಅದು. ಮಹಾಭಾರತದ ಯುದ್ಧವನ್ನೇ ಪ್ರಧಾನ ವಿಷಯವನ್ನಾಗಿಸಿಕೊಂಡ ನೃತ್ಯನಾಟಕವೊಂದು ಇದೇ ದಾರಿಯಲ್ಲಿ ಮುನ್ನಡೆದು ಕಲಾವಿಶ್ವರೂಪವನ್ನು ತೋರಿಸಿದೆ. 'ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್' ಕಲಾಸಂಸ್ಥೆ 'ಆ ಹದಿನೆಂಟು ದಿನಗಳು' ಎಂಬ ನೃತ್ಯನಾಟಕವನ್ನು ಇತ್ತೀಚೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸಿತು. ಕಲಾಸೃಷ್ಟಿಗೆ ತಂತ್ರಜ್ಞಾನದ ನೆರವು ದಕ್ಕಿದರೆ ಏನೆಲ್ಲ ಪ್ರಯೋಗಗಳನ್ನು ಮಾಡಬಹುದು ಎಂಬುದಕ್ಕೆ ಇದು ಸಾಕ್ಷಿಯಾಯಿತು. ನೃತ್ಯ, ಅಭಿನಯ, ನರ್ತನಗಳ ಜೊತೆಗೆ ಅನಿಮೇಶನ್, ಲೇವಿಟೇಷನ್, 3ಡಿ ಎಫೆಕ್ಟ್‌ಗಳಂಥ ತಾಂತ್ರಿಕ ವಿವರಗಳೂ ಮಿಳಿತಗೊಂಡು, ಸುಮಾರು ಒಂದೂವರೆ ಗಂಟೆಗಳ ಕಾಲ ಸದ್ಯದ ನಮ್ಮ ಭಾವ–ಬುದ್ಧಿಗಳನ್ನು ಬೇರೊಂದು ಲೋಕಕ್ಕೇ ತೆಗೆದುಕೊಂಡುಹೋದದ್ದು ಸುಳ್ಳಲ್ಲ.

ಸೃಷ್ಟಿಚಕ್ರಕ್ಕೂ ಕಾಲಧರ್ಮಕ್ಕೂ ಧರ್ಮಾಧರ್ಮಗಳಿಗೂ ಇರುವ ನಂಟು ಏನು – ಎಂಬ ಪ್ರಶ್ನೆ ಈ ನೃತ್ಯನಾಟಕದ ಭಿತ್ತಿ. ವೇದವ್ಯಾಸರ ಸೃಷ್ಟಿಯಾದ ಮಹಾಭಾರತಕ್ಕೆ ಗಣಪತಿಯು ಜೊತೆಯಾದ ಪ್ರಸಂಗದೊಂದಿಗೆ ರಂಗಪ್ರದರ್ಶನ ಆರಂಭವಾಗುತ್ತದೆ. ಶ್ರೀಕೃಷ್ಣನೇ ಮಹಾಭಾರತದ ದಿಟವಾದ ಸೂತ್ರಧಾರ ಎಂಬುದು ಆರಂಭದಲ್ಲಿಯೇ ಸಿದ್ಧವಾಗುತ್ತದೆ; ಧರ್ಮವನ್ನು ಎತ್ತಿಹಿಡಿಯಲು ಅವತರಿಸಿದವನು ಅವನು ಎಂಬುದು ಇಡಿಯ ನಾಟಕದಲ್ಲಿ ಅನಾವರಣವಾಗುತ್ತ ಹೋಗುತ್ತದೆ.

ಧರ್ಮ ಎಂದರೇನು? ಯುದ್ಧವು ಧರ್ಮಬದ್ಧವಾಗಿತ್ತೋ? ಶ್ರೀಕೃಷ್ಣ ಮಾಡಿದ್ದೆಲ್ಲವೂ ಧರ್ಮಸ್ಥಾಪನೆಗಾಗಿಯೆ ಹೌದೋ? – ಮಹಾಭಾರತದಲ್ಲಿ ಇಂಥ ಹಲವು ಪ್ರಶ್ನೆಗಳಿಗೆ ಕಾರಣವಾಗುವ ಮೂಲಸ್ಥಾನ ಎಂದರೆ ಕುರುಕ್ಷೇತ್ರ ಯುದ್ಧದ 'ಆ ಹದಿನೆಂಟು ದಿನಗಳು'. ಇದನ್ನೇ ವಸ್ತುವನ್ನಾಗಿಸಿಕೊಂಡು ಸಿದ್ಧವಾದದ್ದು ಈ ನೃತ್ಯನಾಟಕ. ಧರ್ಮದ ವಿಶ್ಲೇಷಣೆಯನ್ನು ಅದು ಕಲಾರೂಪದಲ್ಲಿ ಕಟ್ಟಿಕೊಟ್ಟು, ಧರ್ಮ ಎಂದರೆ ಅದು ಕೇವಲ ಸತ್ಯವಷ್ಟೆ ಅಲ್ಲ, ಸೌಂದರ್ಯವೂ ಹೌದು ಎಂಬುದನ್ನು ಧ್ವನಿಸಿತು.

ಅರ್ಜುನನ ವಿಷಾದ, ಅವನಿಗೆ ಶ್ರೀಕೃಷ್ಣನ ತತ್ತ್ವೋಪದೇಶ ಮಾಡಿದ ದೃಶ್ಯಗಳು ಗೀತೆಯ ಸಾರವನ್ನು ಕೆಲವೇ ನಿಮಿಷಗಳಲ್ಲಿ ನಿರೂಪಿಸಿದವು. ಶ್ಲೋಕಗಳ ಆಯ್ಕೆಯೂ ಉಚಿತವಾಗಿತ್ತು. ಭೀಷ್ಮನ ಪ್ರತಿಜ್ಞೆ, ದ್ರೋಣನ ವಧೆ, ಕರ್ಣನ ಅವಸಾನ, ಅಭಿಮನ್ಯುವಿನ ಹತ್ಯೆ, ಘಟೋತ್ಕಚನ ಶೌರ್ಯ ಮತ್ತು ದುರ್ಯೋಧನನ ಸೋಲು – ಇವು ಕುರುಕ್ಷೇತ್ರ ಯುದ್ಧದ ಪ್ರಮುಖ ಘಟನೆಗಳು. ಇವನ್ನೇ ರಂಗದ ಮೇಲೆ ತಂದು, ಈ ಸನ್ನಿವೇಶಗಳ ಧರ್ಮಾಧರ್ಮದ ವಿಶ್ಲೇಷಣೆಯನ್ನು ಶ್ರೀಕೃಷ್ಣನ ಮೂಲಕ ನೆರವೇರಿಸಿದ್ದು ನಿರ್ದೇಶಕರ ಜಾಣ್ಮೆಯನ್ನು ತೋರಿಸುತ್ತದೆ. ಈ ಕೆಲವೇ ದೃಶ್ಯಗಳು ಮಹಾಭಾರತದ ತಿರುಳನ್ನೇ ಪ್ರೇಕ್ಷಕರಿಗೆ ಉಣಬಡಿಸುವಂತಿವೆ.

ನೃತ್ಯನಾಟಕದಲ್ಲಿ ಸಂಭಾಷಣೆಯು ಹಿನ್ನೆಲೆಯ ರೂಪದಲ್ಲಿರುವುದರಿಂದ, ನಾಟಕಕಲೆಯ ಮುಖ್ಯ ಅಂಶಗಳಾದ ವಾಚಿಕಾಭಿನಯ ಮತ್ತು ಆಂಗಿಕಾಭಿನಯಗಳಿಗೆ ಇಲ್ಲಿ ಸಿದ್ಧ ಚೌಕಟ್ಟೊಂದಿದೆ. ಹೀಗಿದ್ದರೂ ಶ್ರೀಕೃಷ್ಣ, ಅಭಿಮನ್ಯು, ಭೀಮ, ದುರ್ಯೋಧನ, ಶಕುನಿ ಮುಂತಾದವರ ಅಭಿನಯ ಗಮನಾರ್ಹ. ತಾಂತ್ರಿಕತೆಯೇ ಒಂದು ಪಾತ್ರವಾಗಿದೆ. ಘಟೋತ್ಕಚ ರಾಕ್ಷಸ; ಮಾಯಾವಿ; ಅವನ ಗಾತ್ರದ ಮುಂದೆ ಕೌರವಸೈನ್ಯ ಮಕ್ಕಳಂತೆ. ಈ ವಿವರಗಳನ್ನು ಬಳಸಿಕೊಂಡಿರುವ ರೀತಿ ಗಮನ ಸೆಳೆಯುತ್ತದೆ. ಈ ದೃಶ್ಯದಲ್ಲಿ ಮಕ್ಕಳನ್ನೇ ಕೌರವರ ಪಾತ್ರಧಾರಿಗಳನ್ನಾಗಿ ಬಳಸಿಕೊಂಡಿರುವುದು ರಂಜನೀಯವಾಗಿದೆ. ಆದರೆ ತಾಂತ್ರಿಕತೆಯ ಅಬ್ಬರ–ನಾಟಕೀಯತೆಗಳು ಇಂಥ ಪ್ರದರ್ಶನ ಕಲೆಗಳಿಗೆ ಎಷ್ಟು ಅನಿವಾರ್ಯ – ಎಂಬ ಪ್ರಶ್ನೆಯನ್ನೂ ಈ ಪ್ರದರ್ಶನ ಹುಟ್ಟಿಸದಿರದೆನ್ನಿ! ಟೆಕ್ನಾಲಜಿಯ ಮಾಯಾಪಾಶವು ಸಾತ್ವಿಕತೆಯನ್ನು ಉಸಿರುಗಟ್ಟಿಸದಿದ್ದೀತೆ? 'ಬಾಹುಬಲಿ'ಯಂಥ ಸಿನಿಮಾಗಳೊಂದಿಗೆ ಅಭಿಜಾತ ದೃಶ್ಯಕಲೆಗಳು ಸ್ಪರ್ಧಿಸಬೇಕೆ?

ಮುನ್ನೋಟ 01-05-2022 ರಿಂದ 07-05-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಹೊಸ ಉದ್ಯಮ ಪ್ರಾರಂಭಿಸಲು ಸಾಕಷ್ಟು ಚಿಂತನೆ ಮಾಡುವಿರಿ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗುವ ಸಾಧ್ಯತೆಗಳಿವೆ. ದೇಹದಲ್ಲಿ ಉಷ್ಣಾಂಶ ಜಾಸ್ತಿಯಾಗಿ ತಲೆನೋವು ಇತ್ಯಾದಿ ಕಾಯಿಲೆ ಬರಬಹುದು. ಪಾಲುದಾರಿಕೆ ವಿಚಾರದಲ್ಲಿ ಪ್ರಮುಖ ನಿರ್ಧಾರವನ್ನು ಕೈಗೊಳ್ಳುವಾಗ ನಿಮ್ಮ ಪ್ರಾಮುಖ್ಯತೆ ಕಡಿಮೆಯಾಗುವ ಸಂದರ್ಭವಿದೆ. ನೃತ್ಯಪಟುಗಳಿಗೆ ಅವರ ಪ್ರತಿಭಾ ಪ್ರದರ್ಶನಕ್ಕೆ ಬೇಕಾದ ಅವಕಾಶಗಳು ಒದಗಿ ಬರುತ್ತವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ತರಕಾರಿ, ಹಣ್ಣು ವ್ಯಾಪಾರಸ್ಥರಿಗೆ ಹೆಚ್ಚಿನ ಬೇಡಿಕೆ ಬಂದು ಲಾಭ ಬರುತ್ತದೆ. ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ನಿಧಾನಗತಿ ಇರಲಿದೆ. ಹಿರಿಯ ಅಧಿಕಾರಿಗಳೊಡನೆ ವಾದ-ವಿವಾದ ಖಂಡಿತ ಬೇಡ. ಸ್ವಂತ ಉದ್ದಿಮೆ ನಡೆಸುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಹೊಸ ವಾಹನ ಖರೀದಿ ಮಾಡುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಹಿತ ಶತ್ರುಗಳು ನಿಮ್ಮನ್ನು ಕಾಡಬಹುದು.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಹಂತಹಂತವಾಗಿ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಮುನ್ನಡೆಯುವಿರಿ. ವಿದ್ಯಾರ್ಥಿಗಳು ಅಭ್ಯಾಸದತ್ತ ಹೆಚ್ಚಿನ ಗಮನಹರಿಸುವುದು ಅಗತ್ಯ. ಸರ್ಕಾರದಿಂದ ಬರಬೇಕಾಗಿದ್ದ ಹಣ ಈಗ ಬರುತ್ತದೆ. ಸರ್ಕಾರಿ ಹೂಡಿಕೆಯಲ್ಲಿದ್ದ ಹಣ ಇಡಿಗಂಟಾಗಿ ಒದಗಿ ಬರುತ್ತದೆ. ಒಡಹುಟ್ಟಿದವರಿಂದ ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಸಾಕಷ್ಟು ಸಹಾಯ ದೊರೆಯುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲ ಕ್ರೋಢೀಕರಣ ಮಾಡುವಿರಿ. ನಿಮಗೆ ಬೇಕಾದ ಸಾಲ ಸೌಲಭ್ಯ ಸರಾಗವಾಗಿ ದೊರೆಯುತ್ತದೆ. ಆತ್ಮಸ್ಥೈರ್ಯದಿಂದ ಮಾಡಿದ ಕೆಲಸಗಳಿಗೆ ಉತ್ತಮ ಫಲಿತಾಂಶ ನಿರೀಕ್ಷೆ ಮಾಡಬಹುದು. ಹೊಸ ಹೊಸ ವ್ಯವಹಾರಗಳಿಗೆ ಪಾಲ್ಗೊಳ್ಳಲು ಆಹ್ವಾನ ಬರುತ್ತದೆ. ಯೋಚಿಸಿ ಮುಂದಡಿ ಇಡಿರಿ. ಅಮೂಲ್ಯ ವಸ್ತುಗಳ ಸಂಗ್ರಹಣೆ ಮಾಡುವ ಆಸೆ ಗರಿಗೆದರುತ್ತದೆ.

ಸಿಂಹ — **ಮುಖ, ಪೂರ್ವಫಲ್ಗುಣಿ, ಉತ್ತರ ಫಲ್ಗುಣಿ 1**

ಗಣ್ಯರೊಂದಿಗೆ ವೇದಿಕೆಯನ್ನು ಹಂಚಿಕೊಳ್ಳುವ ಅವಕಾಶಗಳು ಕೆಲವರಿಗೆ ಒದಗಿಬರುತ್ತದೆ. ನಿಮ್ಮ ಯೋಜನೆಗಳನ್ನು ಆದ್ಯತೆಯ ಮೇಲೆ ಜಾರಿಗೊಳಿಸುವುದು ಉತ್ತಮ. ಪ್ರಯಾಣ ಕಾಲದಲ್ಲಿ ಅಪರಿಚಿತರ ಜೊತೆ ಎಚ್ಚರವಾಗಿರಿ. ಇವರು ನಿಮ್ಮನ್ನು ದಾರಿತಪ್ಪಿಸಲು ಯತ್ನಿಸುವರು. ಸ್ವತ್ತು ವಿವಾದಗಳಲ್ಲಿ ಬಂಧುಗಳೊಡನೆ ಸೌಹಾರ್ದಯುತವಾಗಿ ಮಾತನಾಡಿದಲ್ಲಿ ಸಮಸ್ಯೆ ಬಗೆಹರಿಯುತ್ತದೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಮನೆಯವರ ಅಸಮ್ಮತಿಯ ನಡುವೆಯೂ ಕೆಲವರು ಸಂಗಾತಿಯ ಆಯ್ಕೆಯನ್ನು ಮಾಡಿಕೊಳ್ಳುವರು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗುವ ಸಂದರ್ಭವಿದೆ. ಸಣ್ಣಪುಟ್ಟ ವ್ಯಾಪಾರ ಮಾಡುವವರಿಗೆ ನಿರೀಕ್ಷಿತ ಲಾಭವಿರುತ್ತದೆ. ಮೂಳೆ ತೊಂದರೆ ಇರುವವರು ಎಚ್ಚರವಹಿಸಿರಿ. ಸಂಶೋಧನೆಯಲ್ಲಿ ಪ್ರಯೋಗಶೀಲರಾಗಿರುವವರಿಗೆ ಅಪೇಕ್ಷಿತ ರೀತಿಯಲ್ಲಿ ಫಲಿತಾಂಶ ದೊರೆಯುವ ಸಂದರ್ಭವಿದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖ 1,2,3**

ಕೃಷಿ ಸಂಬಂಧಿತ ಯಂತ್ರೋಪಕರಣಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ವೃದ್ಧಿಸುತ್ತದೆ. ಲೆಕ್ಕ ಪರೀಕ್ಷಕರಿಗೆ ಅನಿರೀಕ್ಷಿತವಾದ ಸಮಸ್ಯೆಗಳು ತಲೆದೋರಬಹುದು. ಆದಾಯಕ್ಕಿಂತ ವೆಚ್ಚ ಹೆಚ್ಚಾಗುವ ಸಾಧ್ಯತೆಯಿದೆ. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿಕೊಳ್ಳಿ. ಸಮಾಜಸೇವೆಯ ಹೆಸರಿನಲ್ಲಿ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಹೋದಲ್ಲಿ ಸಿಕ್ಕಿ ಬೀಳುವ ಸಾಧ್ಯತೆಗಳಿವೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ಗಮನ ಅಗತ್ಯ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — **ವಿಶಾಖ 4 ಅನುರಾಧ, ಜ್ಯೇಷ್ಠ**

ತಂದೆ-ತಾಯಿಗಳಿಗೆ ಅವರ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಮಾಡುವ ಯೋಗವಿದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ನಿರೀಕ್ಷಿತ ಮೂಲಗಳಿಂದ ಆದಾಯವಿರುತ್ತದೆ. ಆಹಾರ ಪದಾರ್ಥಗಳ ವ್ಯವಹಾರ ಮಾಡುವವರಿಗೆ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ಹೆಚ್ಚು ಎಚ್ಚರದಿಂದಿರಿ. ಗೃಹ ನಿರ್ಮಾಣಕ್ಕೆ ಇದ್ದ ಅಡ್ಡಿ ಆತಂಕಗಳು ಈಗ ನಿವಾರಣೆ ಆಗುತ್ತವೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ಯಂತ್ರೋಪಕರಣಗಳನ್ನು ದುರಸ್ತಿ ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಹೊಸ ನಿವೇಶನವನ್ನು ಕೊಳ್ಳುವ ಯೋಗವಿದೆ. ಒಡಹುಟ್ಟಿದವರಿಂದ ಆಸ್ತಿಯ ಬಗ್ಗೆ ತಗಾದೆ ಬರಬಹುದು. ವಾಯುಯಾನ ತಂತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಶೋಧನೆ ಮಾಡುತ್ತಿರುವವರಿಗೆ ಉತ್ತಮ ಫಲಿತಾಂಶವಿರುತ್ತದೆ. ಪಿತ್ರಾರ್ಜಿತ ಆಸ್ತಿಗಳು ಒದಗುವ ಸಂದರ್ಭವಿರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ನಿಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ಹೆಚ್ಚು ಗಮನಹರಿಸಿರಿ. ನೆರೆಹೊರೆಯವರೊಂದಿಗೆ ಸ್ನೇಹ ಸಂಬಂಧ ವೃದ್ಧಿಸಿಕೊಳ್ಳುವಿರಿ. ಸಂಯಮದಿಂದ ವ್ಯವಹರಿಸಿದಲ್ಲಿ ವೃತ್ತಿಯಲ್ಲಿನ ಕೆಲವು ತೊಂದರೆಗಳು ನಿವಾರಣೆಯಾಗುತ್ತವೆ. ಸಾಮಾಜಿಕ ಕೆಲಸಗಳಲ್ಲಿ ಹೆಚ್ಚು ತೊಡಗಿಕೊಳ್ಳುವಿರಿ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಹಣಕಾಸಿನ ವಿಚಾರದಲ್ಲಿ ಜಾಗರೂಕತೆ ಮುಖ್ಯ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಸಾವಯವ ಕೃಷಿ ಪದಾರ್ಥಗಳನ್ನು ಬೆಳೆಯುವವರಿಗೆ ಮಾರುಕಟ್ಟೆ ವಿಸ್ತರಿಸುತ್ತದೆ. ಜಮೀನಿನ ಕೆಲಸಗಳು ಭರದಿಂದ ಸಾಗುತ್ತವೆ. ಯುವಕರು ಅವರ ಸಾಮರ್ಥ್ಯವನ್ನು ಅರಿತು ಕೆಲಸ ವಹಿಸಿಕೊಳ್ಳುವುದು ಉತ್ತಮ ಇಲ್ಲವಾದಲ್ಲಿ ಎಲ್ಲರ ಮುಂದೆ ಅಗೌರವಕ್ಕೆ ಪಾತ್ರರಾಗುವಿರಿ. ಹಣದ ಒಳಹರಿವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಉದ್ದಿಮೆದಾರರಿಗೆ ಹೊಸ ಶಾಖೆಯನ್ನು ತೆರೆಯಲು ಬೇಕಾದ ಅನುಕೂಲತೆಗಳು ಒದಗುತ್ತವೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಕೆಲವೊಂದು ತುರ್ತು ವಿಷಯಗಳ ಪರಿಹಾರಕ್ಕಾಗಿ ಸಂಬಂಧಿಕರನ್ನು ಓಲೈಸುವಿರಿ. ನೌಕರ ವರ್ಗದವರ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಪ್ರೋತ್ಸಾಹಧನ ಸಿಗುವ ಸಾಧ್ಯತೆ ಇದೆ. ಮಹಿಳೆಯರು ಭಾವೋದ್ವೇಗದಿಂದ ಮಾತನಾಡಿದಲ್ಲಿ ಅವರ ಗೌರವಕ್ಕೆ ಕುಂದು ಬರಬಹುದು. ಉಸಿರಾಟದ ತೊಂದರೆ ಇರುವವರು ಎಚ್ಚರಿಕೆಯಿಂದ ಇದ್ದು ಚಿಕಿತ್ಸೆ ಪಡೆಯುವುದು ಉತ್ತಮ.

ಪದಬಂಧ 2736



ಮೇಲಿನಿಂದ ಕೆಳಕ್ಕೆ

1. ತುಂಬು ಹೃದಯದ ಗೌರವ 3
2. ಉತ್ತರ ಕರ್ನಾಟಕದ ಜವಳಿ ಮನೆತನ 3
3. ಉತ್ತುಂಗ ಸ್ಥಾನದಿಂದ ಕೆಳಗಿಳಿಯುವಿಕೆ 4
4. ಮನವನ್ನು ಅಪಹರಿಸುವಂತಹ ದೃಶ್ಯ 6
6. ಮರ ಬಳ್ಳಿಯ ಕಾವ್ಯಮಯ ಜೋಡಿ 4
8. ಪವಡಿಸು ಎಂದು ಶ್ರೀನಿವಾಸನಿಗೆ ಮಾಡುವ ಹಾಸಿಗೆ ಸೇವೆ 5
11. ಗಜರಾಜನಂತೆ ಗಹನವಾದ ಚಲನೆ 5
12. ಯಾವಾಗಲೂ ಶಂಕೆಯನ್ನುಂಟು ಮಾಡುವ ಪದ 6
14. ಇನ್ನೊಬ್ಬರ ಒಳಿತು 4
17. ಆನೆಯ ಅಂಕುಶ ಕಟ್ಟಿದ ಸವಾರ 4
19. ರಘು ವಂಶದಲ್ಲಿ ಜನಿಸಿದವ 3
21. 'ಮನಿ'ಯ ಮದ ತುಂಬಿದ ಕಾಮರೂಪಿ 3

ಎಡದಿಂದ ಬಲಕ್ಕೆ

1. ತನ್ನೊಳಗಿರುವ ತನಗೆ ಧಕ್ಕೆ ಬಾರದಂತೆ ಕೊಡುವ ಮರ್ಯಾದೆ 5
3. ಹೋಲಿಕೆಗೆ ಹೊರತಾದವಳು 4
5. ಒಳಗೊಳ್ಳದೆ ಹೊರಗುಳಿದಿದ್ದು 3
7. ವಿರಳವಾಗಿ ದೊರೆಯುವ ನೋಟದ ಭಾಗ್ಯ 4
9. ಋಷಿವರೇಣ್ಯರ ಸುಪುತ್ರ 5
10. ಶುದ್ಧಿಗೆ ಬರುವ ಆಕಳಿನ ಮೂತ್ರ ಹಿಂದು ಮುಂದು 3
12. ಉದ್ದಗಲದ ಮಾಪನ 3
13. ಜಿಗುಪ್ಸೆಯಿಂದ ಉಂಟಾದ ರಸಕ್ಕೆ ಸಮನಾದ ಅರ್ಜುನ ನಾಮ 3
14. ಪಟ ವ್ಯತ್ಯಸ್ಥಗೊಂಡ ಸ್ಥಿತಿ 3
15. ರಾಜಕಾರಣದಲ್ಲಿ ಸಾರಾಂಶ ಹೇಳಲು ಬರುವವ 3
16. ದೇವರಿಗೆ ಬಿಟ್ಟ ಮರ್ಯಾದೆ ಅವಮರ್ಯಾದೆ 5
18. ಆಂಜನೇಯನ ಕೊರಳಿಗೆ ಹಾಕುವ ಕರಿದ ಉದ್ದಿನ ತಿಂಡಿಯ ಮಾಲೆ 4
20. ಸಂಸ್ಕೃತ ಮೂಲ ಪಡೆದ ಕನ್ನಡ ಪದ 3
22. ತಮ್ಮ ಪುತ್ರನಾಗಿ ಸ್ವೀಕೃತನಾದವ 4
23. ಎಲ್ಲರಿಗೂ ಜನ್ಮ ನೀಡಿರುವ ವಿಶ್ವ ಮಾತೆ 5

ಪದಬಂಧ ಉತ್ತರ -2735

ಮೇಲಿಂದ ಕೆಳಕ್ಕೆ

1. ಪಾರಿತೋಷಕ 2.ತರುಣ 3.ಪುರದೇಗುಲ 4.ಕಪಾಲಿ 5.ಕಂಬ 6.ಒರಗು 7. ಜಂಬೂಸವಾರಿ 9.ಪಿನಾಕ 11.ರಸಾಲ 12.ಕಸುಮಾಂಜಲಿ 13.ಟವಲು 15.ತಬಲಾ 16.ವೇಣುವಾದನ 17.ಕರ್ಕಶ 18.ಕುದುರೆಕಾಲು 20.ಲಿಖಿತ 21.ಹುಳು 22.ವೇದಿಕೆ

ಎಡದಿಂದ ಬಲಕ್ಕೆ

1. ಪಾರಿಜಾತ 3.ಪುಳಕ 5.ಕಂದರ 6.ಒಣಜಂಬ 8.ಲಿಪಿ 10.ಕರಗು 12.ಕುಲಕಂಟಕ 14.ವಾರಸು 15.ತಲಕಾವೇರಿ 17.ಕಲುಕು 19.ಲಾಲಿ 21.ಹುಲಿವೇಷ 23.ದಯಾಳು 24.ತಪನ 25.ಕೆನೆಹಾಲು

‘ರಾಯಬಾಗ್ ಪೌಳ್ಯಾಗ ಕುಂತು ಬರ್ದೇನ್ರಿ ಯುರೋಪಿನ ಕತಿ

ಕನ್ನಡ ಮಣ್ಣಿನಲ್ಲಿ ಮೊಳೆತ ‘ಬರ್ಗಂಡಿ ವಿಂಟರ್ಸ್ ಇನ್ ಯುರೋಪ್’ ಎಂಬ ಇಂಗ್ಲಿಷ್ ಕಾದಂಬರಿ ವಿದೇಶದಲ್ಲಿ ಬಿಡುಗಡೆಯಾಗಿ, ಪಾಶ್ಚಾತ್ಯ ಓದುಗರ ಭಾವಕೋಶದ ತಂತಿ ಮೀಟಿದೆ. ಸಾಹಿತ್ಯ ಕ್ಷೇತ್ರಕ್ಕೆ ಈಗಷ್ಟೇ ಪಾದವೂರಿದ ಕುಂದಾನಗರಿ ಬೆಳಗಾವಿಯ ಪ್ರಣಯ್ ಪಾಟೀಲ ಈ ಕಾದಂಬರಿಯ ರಚನೆಕಾರ. ಅಮೆರಿಕದ ಅಮೆಝಾನ್ ಬೆಸ್ಟ್ ಸೆಲ್ಲರ್ ಬುಕ್‌ಗಳಲ್ಲಿ 18ನೇ ಸ್ಥಾನ ಪಡೆದು, ದೇಸಿ ಸಾಹಿತ್ಯಾಸಕ್ತರ ಕುತೂಹಲವನ್ನು ಬಡಿದೆಬ್ಬಿಸಿದ ಅವರ ಈ ಚೊಚ್ಚಲ ಕೃತಿ ಬೆಂಗಳೂರಿನಲ್ಲಿ ಮೇ 7ರಂದು ಬಿಡುಗಡೆಯಾಗಲಿದೆ. ‘ನಾನ್ ಬೆಳಗಾವಿಯೊಳಗ ಇರೂದ್ರಿ, ಹುಟ್ಟಿದ್ದು ಬೆಂಗಳೂರಿನಾಗ, ಸ್ಕೂಲಿಂಗ್ ಡೆಹರಾಡೂನ್‌ದಾಗ, ಎಂಜಿನಿಯರಿಂಗ್ ಜರ್ಮನಿದಾಗ ಮಾಡೇನ್ರಿ’ ಎನ್ನುತ್ತ ಅಪ್ಪಟ ದೇಸಿ ಭಾಷೆಯಲ್ಲಿ ಮಾತನಾಡಿದ ಪ್ರಣಯ್, ತಮ್ಮ ‘ಕೋವಿಡ್ ಕೂಸು’ ಜನಿಸಿದ್ದು ಹೇಗೆ, ಬರವಣಿಗೆಯ ತುಡಿತ ಶುರುವಾಗಿದ್ದು ಹೇಗೆ ಎಂಬುದನ್ನು ಇಂಗ್ಲಿಷ್ ಮಿಶ್ರಿತ ಕನ್ನಡದಲ್ಲಿ ಹಂಚಿಕೊಂಡರು.

ಸಂಧ್ಯಾ ಹೆಗಡೆ

ಸಂದರ್ಶನ



• ಸಾಹಿತ್ಯ ಕ್ಷೇತ್ರಕ್ಕೆ ಧುತ್ತನೆ ಪ್ರವೇಶಿಸಿ ಚಕಿತಗೊಳಿಸಿದಿರಲ್ಲ...

ಅದು ಹೆಂಗಾತು ನಂಗೂ ಗೊತ್ತಿಲ್ರಿ, 2020ರ ಮೊದಲ ಲಾಕ್‌ಡೌನ್ ಸಂದರ್ಭ, ಮನ್ಯಾಗ್ ಕುಂತು ಮಾನಸಿಕ ಆಗಾಕ್ ಹತ್ತಿತ್‌ರೀ. ಬರಕೋತ್ ಕುಂತ್ರ ಪಾಡಾಕ್ಕೇತಿ ಅನಸ್ತು. ಬರಿಲಿಕ್ಕೆ ಶುರು ಮಾಡಿದಾಗ್ ಮನಸ್ಸಿಗೆ ಏನೋ ಹಿತ ಆತು. ಮೊದಲ ಎರಡು ಚಾಪ್ಟರ್ ಮೊಬೈಲ್‌ನಾಗ ಟೈಪ್ ಮಾಡ್ದೆ. ಎದೆಯೊಳಗಿನ ಹೊಯ್ದಾಟ, ಕೊಠಳುಬ್ಬಿದ ಭಾರ ಇಳಿದ ಅನುಭವ ಆತು. ಮಾನಸಿಕ ಸ್ಥಿತಿ ಬೆಟರ್ ಆತು. ಹಾಂಗೆ ಬರಕೊಂತ 300 ಪುಟ ದಾಟಿ ಅದೇ ಒಂದು ಕಾದಂಬರಿಯಾಗಿ ಮೂಡಿಬಂತು ನೋಡ್ರಿ.

• ರಾಯಬಾಗ್‌ನ ಪೌಳಿಯಲ್ಲಿ ಕುಳಿತು ಬರೆದ ಕಾದಂಬರಿ ಯುರೋಪ್ ದಾರಿ ಹಿಡಿದಿದ್ದು ಹೇಗೆ?

ಪ್ರಥಮ ಪ್ರಯೋಗದ ಪ್ರಕಟಣೆಗೆ ಸಣ್ಣ ಪ್ರಕಾಶಕರನ್ನೇ ಹುಡುಕಿದೆ. ಯುನೈಟೆಡ್ ಕಿಂಗ್‌ಡಮ್‌ನ ಕ್ರಿಸ್ಟಲ್ ಪೀಕ್ ಪಬ್ಲಿಷರ್‌ನವ್ರು ಒಪ್ಪಂದ ಮಾಡ್ಕೊಂಡು 1,200 ಪೌಂಡ್ ಅಂದರೆ ಸುಮಾರು 1.2 ಲಕ್ಷ ರೂಪಾಯಿ ನನ್ ಅಕೌಂಟ್‌ಗೆ ಕ್ರೆಡಿಟ್ ಮಾಡಿದ್ರು. ಸಾಮಾಜಿಕ ಸೇವೆ ನಾನು ನೆಚ್ಚಿದ ಕ್ಷೇತ್ರ, ಪುಸ್ತಕದಿಂದ ಗಳಿಸಿದ್ದನ್ನ ದಾನಕ್ಕ ಕೊಡ್ಬೇಕಂತ ನಿರ್ಧಾರ ಮಾಡಿ, ನ್ಯೂಯಾರ್ಕ್‌ನ ಸೇಂಟ್ ಜ್ಯೂಡ್ಸ್ ಚಿಲ್ಡ್ರನ್ಸ್ ರಿಸರ್ಚ್ ಹಾಸ್ಪಿಟಲ್‌ಗೆ ಅದನ್ನ ಒಪ್ಪಿಸಿದೆ. ಅಲ್ಲಿ ಭಾಳ್ ಬೇಗ ಕಾದಂಬರಿ ಕ್ಲಿಕ್ ಆತ್ರಿ, ಹಂಗ ನಮ್ಮೂರಿನಲ್ಲಿ ಈ ನಾವೆಲ್ ಬಿಡುಗಡೆ ಮಾಡಬೇಕ್ ಅನ್ಕೊಂತಿದ್ದಾಗ್ ರಾಜದೀಪ್ ಸರ್‌ದೇಸಾಯಿ ಅವರನ್ನು ಭೇಟಿಯಾದೆ. ಸ್ನೋಬಾಲ್ ಎಫೆಕ್ಟ್ ಅಂತಾರಲ್ಲ ಹಂಗ, ಯಾವುದೂ ಯೋಜಿತ ಅಲ್ಲ, ಒಂದಕ್ಕೊಂದ್ ಬೆಸೆದು ಸೇತು ಆದ್ವು.

• ಪಾಶ್ಚಾತ್ಯ ಓದುಗನಲ್ಲಿ ಈ ಕಾದಂಬರಿ ಕಿಚ್ಚು ಹಚ್ಚಬಹುದೆಂಬ ನಿರೀಕ್ಷೆ ಇತ್ತಾ?

2006ರಿಂದ 2011ರ ಮಟ ಜರ್ಮನಿದಾಗ್ ಇದ್ದೆ. ಅಲ್ಲಿ ನನ್ ಫ್ರೆಂಡ್ಸ್ ಕೆಲವ್ರು ಡ್ರಗ್ಸ್‌ನಿಂದ ಭಾಳ್ ತೊಂದ್ರಿ ಅನುಭವಿಸಿದ್ರು. ಕೆಲವೊಬ್ರು ಜೀವಾನೇ ಕಳಕೊಂಡ್ರು, ಇದು ಹಳೆ ಕತಿ. ನಾಳೆಕ್ ಭೇಟಿಯಾಗ್ಬಹುದು ಅನ್ಕೊಂಡಿದ್ ಸ್ನೇಹಿತರನ್ನೂ ಕೋವಿಡ್‌ದಾಗಿನ ದುರಿತ ಕಾಲದೊಳಗ ಕಳಕೊಂಡ್ವಿ. ಈ ಸಂಕಟಗಳನ್ನ ಸಹಿಸ್ಕೊಳ್ಳಾಕ ಮನಸ್ಸಿಗೆ ಭಾಳ್ ಕಷ್ಟ ಆತ್ರಿ. ನೆನಪುಗಳ ಮೆರವಣಿಗೆ ಸಾಲುಸಾಲಾಗಿ ಬರಾಕ್ ಹತ್ವು ಮತ್ತು ಕಾಲ್ಪನಿಕ ಕಾದಂಬರಿ ಹುಟ್ಟಿಗೆ ಕಾರಣವಾದ್ವು.

ಜೀವ ಹಿಂಡುವ ಡ್ರಗ್ಸ್ ಅಮಲಿನ ದುಷ್ಪರಿಣಾಮ, ಪ್ರೀತಿ- ಪ್ರಣಯ, ಭೂತದ ಕತಿ, ವಾಮಾಚಾರ, ಪುನರ್ಜನ್ಮ, ಹೀಗೆ ಎಲ್ಲವೂ ಇಣುಕಿರುವ ಕಾದಂಬರಿ ಸುಖಾಂತ್ಯದಲ್ಲಿ ಲೀನವಾಗ್ತೈತಿ. ನಾಯಕ ಜೇಸ್ ಮತ್ತು ನಾಯಕಿ ಯಾಸ್ಮಿನ್ ಪಾತ್ರಗಳ ನೇರ ನಿರೂಪಣೆಯನ್ನ ಹಲವಾರು ಓದುಗರು ಮೆಚ್ಚಿಕೊಂಡಿದ್ದಾರಿ. ಓದುಗರು ಹೇಗೆ ಸ್ವೀಕರಿಸಬಹುದು ಎಂದು ಬರೆಯೋವಾಗ ಯೋಚಿಸಿರ್ಲಿಲ್ಲ, ಆದ್ರ ನನ್ನ ಒಳಗನ್ನ ನಿರಾಳಗೊಳಿಸಿದ್ದು ‘ಬರ್ಗಂಡಿ ವಿಂಟರ್ಸ್’.

• ಕನ್ನಡ ಓದುಗರು ಈ ಕಾದಂಬರಿಯ ನಿರೀಕ್ಷೆಯಲ್ಲಿದ್ದಾರೆ...

ನಮ್ ಭಾಗದಾಗ್ ಭಾಳ್ ಮಂದಿ ಕನ್ನಡದಾಗ್ ಕೇಳಾಕ್ ಹತ್ತಾರ. ಬೆಳಗಾವಿ ಆಡುಗನ್ನಡ ಮಾತ್ರ ನನ್ನ ಗೊತ್ರಿ. ಕನ್ನಡ ಕಲ್ಕೊಂಡ್ ಭಾಷಾಂತರ ಮಾಡೋ ವಿಚಾರ ಐತಿ. ಯಾಕಂದ್ರ ಕಾದಂಬರಿಯ ಮೂಲ ಆಶಯ ಜೋಪಾನ ಆಗಿರ್ಬೇಕಲ್ರಿ. ನಮ್ಮಲ್ಲೂ ಡ್ರಗ್ಸ್ ಮಾಫಿಯಾ ಭಾಳ್ ಆಗ್ಯೆತಿ, ಯುವಕರು ಈ ಜಾಲದೊಳಗ ಸಿಕ್ಕಿ ಒದ್ದಾಡಕ್ಕತ್ತಾರ್.

• ಬರೆಯುವ ಗೀಳು ಚಿಕ್ಕಂದಿನಿಂದ ಬಂದಿದ್ದಾ?

ಐದನೇ ಕ್ಲಾಸಿನಾಗ್ ಇದ್ದಾಗ ಸಣ್ಣ ಕತೆಗಳನ್ನ ಬರೆದಿದ್ದೆ. ಆಗ ನಮ್ ಹೆಡ್‌ಮಾಸ್ಟರ್ ಶಹಭಾಷ್‌ಗಿರಿ ಕೊಟ್ಟಿದ್ರು. ಅದೇ ಮೊದಲ ಪ್ರೇರಣೆ, ಆಮ್ಯಾಕ್ ನಾನ್ ಎಲ್ಲೇ ಹೋಗ್ಲಿ ಆ ಪರಿಸರದ ವಿಶೇಷಗಳನ್ನ ದಾಖಲಿಸುವ ಹವ್ಯಾಸ ರೂಢಿ ಮಾಡ್ಕೊಂಡಿದ್ದೆ. ನೋಟ್ಸ್‌ನಲ್ಲಿ ದಾಖಲಾಗಿದ್ದ ಜರ್ಮನಿಯ ಅನುಭವಗಳು ಈ ಕಾದಂಬರಿ ಬರೀವಾಗ ರೀಲ್‌ನಂತೆ ಬಿಚ್ಚಿಕೊಳ್ಳಾಕತ್ವು.

• ಇಷ್ಟದ ಲೇಖಕರು ಯಾರು?

ಇತಿಹಾಸ, ಮ್ಯಾಜಿಕ್, ಫ್ಯಾಂಟಸಿ ಇಷ್ಟಪಟ್ಟು ಓದುವ ಪುಸ್ತಕಗಳು. ರಸ್ಕಿನ್ ಬಾಂಡ್ ಅವರ ‘room on the roof’ ಕೃತಿಯನ್ನು ಹೈಸ್ಕೂಲ್‌ನಲ್ಲಿದ್ದಾಗಲೇ ಓದಿದ್ದೆ. ಅಮೆರಿಕನ್ ಲೇಖಕ ರಾಬರ್ಟ್ ಲ್ಯೂಡ್ಲಮ್, ರಸ್ಕಿನ್ ಬಾಂಡ್ ಹೀಗೆ ಅನೇಕ ಲೇಖಕರ ಪುಸ್ತಕಗಳು ಓದುವ ಗೀಳನ್ನು ಬೆಳೆಸಿವೆ. ರೊಮ್ಯಾಂಟಿಕ್ ಕೃತಿಗಳನ್ನ ಹೆಚ್ಚು ಓದಿಲ್ರಿ..

• ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ರಾಜಕೀಯದಲ್ಲಿದ್ದವರು, ರಾಜಕೀಯ ಮತ್ತು ಸಾಹಿತ್ಯ ತದ್ವಿರುದ್ಧ ಧ್ರುವಗಳಲ್ಲವೇ?

ಕೃಷಿ ಮತ್ತು ಶಿಕ್ಷಣ ನನಗ ಎರಡು ಕಣ್ಣಿದ್ದಂಗ. ಇವನ್ನ ಬಿಟ್ ನಾನಿಲ್ರಿ. ಅದಕ್ಕ ಓದು ಮುಗಿಸಿ ಹೊಳ್ಳಿ ರಾಯಬಾಗದಾಗ್ ಬಂದು ಸೆಟಲ್ ಆಗಿದ್ದು. ಬೆಕ್ಕೇರಿಯಲ್ಲಿ ಕಬ್ಬು ಬೆಳಿತೇವಿ, ಬೆಳಗಾವ್‌ದಾಗ ನಾವೇ ನಡೆಸುವ ಶಾಲೆಗಳು ಅದಾವ. ಊರಿಗೆ ಬಂದು ರಾಜಕೀಯಕ್ಕೆ ಸೇರಿ, ಎರಡು ಬಾರಿ ಜಿಲ್ಲಾ ಪಂಚಾಯಿತಿ ಸದಸ್ಯನೂ ಆದ ಅನುಭವ ಆತು. ಈ ರೇಜಿಗೆ ಹುಟ್ಟಿಸುವ ರಾಜಕೀಯಕ್ಕೆ ಮತ್ತೆ ಹೋಗಾಂಗಿಲ್ಲ. ಸೇವೆದಾಗೂ ಪ್ರಚಾರ ಬಯಸುವವರು ಈ ರಾಜಕೀಯ ಮಂದಿ.

ಒತ್ತರಿಸಿ ಬರುವ ಸಂಚಾರಿ ಭಾವಗಳು, ಅಕ್ಷರದಲ್ಲಿ ಸ್ಥಾಯಿಯಾಗುವುದೇ ಸಾಹಿತ್ಯ. ಈ ಆಪ್ತಭಾವಗಳು ಮುಕ್ತವಾಗಿದ್ದರೆ, ಅವುಗಳನ್ನ ಮುಕ್ತವಾಗಿ ಬರೆಯಲು ಬಿಟ್ಟರೇನೇ ಚಂದ. ಯಾಕಂದ್ರ ನಮ್ಮೊಳಗೆ ಹೆಪ್ಪುಗಟ್ಟುವ ಭಾವಗಳು ತೀರಾ ಖಾಸಗಿ ಸ್ವತ್ತು. ಅದಕ್ಕ ನಾವು ಮೋಸ ಮಾಡಬಾರ್ದು ಅಲ್ಲಾ?

‘ಕನ್ನಡದ ವಿವೇಕ’ದೊಂದಿಗೆ ನಡಿಗೆ–ಕೊಡುಗೆ

ರಘುನಾಥ ಚ.ಹ.

ವಿಮರ್ಶೆ

ಬೆವರು ಮತ್ತು ದೇವರು ಎನ್ನುವ ವಿರುದ್ಧಾರ್ಥಕ ಪದಗಳು ಕೂಡಿಕೊಂಡ ‘ಬೆವರು ನನ್ನ ದೇವರು’ ಎನ್ನುವ ಶೀರ್ಷಿಕೆ, ಬರಗೂರು ರಾಮಚಂದ್ರಪ್ಪನವರ ಒಟ್ಟಾರೆ ಬರವಣಿಗೆಯ ಆಶಯವನ್ನು ಅರ್ಥ ಮಾಡಿಕೊಳ್ಳಲು ಲೇಖಕರೇ ಒದಗಿಸಿಕೊಟ್ಟಿರುವ ಸನ್ನೆಗಳಂತಿವೆ. ಬೆವರದಿರುವುದು ದೇವರ ಲಕ್ಷಣಗಳಲ್ಲೊಂದಷ್ಟೇ. ಆದರೆ, ಬರಗೂರರು ಪ್ರತಿಪಾದಿಸುವ ದೇವರು ಬೆವರಿನ ಸ್ವರೂಪಿ. ಈ ದೇಶದ ಸಂಸ್ಕೃತಿ ಮತ್ತು ಬೆವರು ನಿಂತಿರುವುದು ಬೆವರಿನ ಧರ್ಮದ ಮೇಲೆ ಎನ್ನುವ ವಿಶಿಷ್ಟ ತಿಳಿವಳಿಕೆ ಬರಗೂರರ ಒಟ್ಟಾರೆ ಸಾಹಿತ್ಯದ ಹಿಂದಿರುವ ತಾತ್ವಿಕತೆ. ಕಾಯಕವೇ ಕೈಲಾಸ ಎನ್ನುವ ಶರಣಪ್ರಜ್ಞೆ, ಬೆವರು ಮತ್ತು ದೇವರನ್ನು ಪ್ರತ್ಯೇಕವಾಗಿ ನೋಡದೆ, ಬೆವರು ಮತ್ತು ದೇವರನ್ನು ಏಕರೂಪದಲ್ಲಿ ನೋಡುವ ‘ಬೆವರೇ ನನ್ನ ದೇವರು’ ಎನ್ನುವ ಪರಿಕಲ್ಪನೆಯಲ್ಲೂ ಇದೆ. ಬದುಕಿನ ನಂಬಿಕೆ ಹಾಗೂ ಕಾಯಕಕ್ಕೆ ತಕ್ಕಂತೆ ದೇವರನ್ನು ಪರಿಭಾವಿಸುವ ಈ ಕ್ರಮ ಗಾಂಧಿ ಹಾಗೂ ಶಿವರಾಮ ಕಾರಂತರ ಚಿಂತನೆಗಳಿಗೆ ಸಮೀಪವಾದುದು.

ಶ್ರಮದ ಶಕ್ತಿಯನ್ನು, ಶ್ರಮಿಕರ ಮಹತ್ವವನ್ನು ಬಿಂಬಿಸುತ್ತಿರುವ ಬರಗೂರರ ಬರವಣಿಗೆ ‘ಶ್ರಮಿಕ ಭಾರತ’ವನ್ನು ತನ್ನ ಪ್ರಧಾನ ಕಾಳಜಿಯನ್ನಾಗಿಸಿಕೊಂಡಿದೆ. ‘ಬೆವರಿನ ಇಂಡಿಯಾ’ ಕವಿತೆಯಲ್ಲಿ – ‘ಬೆವರಲಿ ಬರೆದ ಸಮತೆಯ ಭಾರತ’ ಎನ್ನುವ ಸಾಲು, ‘ಜನ ಕನ್ನಡ’ ಗೀತೆಯ ‘ಬಡವರ ಬೆವರಲ್ಲಿ ಉರಿಯುವ ಕನ್ನಡ’ ಎನ್ನುವ ಮಾತು – ಬೆವರನ್ನು ಸಮಾನತೆ ಮತ್ತು ರಾಷ್ಟ್ರಪ್ರಜ್ಞೆಯ ರೂಪದಲ್ಲಿ ಕಾಣುವ ಪ್ರಯತ್ನಗಳಾಗಿವೆ. ಕಥೆ, ಕವಿತೆ, ಕಾದಂಬರಿ, ಲೇಖನ, ಸಿನಿಮಾ – ಬರಗೂರರ ಎಲ್ಲ ಕೃತಿಗಳಲ್ಲಿಯೂ ಬೆವರನ್ನು ನೆಚ್ಚಿಕೊಂಡ ಜನಪದರೇ ಮುಂಚೂಣಿಯಲ್ಲಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಬೆವರನ್ನು ಒಂದು ಮೌಲ್ಯವನ್ನಾಗಿ ಪ್ರಧಾನವಾಗಿ ಚಲಾವಣೆಗೆ ತಂದ ಮುಖ್ಯ ಲೇಖಕರು ರಾಮಚಂದ್ರಪ್ಪನವರು ಎನ್ನುವುದರಲ್ಲಿ ಅನುಮಾನವಿಲ್ಲ.

14 ಸಂಪುಟಗಳ ಐದು ಸಾವಿರಕ್ಕೂ ಹೆಚ್ಚು ಪುಟಗಳ ಬರಗೂರರ ಬರವಣಿಗೆಯನ್ನು ಎರಡು ರೂಪಗಳಲ್ಲಿ ಗುರ್ತಿಸಬಹುದು. ಒಂದು, ಸೃಜನಶೀಲ ಬರಹಗಾರನ ಅಭಿವ್ಯಕ್ತಿಯ ರೂಪ. ಮತ್ತೊಂದು, ಸಾಮಾಜಿಕ ಕಾಳಜಿಯ ಚಿಂತಕನ ಅಭಿವ್ಯಕ್ತಿ. ಈ ಎರಡೂ ರೂಪಗಳ ಬರವಣಿಗೆ ಸಂಖ್ಯೆಯ ದೃಷ್ಟಿಯಿಂದ ಹೆಚ್ಚೂಕಡಿಮೆ ಸಮ ಪ್ರಮಾಣದಲ್ಲಿ ಇದೆಯಾದರೂ, ಈ ಸಮಗ್ರ ಸಾಹಿತ್ಯ ಓದುಗರ ಮನಸ್ಸಿನಲ್ಲಿ ಬರಗೂರರನ್ನು ನಿಲ್ಲಿಸುವುದು ಚಿಂತಕರನ್ನಾಗಿಯೇ. ಕಥೆ, ಕಾದಂಬರಿ, ಕವಿತೆಗಳನ್ನು ಬರಗೂರರು ಸಾಕಷ್ಟು ಸಂಖ್ಯೆಯಲ್ಲಿ ರಚಿಸಿದ್ದಾರಾದರೂ, ಆ ಕೃತಿಗಳು ಹಾಗೂ ಸಿನಿಮಾಗಳು ಕೂಡ ಅವರ ಸಾಮಾಜಿಕ ಚಿಂತನೆಯ ರೂಪಗಳೇ ಆಗಿವೆ. ತಮ್ಮ ಚಿಂತನೆಗಳ ಅಭಿವ್ಯಕ್ತಿಗಾಗಿ ಬರಗೂರರು ಭಿನ್ನ ಮಾಧ್ಯಮಗಳನ್ನು ಬಳಸಿಕೊಂಡಿದ್ದರೂ, ಮಾಧ್ಯಮದ ಸಾಧ್ಯತೆಗಳನ್ನು ಪೂರ್ಣ ಪ್ರಮಾಣದಲ್ಲಿ ಒಳಗೊಳ್ಳುವುದಕ್ಕಿಂತಲೂ ಮುಖ್ಯವಾಗಿ ಅವರ ಪ್ರಧಾನ ಕಾಳಜಿ ಜನಪರ ಚಿಂತನೆಯೇ ಆಗಿದೆ. ಅಂದರೆ, ಬರಗೂರರ ಕೃತಿಗಳು ಕಲಾಕೃತಿಗಳಾಗಿ ಯಶಸ್ವಿಯಾಗಿಲ್ಲ ಎಂದರ್ಥವಲ್ಲ. ಬಿಡಿ ಬಿಡಿಯಾಗಿ ಕಲಾಕೃತಿಗಳಾಗಿ ಕಾಣಿಸುವ ಆ ಕೃತಿಗಳು, ಒಟ್ಟಂದದಲ್ಲಿ ಬರಗೂರರ ಚಿಂತನಶೀಲತೆಯನ್ನೇ ಧ್ವನಿಸುತ್ತಿವೆ ಎನ್ನುವುದನ್ನು ಗಮನಿಸಬೇಕು.

ಗಾಂಧಿ, ಬರಗೂರರನ್ನು ಮತ್ತೆ ಮತ್ತೆ ಕಾಡಿರುವ ಕಾಡುತ್ತಿರುವ ಚೈತನ್ಯ. ವೈಚಾರಿಕ ಬರಹಗಳು, ಕಾದಂಬರಿ, ಸಿನಿಮಾ – ಹೀಗೆ ಹಲವು ರೂಪಗಳಲ್ಲಿ ಕಾಣಬಹುದಾದ ಗಾಂಧಿಯೊಂದಿಗಿನ ಅನುಸಂಧಾನವನ್ನು, ಬರಗೂರರ ಒಟ್ಟಾರೆ ಬರವಣಿಗೆಯಲ್ಲಿರುವ ಶಿಸ್ತು–ಸಂಯಮ–ಅಧ್ಯಯನದಲ್ಲೂ ಕಾಣಬಹುದು. ರಾಜ್‌ಕುಮಾರ್ ಬರಗೂರರನ್ನು ಸೆಳೆದಿರುವ ಮತ್ತೊಂದು ವ್ಯಕ್ತಿತ್ವ. ಗಾಂಧಿ, ಅಂಬೇಡ್ಕರ್, ರಾಜ್‌ರಂಥ ವ್ಯಕ್ತಿತ್ವಗಳು ಬರಗೂರರನ್ನು ಆಕರ್ಷಿಸಲಿಕ್ಕೆ ಕಾರಣ, ಆ ವ್ಯಕ್ತಿತ್ವಗಳ ಸಾಧನೆ ಹಾಗೂ ಬದುಕಿನ ದಾರಿಗಳಾಗಿರುವಂತೆಯೇ ಅವರು ಶ್ರಮ ಸಂಸ್ಕೃತಿಗೆ ಹತ್ತಿರವಾಗಿರುವುದೂ ಆಗಿದೆ.

ಸಾಮಾಜಿಕ ವಿದ್ಯಮಾನಗಳ ಬಗ್ಗೆ ಸಮಕಾಲೀನ ಸಂದರ್ಭದಲ್ಲಿ ಕನ್ನಡದ ಬಹುಮುಖ್ಯ ಸೃಜನಶೀಲ ಸ್ಪಂದನ–ಪ್ರತಿಕ್ರಿಯೆಯ ರೂಪದಲ್ಲಿ ಬರಗೂರರನ್ನು ಗುರ್ತಿಸಬಹುದು ಎನ್ನುವುದಕ್ಕೆ ಅವರ ಅಂಕಣಗಳು, ಸಾಮಾಜಿಕ–ರಾಜಕಾರಣ–ಭಾಷೆ–ಶಿಕ್ಷಣ–ಸಂಸ್ಕೃತಿಗೆ ಸಂಬಂಧಿಸಿದ ಬರಹಗಳು ಉದಾಹರಣೆಯಂತಿವೆ. ಈ ಬರಹಗಳನ್ನು ಸಾಂದರ್ಭಿಕ ಚೌಕಟ್ಟಿನಾಚೆಗೂ, ಕರ್ನಾಟಕದ ಚರಿತ್ರೆ–ವರ್ತಮಾನಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿಯೂ ಗಮನಿಸಬಹುದಾಗಿದೆ. ಒಳನೋಟ, ಮಾಹಿತಿ ಹಾಗೂ ವಿಮರ್ಶೆ–ವಿಶ್ಲೇಷಣೆಗಳ ಹದವಾದ ಸಮೀಕರಣ ಸಾಧ್ಯವಾಗಿರುವುದು ಬರಗೂರರ ಬರಹಗಳಿಗೆ ವಿಶಿಷ್ಟ ಹೊಳಪನ್ನು ತಂದುಕೊಟ್ಟಿದೆ.

ಬೆವರು ನನ್ನ ದೇವರು
(ಬರಗೂರು ರಾಮಚಂದ್ರಪ್ಪನವರ ಸಮಗ್ರ ಸಾಹಿತ್ಯದ 14 ಸಂಪುಟಗಳು)
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಸಂ: 99805 60013
ಪು: 5268 ₹5950

ಇಲ್ಲಿನ ಹದಿನಾಲ್ಕು ಸಂಪುಟಗಳು ಬರಗೂರರ ಬರವಣಿಗೆಯ ಸಾಮರ್ಥ್ಯವನ್ನು ಸೂಚಿಸುವಂತೆಯೇ ಬಹುಮುಖಿ ಆಸಕ್ತಿ ಮತ್ತು ಪ್ರಯೋಗಶೀಲತೆಯ ಹಂಬಲವನ್ನೂ ಕಾಣಿಸುವಂತಿವೆ. ಸಾಹಿತ್ಯ–ಸಂಸ್ಕೃತಿ (2 ಸಂಪುಟ), ಸಾಮಾಜಿಕ–ರಾಜಕಾರಣ, ಭಾಷೆ–ಶಿಕ್ಷಣ–ಸಿನಿಮಾ, ಅಂಕಣ ಬರಹಗಳು (2 ಸಂಪುಟ), ಪುಸ್ತಕಾವಲೋಕನ (2 ಸಂಪುಟ), ಕಥೆ–ನೀಳ್ಗತೆ, ಕಿರು ಕಾದಂಬರಿಗಳು, ಕಾದಂಬರಿಗಳು (3 ಸಂಪುಟ) ಹಾಗೂ ಕವಿತೆಗಳು – ಹೀಗೆ ಒಂಬತ್ತು ವಿಷಯಗಳಿಗೆ ಸಂಬಂಧಿಸಿದ ಹದಿನಾಲ್ಕು ಸಂಪುಟಗಳ ಮೂಲಕ ಓರ್ವ ಮೇಷ್ಟ್ರು, ವಿಮರ್ಶಕ, ವಿಶ್ಲೇಷಕ, ಸಿನಿಮಾ ನಿರ್ದೇಶಕ, ಅಂಕಣಕಾರ, ಭಾಷಣಕಾರನ ರೂಪದಲ್ಲಿ, ಸಾಹಿತ್ಯ–ಸಂಸ್ಕೃತಿ ಸಂವಹನದ ಅನೇಕ ಸಾಧ್ಯತೆಗಳನ್ನು ದುಡಿಸಿಕೊಂಡ ವಿಶಿಷ್ಟ ಮನಸ್ಸು ಸಹೃದಯರಿಗೆ ಎದುರಾಗುತ್ತದೆ. ಈ ಕಾಲದ ಬಹುದೊಡ್ಡ ವಿಶ್ಲೇಷಕರಾಗಿ, ಸೂಕ್ಷ್ಮ ಸಂವೇದನೆಯ ಮನಸ್ಸಾಗಿ, ಚಿಂತನಾಶಕ್ತಿಯಾಗಿ ಬರಗೂರರ ವ್ಯಕ್ತಿತ್ವ ಮತ್ತು ಬದುಕು ರೂಪುಗೊಂಡಿರುವುದಕ್ಕೆ ಅವರ ಸಮಗ್ರ ಸಾಹಿತ್ಯ ಕನ್ನಡಿಯಂತಿದೆ.

ಮಾತು, ವಿಚಾರ, ಕೃತಿಗಳ ಮೂಲಕ ಅಸಾಂಪ್ರದಾಯಿಕವಾದ ಜೀವನ ವೃತ್ತಾಂತವೊಂದನ್ನು ಕಟ್ಟಿಕೊಳ್ಳಬಹುದು ಎನ್ನುವುದಾದರೆ, ‘ಬೆವರು ನನ್ನ ದೇವರು’ ಸಂಪುಟಗಳ ಮೂಲಕ ಲೇಖಕರ ಜೀವನವೃತ್ತಾಂತವೊಂದನ್ನು ರೂಪಿಸಿಕೊಳ್ಳಬಹುದು. ಜಾಲಿ ಮರಗಳು ಮತ್ತು ಬೆವರಿನ ಗಮಲಿನ ಆ ಕಥನ, ಪ್ರತಿಭೆ ಮತ್ತು ಸ್ವಂತ ಸಾಮರ್ಥ್ಯದ ಬಗ್ಗೆ ನಂಬಿಕೆಯುಳ್ಳವರಿಗೆ ಪ್ರೇರಣೆ ನೀಡುವಂತಹದ್ದು, ಸ್ವಾಭಿಮಾನ ತುಂಬುವಂತಹದ್ದು.

ಹದಿನಾಲ್ಕು ಸಂಪುಟಗಳು ಸೊಗಸಾಗಿ ರೂಪುಗೊಳ್ಳುವುದರ ಹಿಂದಿರುವ ‘ಅಭಿರುಚಿ ಪ್ರಕಾಶನ’ ಬಳಗದ ಶ್ರಮ ಎದ್ದುಕಾಣುವಂತಿದೆ. ಸಮಗ್ರ ಸಾಹಿತ್ಯದ ಪ್ರಕಟಣೆಯಾದರೂ, ಸಂಪುಟಗಳ ಮುಖಪುಟದಲ್ಲಿ ಲೇಖಕರ ಫೋಟೊ ಮುಖ್ಯವಾಗದೆ, ಬರವಣಿಗೆಯ ಆಶಯದ ಕಲಾಕೃತಿಯೇ ಪ್ರಮುಖ ಸ್ಥಾನ ಪಡೆದಿರುವುದೂ ವಿಶೇಷ ಸಂಗತಿಯೇ. ಸಂಪುಟಗಳನ್ನು ವಿಷಯವಾರು ವಿಂಗಡಿಸಿರುವ ಕ್ರಮವೂ ಒಪ್ಪವಾಗಿದೆ. ಆದರೆ, ಸಂಪುಟಗಳಲ್ಲಿ ಒಟ್ಟುಗೂಡಿರುವ ವೈಚಾರಿಕ ಬರಹಗಳು ಈ ಮೊದಲು ಪುಸ್ತಕರೂಪದಲ್ಲಿ ಪ್ರಕಟಗೊಂಡ ಉಲ್ಲೇಖಗಳು ಎಲ್ಲಿಯೂ ನಮೂದಾಗಿಲ್ಲ. ಆ ಉಲ್ಲೇಖಗಳೊಂದಿಗೆ ಅಂಕಣದ ಹೆಸರು ಮತ್ತು ಪ್ರಕಟವಾದ ಪತ್ರಿಕೆಗಳ ವಿವರಗಳನ್ನು ಒಳಗೊಳ್ಳಬೇಕಾಗಿದ್ದುದು ಅಕಡೆಮಿಕ್ ಅಗತ್ಯವಾಗಿತ್ತು.

ರಾಮಚಂದ್ರಪ್ಪ ಎನ್ನುವ ಗ್ರಾಮೀಣ ಪ್ರತಿಭೆ ತನ್ನ ಶ್ರಮ ಹಾಗೂ ತಿಳಿವಳಿಕೆಯಿಂದ ಕಟ್ಟಿಕೊಂಡ ಸೃಜನಶೀಲ ಜಗತ್ತು ಕನ್ನಡ ಜಗತ್ತಿನ ಭಾಗವಾಗಿ, ಕನ್ನಡದ ವಿವೇಕವನ್ನು ಒಳಗೊಂಡು ಅದನ್ನು ವಿಸ್ತರಿಸಿದ ರೂಪವಾಗಿ ‘ಬೆವರು ನನ್ನ ದೇವರು’ ಸಂಪುಟಗಳು ಮುಖ್ಯವೆನ್ನಿಸುತ್ತವೆ.

ಮೊದಲ ಓದು

ಸ್ವಾವಲೋಕನಕ್ಕೆ ಉಪಯುಕ್ತ ಕೃತಿ

ದೇಶದಲ್ಲಿ ಭಾಷಾವಾರು ರಾಜ್ಯಗಳ ರಚನೆ ಒಂದೇ ಕಾಲಘಟ್ಟದಲ್ಲಿ ನಡೆದವಾದರೂ ಜನಜೀವನಮಟ್ಟದಲ್ಲಿ ತೀವ್ರತರವಾದ ವ್ಯತ್ಯಾಸಗಳು ಏಕೆ ಎಂದು ಆಳವಾಗಿ ಚರ್ಚಿಸಿದೆ ಈ ಕೃತಿ.

ಒಂದು ಪ್ರದೇಶದ ಐತಿಹಾಸಿಕ ಸಂಗತಿಗಳು ಬೇರೆ ಬೇರೆಯೇ ಇರಬಹುದು. ಆದರೆ ಪ್ರಸ್ತುತ ರಾಜಕೀಯ ಆಡಳಿತ ಒಂದೇ ಆಗಿದೆ. ಜೀವನಮಟ್ಟದಲ್ಲಿ ಮಾತ್ರ ಗಣನೀಯ ವ್ಯತ್ಯಾಸವಿದೆ. ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಪ್ರಗತಿಯಲ್ಲಿ ದಶಕಗಳ ಅಂತರವನ್ನೇ ಈಗಲೂ ಆ ರಾಜ್ಯಗಳು ಹೊಂದಿವೆ. ಈ ಕೃತಿಯಲ್ಲಿ ದಕ್ಷಿಣ ಭಾರತದ ಎರಡು ರಾಜ್ಯಗಳು (ಕೇರಳ ಮತ್ತು ತಮಿಳುನಾಡು)ಮತ್ತು ಉತ್ತರ ಭಾರತದ ಎರಡು ರಾಜ್ಯಗಳನ್ನು (ಉತ್ತರ ಪ್ರದೇಶ ಮತ್ತು ರಾಜಸ್ಥಾನ) ಅಧ್ಯಯನಕ್ಕಾಗಿ ತೆಗೆದುಕೊಳ್ಳಲಾಗಿದೆ. ಸುಮಾರು 22 ತಿಂಗಳುಗಳ ಕ್ಷೇತ್ರಕಾರ್ಯ, ಸ್ಥಳೀಯ ಜನಸಾಮಾನ್ಯರು ಮತ್ತು ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರ ಜತೆಗೂ ಚರ್ಚಿಸಿ ಬರೆದ ಕೃತಿ ಇದಾಗಿದೆ.

ಕರ್ನಾಟಕದ ಮಟ್ಟಿಗೆ ನೇರ ವಿಷಯಗಳಿಲ್ಲದಿದ್ದರೂ ಅಧ್ಯಯನದಲ್ಲಿ ಉಲ್ಲೇಖಿತ ನಾಲ್ಕು ರಾಜ್ಯಗಳ ಉದಾಹರಣೆ, ಜೀವನಗುಣಮಟ್ಟದ ಮಾದರಿಯನ್ನು ಇಟ್ಟುಕೊಂಡು ಸ್ವಾವಲೋಕನ ಮಾಡಿಕೊಳ್ಳಲು ಅನುಕೂಲ ಕಲ್ಪಿಸುತ್ತದೆ ಈ ಕೃತಿ. ರಾಜ್ಯಶಾಸ್ತ್ರ ಅಧ್ಯಯನಾಸಕ್ತರು, ಸಮಾಜ ಶಾಸ್ತ್ರಜ್ಞರಿಗೆ ಉಪಯುಕ್ತ ಹೊತ್ತಗೆ.

ಉಪರಾಷ್ಟ್ರೀಯತೆ ಮತ್ತು ಸಾಮಾಜಿಕ ಏಳಿಗೆ
ಇಂಗ್ಲಿಷ್ ಮೂಲ: ಪ್ರೇರಣಾ ಸಿಂಗ್
ಕನ್ನಡಕ್ಕೆ: ಶ್ರುತಿ ಮರುಳಪ್ಪ
ಪ್ರ: ಋತುಮಾನ, ಬೆಂಗಳೂರು
ಸಂ: 9480035877
ಪು: 359 ₹330

ದೇಶ ಸುತ್ತಿದವರ ಪುಟ್ಟ ಕೋಶ

ನಾಡಿನ ಹಳ್ಳಿಗಾಡಿನ ಜನಜೀವನದ ನಿಜನೋಟದಿಂದ ಹಿಡಿದು ಈಶಾನ್ಯ ರಾಜ್ಯಗಳ ನೆಲಮೂಲದವರೆಗಿನ ಬದುಕನ್ನು ಕಟ್ಟಿಕೊಟ್ಟಿದೆ ಈ ಕೃತಿ. ನಾಡಿನ ಕೃಷಿ ಬದುಕಿನ ಕಾಳಜಿ, ಜನರ ಮಾತಿನ ಸೊಗಡು, ಜೀವ ವೈವಿಧ್ಯ, ನೀರುನಾಯಿ, ಕಾಡುಪಾಪಗಳ ಕಾಳಜಿ ಎಲ್ಲವನ್ನೂ ಇಲ್ಲಿನ ಬದುಕು ಒಳಗೊಂಡಿದೆ.

ಇಲ್ಲಿ ಹೆಚ್ಚು ಗಮನ ಸೆಳೆಯುವುದು ಲೇಖಕರ ಈಶಾನ್ಯ ರಾಜ್ಯಗಳ ಹಳ್ಳಿಗಾಡಿನ ಸುತ್ತಾಟದ ಕಥನಗಳು. ಸಣ್ಣ–ಪುಟ್ಟವು ಎನಿಸುವ, ಗಮನಕ್ಕೆ ಬಂದೂ ನಿರ್ಲಕ್ಷ್ಯಕ್ಕೆ ಒಳಗಾಗುವ ವಸ್ತುಗಳ ಬಗ್ಗೆ (ಪೊರಕೆ) ಕೊಟ್ಟ ಸಂಶೋಧನಾತ್ಮಕ ವಿವರಗಳು ಹೊಸ ಹೊಳಹನ್ನು ತೆರೆದಿಟ್ಟಿವೆ. ಗಂಧಸಾಲೆ ಘಮಲಿನ ಹಿಂದಿನ ಪಡಿಪಾಟಲುಗಳ ಬಗ್ಗೆ ಮಾರ್ಮಿಕವಾದ ಬರಹವಿದೆ. ಬೆಲ್ಲಂಪುಲ್ಲಕ್ಕದ ರಂಗಮ್ಮ ಪ್ರತಿ ಹಳ್ಳಿಯಲ್ಲೂ ಕಾಣುವ ಮಾತಿನ ಮಲ್ಲಿ, ಆಪ್ತ ಸಮಾಲೋಚಕಿಯಂತೆ ಕಾಣಿಸುತ್ತಾಳೆ. ದೇಶ ಸುತ್ತುವುದೆಂದರೆ ಬರಿಯ ಒಂದಿಷ್ಟು ಖ್ಯಾತನಾಮ ಸ್ಥಳಗಳನ್ನು ನೋಡುವುದಲ್ಲ. ದೇಶದ ಹಳ್ಳಿಗಳನ್ನು ಸುತ್ತಬೇಕು ಎಂದೂ ಹೇಳಿದಂತಿವೆ. ಈಶಾನ್ಯ ರಾಜ್ಯಗಳ ಮೇಲಿನ ಪೂರ್ವಗ್ರಹಗಳನ್ನು ಬದಲಾಯಿಸುವ ಪ್ರಯತ್ನ ಇಲ್ಲಿ ಆಗಿದೆ. ಉದಾಹರಣೆಗೆ ಈಶಾನ್ಯ ರಾಜ್ಯಗಳೆಂದರೆ ಬರೀ ‘ಡ್ರೈ’, ಜಿರಳೆ ತಿನ್ನುತ್ತಾರೆ, ನಾಗಾಲ್ಯಾಂಡ್‌ನಲ್ಲಿ ಮಾಂಸಾಹಾರವೇ ಪ್ರಧಾನ, ಬಡತನ, ಹಸಿವು... ಇತ್ಯಾದಿ ಕಲ್ಪನೆಗಳಿಗೆ ಸ್ವಯಂ ಅನುಭವದ ಉತ್ತರ ಕೊಟ್ಟು ಆಲೋಚನೆಯ ದಿಕ್ಕನ್ನೇ ಲೇಖಕರು ಬದಲಾಯಿಸಿದ್ದಾರೆ.

ದೇಶಸುತ್ತಿದ ಲೇಖಕರು 15 ಲೇಖನಗಳ ಗುಚ್ಛವನ್ನು ಕೋಶದಲ್ಲಿ ಕೊಟ್ಟು ಓದಿಸಿದ್ದಾರೆ.

ಬೆಲ್ಲಂಪುಲ್ಲಕ್ಕ
ಲೇ: ಮಲ್ಲಿಕಾರ್ಜುನ ಹೊಸಪಾಳ್ಯ
ಪ್ರ: ಭೂಮಿ ಬುಕ್ಸ್ ಬೆಂಗಳೂರು
ಸಂ: 9449177628
ಪು: 120 ₹120

ಪರಮೇಶ್ವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ

ದಲಿತ ಸಮುದಾಯದಿಂದ ಬಂದು ಹಂತ ಹಂತವಾಗಿ ಮೇಲೇರಿದ ವಿಶಿಷ್ಟ ರಾಜಕಾರಣಿಯಾದ ಜಿ.ಪರಮೇಶ್ವರ ಅವರ ಅಭಿನಂದನಾ ಗ್ರಂಥವಿದು. ಈ ಹೊತ್ತಗೆಯ ಬಹುತೇಕ ಲೇಖನಗಳಲ್ಲಿ ಪರಮೇಶ್ವರ ಅವರನ್ನು ಪ್ರತಿಭಾವಂತ ಹಾಗೂ ವಿನಯವಂತ ರಾಜಕಾರಣಿಯನ್ನಾಗಿ ಗುರ್ತಿಸಲಾಗಿದೆ. ಜಾತಿ ಬೆಂಬಲವಿಲ್ಲದೆ, ಮಠಗಳ ಬೆಂಬಲವಿಲ್ಲದೆ ರಾಜಕೀಯದಲ್ಲಿ ಈ ವ್ಯಕ್ತಿ ಹೇಗೆ ಎತ್ತರಕ್ಕೆ ಬೆಳೆದರು ಎಂಬ ಒಳನೋಟಗಳು ಇಲ್ಲಿನ ಬರಹಗಳಲ್ಲಿ ಸಿಕ್ಕುತ್ತವೆ. ರಾಜಕೀಯ ಮಾತ್ರವಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಅವರು ಮೂಡಿಸಿದ ಹೆಜ್ಜೆ ಗುರುತುಗಳನ್ನು ದಾಖಲಿಸುವ ಕೆಲಸವನ್ನೂ ಈ ಕೃತಿ ಮಾಡಿದೆ.

ಯು.ಆರ್.ಅನಂತಮೂರ್ತಿ, ಬರಗೂರು ರಾಮಚಂದ್ರಪ್ಪ, ಹಿ.ಶಿ. ರಾಮಚಂದ್ರೇಗೌಡ, ಅರವಿಂದ ಮಾಲಗತ್ತಿ, ಎಸ್.ಜಿ. ಸಿದ್ದರಾಮಯ್ಯ ಅವರಂತಹ ಸಾಹಿತಿಗಳಲ್ಲದೆ, ಕೆ.ಆರ್. ರಮೇಶಕುಮಾರ್, ಬಿ.ಎಲ್. ಶಂಕರ್, ಬಿ.ಕೆ. ಚಂದ್ರಶೇಖರ್ ಅವರಂತಹ ಹಿರಿಯ ರಾಜಕಾರಣಿಗಳು ಬರೆದ ಬರಹಗಳು ಇಲ್ಲಿವೆ. ಕೃತಿಯಲ್ಲಿರುವ ಹಲವು ಕೋನಗಳು, ಮನಗೆದ್ದು ಮಾರು ಗೆದ್ದವರು, ಮಾಧ್ಯಮದವರು ಕಂಡಂತೆ ಮತ್ತು ಚಿತ್ರಸಂಪುಟ ಎಂಬ ನಾಲ್ಕು ಭಾಗಗಳಲ್ಲಿ ಮರಮೇಶ್ವರರ ವ್ಯಕ್ತಿತ್ವ ಹರಡಿಕೊಂಡಿದೆ.



ಸವ್ಯಸಾಚಿ
ಡಾ.ಜಿ.ಪರಮೇಶ್ವರ ಗೌರವ ಗ್ರಂಥ
ಸಂ: ಪ್ರೊ. ಮಾದೇವ್ ಭರಣಿ
ಪ್ರ: ಬಾಳೆಎಲೆ ಪ್ರಕಾಶನ
ಪು: 476 ₹350

‘ಭೂಮ್ತಾಯಿ’ಯೊಳಗಿನ ‘ಬಂಗಾರದ ಮನುಷ್ಯ’

ಅಭಿಲಾಷ್ ಪಿ.ಎಸ್.

ಒಳನೋಟ

ವರನಟ ಡಾ.ರಾಜ್‌ಕುಮಾರ್ ನಟನೆಯ ‘ಬಂಗಾರದ ಮನುಷ್ಯ’ ಸಿನಿಮಾ ನೋಡಿದ ಬಳಿಕ ಹುಮ್ಮಸ್ಸಿನಿಂದ ಕಾಂಕ್ರಿಟ್ ಕಾಡಿನಿಂದ ಮಣ್ಣಿಗೆ ಮರಳಿ ಚಿನ್ನ ಬೆಳೆದವರೆಷ್ಟೋ! ಅದೇ ರೀತಿ ಬೇರು ತೊರೆದು ಉದ್ಯೋಗಕ್ಕಾಗಿ ನಗರಕ್ಕೆ ಹೆಜ್ಜೆ ಇಟ್ಟು ಕಳೆದ ಎರಡೂವರೆ ವರ್ಷದಲ್ಲಿ ಕೋವಿಡ್ ಸುಳಿಯೊಳಗೆ ಸಿಲುಕಿ ಉದ್ಯೋಗಕ್ಕೆ ಕುತ್ತು ಬಂದಾಗ ಅನಿವಾರ್ಯವಾಗಿ ಮತ್ತೆ ಬೇರಿಗೆ ಮರಳಿದವರೂ ಸಾವಿರಾರು ಮಂದಿ. ಇಂಥ ಎಳೆಯ ಕಥೆಯೊಂದನ್ನು ಹೊತ್ತು ಬಂದಿದೆ ‘ಭೂಮ್ತಾಯಿ’.

‘ಭೂಮ್ತಾಯಿ’ ಜಾಣಗೆರೆ ವೆಂಕಟರಾಮಯ್ಯ ಅವರ ಹತ್ತನೇ ಕಾದಂಬರಿ. ಕಾದಂಬರಿ ಬರವಣಿಗೆ ತಮಗಿಷ್ಟವಾದ ಪ್ರಕಾರವೆಂದು ಹೇಳುವ ವೆಂಕಟರಾಮಯ್ಯನವರು, ‘ಜಗದೀಶ’ ಎಂಬ ಮುಖ್ಯಪಾತ್ರ ಹಾಗೂ ಆ ಪಾತ್ರವನ್ನಾಧರಿಸಿ ಬೆಳೆದ ಬಳ್ಳಿಗಳ ಬದುಕನ್ನು ಎಳೆಎಳೆಯಾಗಿ ಹಿಡಿದಿಟ್ಟಿದ್ದಾರೆ. ಕೋವಿಡ್ ಆವರಿಸಿದ ಬಳಿಕ ಮೊದಲು ಕತ್ತರಿ ಬಿದ್ದಿದ್ದು ‘ದೊಡ್ಡ ಸಂಬಳ’ದವರಿಗೆ. ಜಗದೀಶನೂ ಇದೇ ಶ್ರೇಣಿಯ ವೇತನದವನು. ಸ್ವಂತ ಕಾರನ್ನೇ ಟ್ಯಾಕ್ಸಿಯನ್ನಾಗಿ ಓಡಿಸಿ ಜೀವನ ಸಾಗಿಸಲು ಪ್ರಯತ್ನಿಸಿದ್ದ ಜಗದೀಶ ಆರು ತಿಂಗಳ ಬಳಿಕ ಯಾವುದೂ ಕೈಹಿಡಿಯದೇ ಇದ್ದಾಗ ಕುಗ್ಗಿ ಹೋಗಿ ಬೇರಿನ ದಾರಿ ಹಿಡಿದಿದ್ದ. ಆತನ ದುಃಖ, ಅಳು ಗುಪ್ತಗಾಮಿನಿ. ಇದು ಜಗದೀಶನ ತಂದೆ ರಾಮಪ್ಪನಿಗೆ ತಿಳಿಯುವ ವೇಳೆ ಕೃತಿಯಲ್ಲಿ ಮೂರನೇ ಅಧ್ಯಾಯ ದಾಟಿರುತ್ತದೆ.



ಭೂಮ್ತಾಯಿ
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಶಶಿ ಪಬ್ಲಿಕೇಷನ್ಸ್
ಸಂ: 9448747281
ಪು: 376 ₹300

ಹೀಗಾಗಿಯೇ ಇಲ್ಲಿ ಪಾತ್ರಗಳ ಜೀವನ, ಅವುಗಳ ಸಂಭಾಷಣೆಯು ಎಷ್ಟು ಆಳವಾಗಿದೆಯೋ ಕೃತಿಯ ಗಾತ್ರವೂ ಅಷ್ಟೇ ಹಿರಿದಾಗಿದೆ. ನಗರಕ್ಕೆ ಒಗ್ಗಿದ ಬಳಿಕ ಜನರ ಬದಲಾದ ಜೀವನ ಶೈಲಿಗೆ ಅನಿವಾರ್ಯವಾಗಿ ಹೊಂದಿಕೊಳ್ಳಬೇಕಾದ ಪರಿಸ್ಥಿತಿಯನ್ನು ಜಗದೀಶನ ಪಾತ್ರ ಪ್ರತಿಬಿಂಬಿಸಿದೆ.

ಜಗದೀಶನ ಪಾತ್ರವನ್ನು ‘ಬಂಗಾರದ ಮನುಷ್ಯ’ನಿಗೂ ಹೋಲಿಕೆ ಮಾಡಬಹುದು. ತಾಳ್ಮೆ, ಶ್ರಮ, ನಂಬಿಕೆ ಇವನ ಆಸ್ತಿ. ಆತನ ಅಣ್ಣ ‘ಚೆಲುವರಾಜ’ನ ನಡೆ ತದ್ವಿರುದ್ಧ. ಶ್ರಮದಿಂದ ದುಡಿದು ಚಿನ್ನವನ್ನೂ ಬೆಳೆಯುವ ಸಾಮರ್ಥ್ಯವಿರುವ ರಾಮಪ್ಪ ದಂಪತಿಗೆ ಅಲ್ಲಾಭಕ್ಷ ಬೆನ್ನೆಲುಬು. ತನ್ನ ಪತ್ನಿಯ ಒಡವೆಯನ್ನು ಗಿರವಿ ಇಟ್ಟು ರಾಮಪ್ಪನಿಗೆ ಭೂಮಿ ಒದಗಿಸಿಕೊಡುವಂಥ ಕಲ್ಲುಸಕ್ಕರೆ ಹೃದಯದವನು. ರಾಮಪ್ಪ–ಅಲ್ಲಾಭಕ್ಷರೆಂಬ ಪಾತ್ರಗಳೆರಡನ್ನು ಅರ್ಥೈಸಿಕೊಂಡರೆ ಅಥವಾ ಕೇವಲ ಓದಿದರೂ ಪ್ರಸ್ತುತ ಎದುರಾಗಿರುವ ಧರ್ಮದ್ವೇಷ ಮಂಜಿನಂತೆ ಕರಗುತ್ತದೆ. ಗ್ರಾಮೀಣ ಭಾಗಕ್ಕೂ ಕಾಲಿಟ್ಟಿರುವ ದ್ವೇಷ ಭಾವನೆಗೆ ಈ ಕೃತಿ ಮದ್ದು. ಇದನ್ನು ಮೀರಿ ಜಗದೀಶನ ಮಗನಿಗೂ ಅಲ್ಲಾಭಕ್ಷನ ಪುತ್ರಿಗೂ ಆಗುವ ಮದುವೆ ಸಾಮಾಜಿಕ ಸಾಮರಸ್ಯದ ಮಹತ್ವವನ್ನು ಬಿಂಬಿಸುತ್ತದೆ.

ಕಾದಂಬರಿಯಲ್ಲಿ ಇರುವ ವಿಷಯಗಳೆಲ್ಲವೂ ವಾಸ್ತವಕ್ಕೆ ಬಲು ಹತ್ತಿರ. ಹಳ್ಳಿಗಳಲ್ಲಿ ಏರಿಕೆಯಾಗುತ್ತಿರುವ ಭೂಮಿಯ ಬೆಲೆ, ಸ್ನೇಹದ ನಡುವೆಯೂ ‘ಬಷೀರ ಅಹ್ಮದ್’ ಮನಸ್ಸಿನಲ್ಲಿ ಹುಟ್ಟಿಕೊಂಡ ಜಾತಿ–ಮತದ ಪ್ರಶ್ನೆ, ಶಿವಪ್ಪ ದಂಪತಿಯ ವ್ಯಥೆ ಹೀಗೆ ಪುಟ ಸಂಖ್ಯೆಗಳುರುಳಿದಂತೆ ಅಕ್ಕಪಕ್ಕದಲ್ಲೇ ನಡೆಯುವ ಘಟನೆಗಳಂತೆ ಹಾದುಹೋಗುತ್ತವೆ. ರಾಜಕಾರಣ, ಭೂಮಿಗೇ ವಿಷ ಉಣಿಸುವ ಆಸೆ, ಪೋಷಕರ ಅನಾಥಪ್ರಜ್ಞೆ ಮುಂತಾದ ವಿಷಯಗಳು ಇಲ್ಲಿ ಸೂಚ್ಯವಾಗಿವೆ. ಸಾಲುಸಾಲು ಪಾತ್ರಗಳ ಮುಖಾಂತರ ಬದುಕಿನ ವಿವಿಧ ಆಯಾಮಗಳನ್ನು ‘ಭೂಮ್ತಾಯಿ’ ತೆರೆದಿಡುತ್ತದೆ. ಆರಂಭದಲ್ಲೇ ಬರುವ ‘ಹೃದಯದಲ್ಲಿ ಪ್ರಾಮಾಣಿಕತೆಯಿದ್ದಾಗ, ಇಡೀ ಪ್ರಪಂಚ ಆಯುಧ ಕೆಳಗಿಡುತ್ತದೆ’ ಎನ್ನುವ ವಿವೇಕಾನಂದರ ಮಾತು ಇಡೀ ಕೃತಿಗೆ ಅಡಿಪಾಯವಾಗಿದೆ.

ಕಥೆ
ರಾಜಶ್ರೀ ಟಿ. ರೈ ಪೆರ್ಲ
ಅವರ ಕಾಡಮನೆ

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಪ್ರತಿಭಾ ನಂದಕುಮಾರ್ ಅವರ
ಬೆಕ್ಕಿಗೆ ಗಂಟೆ ಕಟ್ಟಲಾಗದವರಿಗೇಕೆ ಹುಲಿಯ ಗೊಡವೆ?
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry



ಎಲೆಲೆ ಕೊಂಬು ಕೊಕ್ಕಿನ ಹಕ್ಕಿ!

ದಾಸ ಮಂಗಟ್ಟೆ ಹಾರಾಡುವುದನ್ನು ನೋಡುವುದೇ ಚೆಂದ. ಈ ತೇಲುವ ರಾಜ –ರಾಣಿಯರ ಜೀವನ, ಸಾಂಸಾರಿಕ ಸಲ್ಲಾಪಗಳನ್ನೂ ಸೆರೆಹಿಡಿಯುವ ಪ್ರಯತ್ನವೊಂದು ಇಲ್ಲಿದೆ



ಗೋಪಾಲಕೃಷ್ಣ ಹೆಗಡೆ ಬಾರೆ

ಕಾಡಿನಲ್ಲಿ ಕ್ಯಾಮೆರಾ ಹೊತ್ತು ತಿರುಗುವಾಗ ದೊಡ್ಡ ಮರಗಳಲ್ಲಿ ಪೊಟರೆ ಹುಡುಕುವುದು ನನ್ನ ಪಾಲಿಗೆ ತಪ್ಪದ ಕೆಲಸವಾಗಿತ್ತು. ಏಕೆಂದರೆ, ಗಾಳಿಯಲ್ಲಿ ತೇಲುವ 'ರಾಜ-ರಾಣಿ'ಯರು 'ಲ್ಯಾಂಡ್' ಆಗುತ್ತಿದ್ದ ಜಾಗವೇ ಅದಾಗಿತ್ತು. ಆ ತೇಲುವ 'ರಾಜ-ರಾಣಿ'ಯರೇ ಈ ದಾಸ ಮಂಗಟ್ಟೆಗಳು (ಗ್ರೇಟ್ ಹಾರ್ನ್‌ಬಿಲ್ಸ್). ಅವುಗಳು ನನ್ನನ್ನು ಎಷ್ಟೊಂದು ಕಾಡಿದ್ದವೆಂದರೆ ನಾನು ಅವುಗಳ ದಾಸನಾಗಿಬಿಟ್ಟಿದ್ದೆ.

ನಮ್ಮ ಕಾಡಿನಲ್ಲಿ ಲೆಕ್ಕವಿಲ್ಲದಷ್ಟು ಬಗೆಯ ಪಕ್ಷಿಗಳು ಇವೆ. ಅವುಗಳಲ್ಲಿ ವಿಶೇಷ ಪಂಗಡಕ್ಕೆ ಸೇರಿದ ಬಾನಾಡಿಗಳು ಇವು. ಇವುಗಳನ್ನು ಕಾಡಿನ ರೈತರು ಎಂದೂ ಕರೆಯುವುದುಂಟು. ಭಾರತದಲ್ಲಿ ಒಟ್ಟು ಒಂಬತ್ತು ಬಗೆಯ ಮಂಗಟ್ಟೆಗಳು ಕಂಡು ಬರುತ್ತವೆ. ಇವುಗಳಲ್ಲಿ ನಾಲ್ಕು ಪ್ರಭೇದಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲೂ ಅವುಗಳು ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತವೆ. ಹಾರ್ನ್‌ಬಿಲ್ ಎಂಬುದು ಲ್ಯಾಟಿನ್ ಭಾಷೆಯ ಪದ. ಹಾರ್ನ್ ಎಂದರೆ ಕೊಂಬು. ಬಿಲ್ ಎಂದರೆ ಕೊಕ್ಕು. ಇವೆರಡೂ ಪದಗಳು ಸೇರಿ ಹಾರ್ನ್‌ಬಿಲ್ ಎಂದಾಗಿದೆ. ಅಂದರೆ ಕೊಂಬು ಕೊಕ್ಕಿನ ಪಕ್ಷಿ ಎಂದರ್ಥ. ದಾಸ ಮಂಗಟ್ಟೆ ಒಂಬತ್ತು ಬಗೆಯ ಮಂಗಟ್ಟೆಗಳಲ್ಲೇ ಅತಿ ಸುಂದರ ಪಕ್ಷಿ. ಇದರ ಉದ್ದ ಸುಮಾರು ನಾಲ್ಕು ಅಡಿ ಹಾಗೂ ಅಗಲ ಸುಮಾರು ಒಂದೂವರೆ ಅಡಿ.

ಈ ಹಕ್ಕಿಗಳ ಪುಕ್ಕಗಳಲ್ಲಿ ಕಪ್ಪು ಮತ್ತು ಬಿಳಿ ಬಣ್ಣವೇ ಅಧಿಕ. ಇವುಗಳ ಕೊಕ್ಕುಗಳು ತಲೆಗಿಂತ ದೊಡ್ಡ ಗಾತ್ರ ಹೊಂದಿರುತ್ತವೆ. ಇದರ ಕೊಕ್ಕಿನದು ಹಳದಿ ಮತ್ತು ಕೆಂಪುಮಿಶ್ರಿತ ಬಣ್ಣ.

ಕಾಡಿನ ಮೇಲ್ಚಾವಣಿಯಲ್ಲಷ್ಟೇ ಅಲ್ಲದೆ, ದೊಡ್ಡದಾದ ಕಣಿವೆಗಳಲ್ಲೂ ಕಂಡುಬರುತ್ತದೆ ಈ ಪಕ್ಷಿ. ಇದು ಹಾರಾಡುವಾಗ ರೆಕ್ಕೆ ಬಡಿತದ ಶಬ್ದವು ಬಹಳ ದೂರದವರೆಗೂ ಕೇಳಿಬರುತ್ತದೆ. ಈ ಹಕ್ಕಿ ಹಾರಾಡುವುದನ್ನು ನೋಡುವುದೇ ಒಂದು ಸಂತೋಷದ ಕ್ಷಣ. ಗಂಡುಹಕ್ಕಿ ಗಾತ್ರದಲ್ಲಿ ಹೆಣ್ಣಿಗಿಂತ ಸ್ವಲ್ಪ ದೊಡ್ಡದಾಗಿರುತ್ತದೆ. ಗಂಡುಹಕ್ಕಿಯ ಕಣ್ಣಿನ ಬಣ್ಣ ಕೆಂಪು. ಕೆಂಪು ಕಣ್ಣಿನ ಸುತ್ತಲೂ ಕಪ್ಪು ಉಂಗುರ ಇರುತ್ತದೆ. ಆದರೆ, ಹೆಣ್ಣುಹಕ್ಕಿಯ ಕಣ್ಣಿನ ಬಣ್ಣ ಬಿಳಿ ಮತ್ತು ಕಣ್ಣಿನ ಸುತ್ತ ಕೆಂಪು ಉಂಗುರ ಇರುತ್ತದೆ.

ದಾಸ ಮಂಗಟ್ಟೆಗಳು ಆಲ, ಗೋಣಿ, ಅತ್ತಿ, ಬಸರಿ, ರಾಮಪತ್ರೆ, ನೇರಳೆ ಹಣ್ಣುಗಳನ್ನು ತಿನ್ನುತ್ತವೆ. ಇವುಗಳಿಗೆ ಹಣ್ಣುಗಳು ಮಾತ್ರ ಆಹಾರವಲ್ಲ. ಹಾವು, ಇಲಿ, ಬಾವಲಿ, ಅಳಿಲು ಹಾಗೂ ಸಣ್ಣ ಹಕ್ಕಿಗಳ ಮೊಟ್ಟೆಗಳನ್ನೂ ಭಕ್ಷಿಸುತ್ತವೆ.

ಚಿತ್ರಗಳು: ಗೋಪಾಲಕೃಷ್ಣ ಹೆಗಡೆ ಬಾರೆ

ಮಂಗಟ್ಟೆಗಳು ಮೊಟ್ಟೆ ಇಟ್ಟು ಮರಿಮಾಡಲು ಗೂಡು ಕಟ್ಟುವುದಿಲ್ಲ. ಇವು ಎತ್ತರದ ಮರಗಳಲ್ಲಿ ಸ್ವಾಭಾವಿಕವಾಗಿ ಇರುವ ದೊಡ್ಡ ಪೊಟರೆಗಳನ್ನು ಗೂಡಾಗಿ ಬಳಸಿಕೊಳ್ಳುತ್ತವೆ. ಡಿಸೆಂಬರ್‌ನಿಂದ ಜೂನ್ ತಿಂಗಳ ಅವಧಿಯಲ್ಲಿ ಅವುಗಳು ವಂಶಾಭಿವೃದ್ಧಿಯನ್ನು ಮಾಡುತ್ತವೆ. ಇವು ಸುಮಾರು 6–7 ವರ್ಷಗಳವರೆಗೆ ಮೊಟ್ಟೆ ಇಟ್ಟು ಮರಿಗಳನ್ನು ಮಾಡಲು ಒಂದೇ ಗೂಡನ್ನು ಬಳಸುತ್ತವೆ. ಸಂತಾನ ಅಭಿವೃದ್ಧಿ ಮಾಡುವ ಸುಮಾರು ಒಂದು ತಿಂಗಳ ಮುಂಚಿತವಾಗಿ ಗಂಡು ಮತ್ತು ಹೆಣ್ಣು ಜೊತೆಗೂಡಿ ಪೊಟರೆಯನ್ನು ಸ್ವಚ್ಛ ಮಾಡಿಕೊಳ್ಳುತ್ತವೆ. ಹೆಣ್ಣುಹಕ್ಕಿ ಮೊಟ್ಟೆ ಇಡಲು ಪೊಟರೆಯೊಳಗೆ ಹೋಗಿ ತನ್ನ ಸುಮಾರು 18ರಿಂದ 20 ಪುಕ್ಕಗಳನ್ನು ಬೀಳಿಸುತ್ತದೆ. ಅದರ ಮೇಲೆ ಒಂದು ಅಥವಾ ಎರಡು ಮೊಟ್ಟೆಗಳನ್ನು ಇಡುತ್ತದೆ. ಹೆಣ್ಣುಹಕ್ಕಿ ಪೊಟರೆಯೊಳಗೆ ಇರುವಾಗ ಗಂಡು ಹಕ್ಕಿಯು ಅದಕ್ಕೆ ಬೇಕಾದ ಆಹಾರವನ್ನು ದಿನಕ್ಕೆ ಮೂರರಿಂದ ನಾಲ್ಕು ಬಾರಿ ತಂದುಕೊಡುತ್ತದೆ.

ಇವುಗಳ ಕೊರಳಿನ ಭಾಗದಲ್ಲಿ ಚೀಲದಂತಹ ರಚನೆಯಿರುತ್ತದೆ. ಸುಮಾರು 140 ಆಲದ ಹಣ್ಣುಗಳನ್ನು ಸಂಗ್ರಹಿಸುವ ಸಾಮರ್ಥ್ಯವುಳ್ಳ ದೊಡ್ಡದಾದ ಚೀಲ ಅದು. ಹಣ್ಣು ಬಿಟ್ಟಿರುವ ಮರಗಳಲ್ಲಿ ಕುಳಿತು ಬೇಕಾದಷ್ಟು ಹಣ್ಣು ತಿಂದು ಬಳಿಕ ಇನ್ನಷ್ಟು ಹಣ್ಣುಗಳನ್ನು ಕಿತ್ತು ಗಂಟಲು ಚೀಲದೊಳಗೆ ತುಂಬಿಕೊಂಡು ಗೂಡಿನಲ್ಲಿರುವ ತಾಯಿ ಮತ್ತು ಮರಿಗೆ ನೀಡುತ್ತದೆ. ಹೆಣ್ಣು ಹಕ್ಕಿಯು ಸುಮಾರು ಒಂದೂವರೆಯಿಂದ ಎರಡು ತಿಂಗಳು ಪೊಟರೆಯ ಒಳಗಡೆ ಇರುತ್ತದೆ. ಮರಿ ಆಹಾರ ತಿನ್ನುವಷ್ಟು ದೊಡ್ಡದಾದ ಮೇಲೆ ಪೊಟರೆಯಿಂದ ಹೆಣ್ಣುಹಕ್ಕಿ ಹೊರಗಡೆ ಬರುತ್ತದೆ. ತಾಯಿ ಹಕ್ಕಿ ಹೊರಗಡೆ ಬಂದ ನಂತರ ಸುಮಾರು ಒಂದು ತಿಂಗಳು ಮರಿ ಪೊಟರೆಯೊಳಗೆ ಬೆಳವಣಿಗೆ ಹೊಂದುತ್ತದೆ. ಆ ಸಮಯದಲ್ಲಿ ಗಂಡುಹಕ್ಕಿ ಮತ್ತು ಹೆಣ್ಣುಹಕ್ಕಿ ಸೇರಿ ತಮ್ಮ ಮರಿಗೆ ಆಹಾರವನ್ನು ನೀಡುತ್ತವೆ.

ದಾಸ ಮಂಗಟ್ಟೆ ವರ್ಷದಲ್ಲಿ ಒಂದು ಸಾರಿ ಮಾತ್ರ ಮರಿ ಮಾಡುತ್ತದೆ. ಮರಿ ಗೂಡಿನಿಂದ ಹೊರಗಡೆ ಬರುವ ದಿನ ನೋಡುಗರಿಗೆ ಹಬ್ಬದ ವಾತಾವರಣ. ಆಗ ಅದು ತನಗೆ ತಂದುಕೊಟ್ಟ ಆಹಾರವನ್ನು ತಿನ್ನದೆ ಹೊರಗೆ ಬಿಸಾಡುತ್ತದೆ. ಬಿಸಾಡಿದ ಆಹಾರವನ್ನು ಮತ್ತೆ ಅಪ್ಪ–ಅಮ್ಮ ತಂದು ಕೊಡುತ್ತವೆ. ಮರಿಗಳು ಹೀಗೆ ಮಾಡಲು ಕಾರಣ 'ನಾನು ದೊಡ್ಡವನಾಗಿದ್ದೇನೆ. ನೀವು ಆಹಾರ ಕೊಡುವುದು ಬೇಡ. ನಾನು ಗೂಡಿನಿಂದ ಹೊರಗಡೆ ಬಂದು ಆಹಾರ ತಿನ್ನುತ್ತೇನೆ' ಎಂಬುದಾಗಿ ಇರಬಹುದು. ಇದಾದ ನಂತರ ಸುಮಾರು ಒಂದು ಗಂಟೆಯಲ್ಲಿ ಮರಿ ಗೂಡಿನಿಂದ ಹೊರಕ್ಕೆ ಬರುತ್ತದೆ. ಮರಿ ಗೂಡಿನಿಂದ ಹೊರಗೆ ಬರುವಾಗ ಅದಕ್ಕೆ ಕೊಂಬು ಇರುವುದಿಲ್ಲ. ಗೂಡಿನಿಂದ ಹೊರಗೆ ಬಂದ ಎರಡು ತಿಂಗಳಿಗೆ ಕೊಂಬು ಬರುತ್ತದೆ. ಮರಿ ಗೂಡಿನಿಂದ ಹೊರಗಡೆ ಬಂದಮೇಲೆ ಅಪ್ಪ–ಅಮ್ಮ ಒಟ್ಟಾಗಿ ಸುಮಾರು ಹದಿನೈದು ದಿನ ಹಾರಾಟವನ್ನು, ಆಹಾರ ಹುಡುಕಿ ತಿನ್ನುವುದನ್ನು ಕಲಿಸುತ್ತವೆ.

ಮಂಗಟ್ಟೆ ರಕ್ಷಣೆ ಬೇಡುವ ಪಕ್ಷಿಗಳು. ಆವಾಸ ಸ್ಥಾನಗಳ ಕೊರತೆ, ಆಹಾರಗಳ ಸಮಸ್ಯೆ, ಬೇಟೆಗಾರರ ಭಯ ಹಾಗೂ ವಾತಾವರಣದ ಅಸ್ಥಿರತೆ ಅವುಗಳಿಗೆ ಸವಾಲಾಗಿದೆ.

ರಜಾ ಮಜಾ ಮಜಕೂರ

• ಎಂ.ಎಸ್.ಪೂಜಾರ

ಆಡೂ ಆಟ ಆಡು

1 Alphabet game

ಬೇಕಾಗುವ ಸಾಮಾನುಗಳು: ಆಟದ ಚಾರ್ಟ್. ಬಣ್ಣದ ಗುಂಡಿಗಳು, ಒಂದು ಡೈಸ್.

ಈ ಆಟಕ್ಕೆ ಇಬ್ಬರು ಸಾಕು. ಇಬ್ಬರು ಒಂದೊಂದು ಬಣ್ಣದ ಗುಂಡಿಯನ್ನು ಆರಿಸಿಕೊಳ್ಳಿ. ಒಬ್ಬನು ಡೈಸನ್ನು ಮೇಲಕ್ಕೆ ತೂರಿ ಕೆಳಕ್ಕೆ ಬಿಡಬೇಕು. ಡೈಸಿನ ಮೇಲ್ಮುಖದಲ್ಲಿ ಎಷ್ಟು ಅಂಕಿಗಳಿವೆಯೋ (ಚುಕ್ಕಿಗಳು) ಅಷ್ಟು ಹೆಜ್ಜೆ. ಆರಂಭದ A Oದಿಂದ ಮುಂದಕ್ಕೆ ಸಾಗಿ. ಆ ಮನೆಯಲ್ಲಿ ನಿಮ್ಮ ಗುಂಡಿ ಇಡಬೇಕು. ಹಾಗೂ ಅಲ್ಲಿ ಯಾವ ಅಕ್ಷರವಿದೆಯೋ ಆ ಅಕ್ಷರವನ್ನು ನಿಮ್ಮ ಪುಸ್ತಕದಲ್ಲಿ ಬರೆದುಕೊಳ್ಳಬೇಕು. ಇದೇ ರೀತಿ ನಿಮ್ಮ ಗೆಳೆಯನೂ ಮಾಡುತ್ತಾನೆ. ಕೊನೆಗೆ Z ಅಕ್ಷರ ಯಾರಿಗೆ ಬರುವುದೋ ಅವರಿಗೆ 1 ಬೋನಸ್ ಅಂಕ. ಈ ಇಬ್ಬರಿಗೂ ಹೀಗೆ ಸಿಕ್ಕ ಎಲ್ಲ ಅಕ್ಷರಗಳನ್ನು ಬಳಸಿಕೊಂಡು (ಒಂದೇ ಅಕ್ಷರವನ್ನು ಎಷ್ಟು ಬಾರಿಯಾದರೂ ಬಳಸಿಕೊಳ್ಳಬಹುದು) ಪದಗಳನ್ನು ರಚಿಸಬೇಕು. ನಂತರ ಆಯಾ ಅಕ್ಷರಗಳಿಗೆ ಪಟ್ಟಿಯಲ್ಲಿ ಕೊಟ್ಟ ಮೌಲ್ಯವನ್ನು ಆಧರಿಸಿ ಪ್ರತೀ ಪದದ ಒಟ್ಟು ಮೊತ್ತವನ್ನು ಕಂಡುಹಿಡಿದು ನಂತರ ಎಲ್ಲಾ ಪದಗಳ ಒಟ್ಟು ಮೊತ್ತ ಕಂಡು ಹಿಡಿದಾಗ ಹೆಚ್ಚಿಗೆ ಮೊತ್ತ ಪಡೆದ ಆಟಗಾರ ಗೆದ್ದಂತೆ. ಈ ಆಟದಿಂದ ಪದಸಂಪತ್ತು ಹೆಚ್ಚುವುದಲ್ಲದೇ ಆ ಕ್ಷಣದಲ್ಲಿ ಸಂಕಲನ ಕ್ರಿಯೆಯೂ ನಡೆಯುವುದು. ಆಡಿ ನೋಡಿ.

ಬೇಂದ್ರೆ ಹೃದಯವಂತಿಕೆ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡದ ಪ್ರಸಿದ್ಧ ಕವಿ ಹಾಗೂ ಕಾದಂಬರಿಕಾರರು. ನಾಡಿನ ವರಕವಿ. ಅವರ ಕವನ ಸಂಕಲನ 'ನಾಕುತಂತಿ'ಗೆ ಜ್ಞಾನಪೀಠ ಪ್ರಶಸ್ತಿ ಸಂದಿದೆ

ಒಮ್ಮೆ ಬೇಂದ್ರೆಯವರು ನಡೆಯುತ್ತಿದ್ದಾಗ ಅವರ ಚಪ್ಪಲಿಯ ಉಂಗುಷ್ಟ ಹರಿದಿತ್ತು. ಅಲ್ಲೊಬ್ಬ ಚಪ್ಪಲಿ ಹೊಲಿಯುವವನಿಗೆ ಅದನ್ನು ಹೊಲಿಯಲು ಕೊಟ್ಟರು. ಹಾಗೇ ಅವನ ಜೊತೆ ಮಾತಿಗಿಳಿದರು



ಚಪ್ಪಲಿ ಹೊಲಿಯುವವನು, ಬಿಸಿಲಿನಲ್ಲಿ ಕಾಲು ಸುಡದಂತೆ ಮತ್ತೊಂದು ಚಪ್ಪಲಿಯನ್ನು ಬೇಂದ್ರೆ ಅವರ ಮುಂದಿಟ್ಟ. ಅವನ ಪ್ರೀತಿ ಕಂಡು ಬೇಂದ್ರೆಯವರಿಗೆ ಅಂತಃಕರಣ ತುಂಬಿ ಬಂತು



ಬೇಂದ್ರೆಯವರು 'ನನ್ನ ಕಾಲು ಸುಡೋದರ ಬಗ್ಗೆ ನಿನಗೆ ಕಾಳಜಿ ಅದ. ಆದರೆ ಸುಡೋ ಬಿಸಿಲೊಳಗ ನೀನು ಕೂತಿ. ನಿನ್ನ ಮೈ ಸುಡೋದರ ಬಗ್ಗೆ ಎಚ್ಚರ ಇಲ್ಲವೇ' ಎಂದು ತಮ್ಮ ಕೊಡೆ ಬಿಚ್ಚಿ ಚಪ್ಪಲಿ ಹೊಲಿಯುವವನ ತಲೆಯ ಮೇಲೆ ಹಿಡಿದು ನಿಂತರು. ಹಾಗೆಯೇ ಅವನ ಕುಟುಂಬದ ಬಗ್ಗೆ ವಿಚಾರಿಸಿದರು

ಚಪ್ಪಲಿ ದುರಸ್ತಿಯಾಯಿತು. 'ಒಂದೂವರೆ ರೂಪಾಯಿ ಆತ್ರಿ' ಎಂದ ಚಪ್ಪಲಿ ಹೊಲಿಯುವವ. ಬೇಂದ್ರೆ ಹತ್ತು ರೂಪಾಯಿ ಕೊಟ್ಟರು. ಆತ 'ಚಿಲ್ಲರೆಯಿಲ್ಲ' ಎಂದಾಗ ಬೇಂದ್ರೆ,'ಇದು ನಿನ್ನ ಇಂದಿನ ಗಳಿಕೆ. ಕೊಡೆ ತೆಗೆದುಕೋ. ಹಣ್ಣು ಹಂಪಲು ಒಯ್ಯಿ' ಎಂದರು

ಬೇಂದ್ರೆಯವರ ಮಾತಿಗೆ ಚಪ್ಪಲಿ ಹೊಲಿಯುವವ ಕರಗಿದ. ಅನಂತರ ಅವನು, ಬೇಂದ್ರೆಯವರ ಮನೆಗೆ ಆಗಾಗ ಬಂದು ಹೋಗುತ್ತಿದ್ದನಂತೆ. ನಿಜವಾಗಿಯೂ ಎತ್ತರಕ್ಕೇರಿದವರು ಯಾವ ಹಂತಕ್ಕಾದರೂ ಇಳಿದು ಹೃದಯವಂತಿಕೆ ತೋರಬಲ್ಲರು

ಒಳಾಂಗಣ ಕ್ರಿಕೆಟ್ 2

ಈ ಆಟವನ್ನು ಇಬ್ಬರು ಆಡಬಹುದು. ಮೊದಲು ಒಬ್ಬನು ಡೈಸ್ ತೂರಿ ಮೇಲ್ಮುಖದಲ್ಲಿರುವ ಸಂಖ್ಯೆಯಷ್ಟು ಚಲನೆಯನ್ನು ಚಾರ್ಟ್‌ನಲ್ಲಿ ನಡೆಯುತ್ತಾನೆ. ಅಲ್ಲಿರುವ ಅಂಶವನ್ನು ಗಮನಿಸಿ. ಕ್ರಿಕೆಟ್‌ನ ನಿಯಮದಂತೆ ಪಾಲಿಸುವುದು. ನಿಮ್ಮ ಗುಂಡಿ ಚಲಿಸುತ್ತಾ ನಾಲ್ಕನೇ ಮನೆಗೆ ಹೋಗಿದ್ದರೆ 4 (FOUR) ಹೊಡೆದ ಹಾಗೆ. ಅಂದರೆ ಮತ್ತೆ ನಾಲ್ಕು ಮನೆ ಮುಂದಕ್ಕೆ ಚಲಿಸಿ ಅಲ್ಲಿ ನಿಮ್ಮ ಗುಂಡಿ ಇಡುವುದು. ನಿಮ್ಮ ಮಿತ್ರನ ನಡೆಯೂ ಹೀಗೇ ಸಾಗಲಿ. ಕೆಲವೊಮ್ಮೆ 'ಔಟ್' ಆಗುವ ಸ್ಥಿತಿ ಬಂದರೆ ಪುನಃ ಆತ ಮೊದಲಿನಿಂದ ಪ್ರಾರಂಭಿಸಬೇಕು. ಹೀಗೆ ಕೊನೆಯ 100ನ್ನು ತಲುಪಿದವ ಗೆದ್ದ ಹಾಗೆ. ಮನೆಯಲ್ಲೇ ಕುಳಿತು ನೆರಳಿನಲ್ಲಿ ಆಡುವ ಕ್ರಿಕೆಟ್ ಇದು. ಆಡಿ ನೋಡಿ.

WIN 100	99	RUN OUT 98	97	FOUR 96	95	SIX 94	CATCH OUT 93	92	ONE RUN 91
WIDE BALL 81	ONE RUN 82	83	SIX 84	85	FREE HIT 86	87	88	89	90
80	79	FOUR 78	77	ONE RUN 76	75	L.B.W OUT 74	73	72	STUMP OUT 71
61	62	63	CATCH OUT 64	65	SIX 66	67	68	SIX 69	70
NO BALL 60	FOUR 59	58	57	FOUR 56	55	54	EXTRA RUN 53	52	TREE RUN 51
41	42	43	SIX 44	45	46	ONE RUN 47	48	FOUR 49	50
40	39	BOLD OUT 38	37	36	FOUR 35	34	33	32	WIDE BALL 31
FOUR 21	22	23	EXTRA RUN 24	25	TWO RUN 26	27	SIX 28	29	30
20	SIX 19	18	17	L.B.W OUT 16	15	14	13	12	FOUR 11
START 1	2	3	FOUR 4	5	6	FOUR 7	8	9	10

ದೃಷ್ಟಿ ಭ್ರಮೆ

ಇಲ್ಲಿರುವ ಗೆರೆಗಳನ್ನು ಗಮನಿಸಿ ನೋಡುತ್ತಿದ್ದಂತೆಯೇ ದೊಡ್ಡ ಗೆರೆಗಳ ಮಧ್ಯದಲ್ಲಿ ಸಣ್ಣ ಗೆರೆ ಎಳೆದಂತೆ ಭಾಸವಾಗುವುದು. ಸೋಜಿಗವೆಂದರೆ ನಿಜಕ್ಕೂ ಇಲ್ಲಿ ಸಣ್ಣ ಗೆರೆಗಳನ್ನು ಎಳೆದಿರುವುದಿಲ್ಲ. ಇದು ನಮ್ಮ ಕಣ್ಣಿಗೆ ಕಾಣುವ ದೃಷ್ಟಿ ಭ್ರಮೆ ಅಷ್ಟೇ.

ಕಳೆದ ಸಂಚಿಕೆಯ ಪದ –ಪರಿಚಯ– ಪರೀಕ್ಷೆ ಉತ್ತರಗಳು

1. ವರಮಾನ, 2. ವಿನಾಯಿತಿ, 3. ಅಲಂಕಾರ, 4. ಜನವರಿ, 5. ಕಸಿವಿಸಿ
6. ಅಮೇರಿಕೆ, 7. ಕರಾಮತ್ತು, 8. ಯಜಮಾನ, 9. ಪರಂಪರೆ, 10. ಅನಾದರ
11. ಹಗರಣ, 12. ಬಾಲವನ, 13. ಅವನತಿ, 14. ಅಗಣಿತ, 15. ಹಿಮಗಿರಿ
16. ನಾಗರಿಕ, 17. ಜಾಗರಣೆ, 18. ಸಂಭಾವಿತ, 19 ರಾಜಗಿರಿ, 20. ರಾರಾಜಿಸು
21. ತಾರಾಗಣ, 22. ವಿಹರಿಸು, 23. ಅಜಗರ, 24. ಕಸರತ್ತು, 25. ಆಪಾದನೆ
26. ನಲವತ್ತು, 27. ಮಸಲತ್ತು, 28. ಅನುಮತಿ, 29. ದಸಕತ್ತು, 30. ಹರಕತ್ತು
31. ಮಾದಕತೆ, 32. ಜಾಡಮಾಲಿ, 33. ಹರಿವಾಣ, 34. ಆಡಳಿತ, 35. ಬಡಕಲು
36. ಸೋಗಲಾಡಿ, 37. ಸವಲತ್ತು, 38. ಹರದಾರಿ, 39. ಆಪಾದಿತ
40. ಅಮಾನತು, 41. ಸರಹದ್ದು, 42. ಸರಸ್ವತಿ, 43. ಸಾವುಕಾರ, 44. ಪಾರಂಗತ
45. ಭಾನಗಡಿ, 46. ಸಹೋದರ, 47. ತಾರತಮ್ಯ, 48. ಪರಿಣತಿ
49. ರಾಜಧಾನಿ, 50. ಡಕಾಯಿತ

ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

majakoora@prajavani.co.in

ವಿರಾಟ್ ಕೊಹ್ಲಿ

ಡೇವಿಡ್ ಮಿಲ್ಲರ್ ಮತ್ತು ರಾಹುಲ್ ತೆವಾಟಿಯಾ –ಪಿಟಿಐ ಚಿತ್ರಗಳು

ತೆವಾಟಿಯಾ–ಮಿಲ್ಲರ್ ಆಟ; ಗುಜರಾತ್ ಗೆಲುವಿನ ಓಟ

ವಿರಾಟ್ 'ಲಯ'ಕ್ಕೆ ಸಿಗದ ಜಯ

ಮುಂಬೈ(ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ 14 ಪಂದ್ಯಗಳ ನಂತರ ಅರ್ಧಶತಕ ದಾಖಲಿಸಿದ ವಿರಾಟ್ ಕೊಹ್ಲಿ ಅಂತೂ ಇಂತೂ ಲಯ ಕಂಡುಕೊಂಡರು. ಆದರೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸೋಲಿನ ಯಾತ್ರೆ ಮುಂದುವರಿಯಿತು.

ರಾಹುಲ್ ತೆವಾಟಿಯಾ (ಅಜೇಯ 43) ಮತ್ತು ಡೇವಿಡ್ ಮಿಲ್ಲರ್ (ಔಟಾಗದೆ 39) ಅಬ್ಬರದ ಬ್ಯಾಟಿಂಗ್ ಮೂಲಕ ಆರ್‌ಸಿಬಿಯಿಂದ ಗೆಲುವಿನ ಅವಕಾಶವನ್ನು ಕಿತ್ತುಕೊಂಡರು. ಗುಜರಾತ್ ಟೈಟನ್ಸ್ ತಂಡಕ್ಕೆ 6 ವಿಕೆಟ್‌ಗಳ ಜಯದ ಕಾಣಿಕೆ ನೀಡಿದರು. ಟೂರ್ನಿಯಲ್ಲಿ 13ನೇ ಜಯ ಸಾಧಿಸಿದ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಪ್ಲೇ ಆಫ್ ಹಂತದಲ್ಲಿ ಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡಿತು. ತಂಡಕ್ಕೆ ಇದು ಮೊದಲ ಐಪಿಎಲ್ ಟೂರ್ನಿಯಾಗಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಬೆಂಗಳೂರು ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವಿರಾಟ್ ಕೊಹ್ಲಿ (58; 53ಎ) ಮತ್ತು ರಜತ್ ಪಾಟೀದಾರ್ (52; 32ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ ಗಳಿಸಿದ 99 ರನ್‌ಗಳ ಬಲದಿಂದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 170 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು ಪಂದ್ಯದಲ್ಲಿ ಇನ್ನೂ ಮೂರು ಎಸೆತಗಳು ಬಾಕಿಯಿರುವಾಗಲೇ 4ಕ್ಕೆ174 ರನ್ ಗಳಿಸಿ ಜಯಿಸಿತು. ತಂಡಕ್ಕೆ ವೃದ್ಧಿಮಾನ್ ಸಹಾ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್‌ಗೆ 51 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಹಸರಂಗಾ ಹಾಕಿದ ಎಂಟನೇ ಓವರ್‌ನಲ್ಲಿ ಸಹಾ ಔಟಾದರು, ಶಾಬಾಜ್ ಅಹಮದ್ ಹಾಕಿದ ನಂತರದ ಓವರ್‌ನಲ್ಲಿ ಗಿಲ್ ಕೂಡ ಔಟಾದರು. ಕ್ರೀಸ್‌ಗೆ ಬಂದ ಹೊಸಪ್ರತಿಭೆ ಸಾಯಿ ಸುದರ್ಶನ್ 14 ಎಸೆತಗಳಲ್ಲಿ 20 ರನ್ ಗಳಿಸಿದರು. ಆದರೆ ತಂಡದ ಮೊತ್ತ ನೂರರ ಗಡಿ ಮುಟ್ಟುವ ಮುನ್ನ ಔಟಾದರು. ಸುದರ್ಶನ್‌ಗಿಂತ ಮುನ್ನ ಹಾರ್ದಿಕ್ ಪಾಂಡ್ಯ ಕೂಡ ಮೂರು ರನ್ ಗಳಿಸಿ ಔಟಾಗಿದ್ದರು.

ಈ ಹಂತದಲ್ಲಿ ಗುಜರಾತ್ ತಂಡದ ಜಯಕ್ಕೆ 43 ಎಸೆತಗಳಲ್ಲಿ 75 ರನ್ ಗಳ ಅಗತ್ಯವಿತ್ತು. ಆದರೆ ಐದನೇ ವಿಕೆಟ್ ಜೊತೆಯಾಟದಲ್ಲಿ 79 ರನ್‌ಗಳನ್ನು ಸೇರಿಸಿದ ಮಿಲ್ಲರ್ ಮತ್ತು ತೆವಾಟಿಯಾ ತಂಡವನ್ನು ಜಯದ ಗಡಿ ಮುಟ್ಟಿಸಿದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 170 (20 ಓವರ್)
ವಿರಾಟ್ ಬಿ ಶಮಿ 58 (53ಎ, 4X6, 6X1), ಡುಪ್ಲೆಸಿ ಸಿ ಸಹಾ ಬಿ ಸಂಗ್ವಾನ್ 0 (4ಎ), ರಜತ್ ಸಿ ಶುಭಮನ್ ಬಿ ಸಂಗ್ವಾನ್ 52 (32ಎ, 4X5, 6X2), ಮ್ಯಾಕ್ಸ್‌ವೆಲ್ ಸಿ ರಶೀದ್ ಬಿ ಫರ್ಗ್ಯುಸನ್ 33 (18ಎ, 4X3, 6X2), ದಿನೇಶ್ ಸಿ ಶಮಿ ಬಿ ರಶೀದ್ 2 (3ಎ), ಶಾಬಾಜ್ ಔಟಾಗದೆ 2 (2ಎ), ಮಹಿಪಾಲ್ ಸಿ ಮಿಲ್ಲರ್ ಬಿ ಜೊಸೆಫ್ 16 (8ಎ, 4X2, 6X1)
ಇತರೆ (ಲೆಗ್‌ಬೈ 5, ವೈಡ್ 2) 7
ವಿಕೆಟ್ ಪತನ: 1-11 (ಫಫ್ ಡುಪ್ಲೆಸಿ, 1.5), 2-110 (ರಜತ್ ಪಾಟಿದಾರ್, 14.1), 3-129 (ವಿರಾಟ್ ಕೊಹ್ಲಿ, 16.4), 4-138 (ದಿನೇಶ್ ಕಾರ್ತಿಕ್, 17.3), 5-150 (ಗ್ಲೆನ್ ಮ್ಯಾಕ್ಸ್‌ವೆಲ್, 18.3), 6-170 (ಮಹಿಪಾಲ್ ಲೊಮ್ರೊರ್, 19.6)
ಬೌಲಿಂಗ್: ಮೊಹಮ್ಮದ್ ಶಮಿ 4-0-39-1, ಪ್ರದೀಪ್ ಸಂಗ್ವಾನ್ 4-0-19-2, ಅಲ್ಜರಿ ಜೋಸೆಫ್ 4-0-42-1, ರಶೀದ್ ಖಾನ್ 4-0-29-1, ಲಾಕಿ ಫರ್ಗ್ಯುಸನ್ 4-0-36-1

ಗುಜರಾತ್ ಟೈಟನ್ಸ್ 4ಕ್ಕೆ 174 (19.3 ಓವರ್)
ಸಹಾ ಸಿ ರಜತ್ ಬಿ ಹಸರಂಗ 29 (22ಎ, 4X4), ಶುಭಮನ್ ಎಲ್‌ಬಿಡಬ್ಲ್ಯು ಶಾಬಾಜ್ 31 (28ಎ, 4X3, 6X1), ಸಾಯಿ ಸುದರ್ಶನ್ ಸಿ ಅನುಜ್ (ಬದಲಿ) ಬಿ ಹಸರಂಗ 20 (14ಎ, 4X2), ಹಾರ್ದಿಕ್ ಸಿ ಮಹಿಪಾಲ್ ಬಿ ಶಾಬಾಜ್ 3 (5ಎ), ಮಿಲ್ಲರ್ ಔಟಾಗದೆ 39 (24ಎ, 4X4, 6X1), ತೆವಾಟಿಯಾ ಔಟಾಗದೆ 43 (25ಎ, 4X5, 6X2)
ಇತರೆ (ಲೆಗ್‌ಬೈ 4, ನೋಬಾಲ್ 1, ವೈಡ್ 4) 9
ವಿಕೆಟ್ ಪತನ: 1-51 (ವೃದ್ಧಿಮಾನ್ ಸಹಾ, 7.3), 2-68 (ಶುಭಮನ್ ಗಿಲ್, 8.5), 3-78 (ಹಾರ್ದಿಕ್ ಪಾಂಡ್ಯ, 10.2), 4-95 (ಸಾಯಿ ಸುದರ್ಶನ್, 12.5)
ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 1-0-10-0, ಮೊಹಮ್ಮದ್ ಸಿರಾಜ್ 4-0-35-0, ಜೋಶ್ ಹ್ಯಾಜಲ್‌ವುಡ್ 3.3-0-36-0, ಶಾಬಾಜ್ ಅಹಮದ್ 3-0-26-2, ಹರ್ಷಲ್ ಪಟೇಲ್ 4-0-35-0, ವನಿಂದು ಹಸರಂಗ 4-0-28-2

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಆರು ವಿಕೆಟ್‌ಗಳ ಜಯ

ಇಂದಿನ ಪಂದ್ಯಗಳು: ಡೆಲ್ಲಿ ಕ್ಯಾಪಿಟಲ್ಸ್– ಲಖನೌ ಸೂಪರ್ ಜೈಂಟ್ಸ್. **ಆರಂಭ:** ಮಧ್ಯಾಹ್ನ 3.30.
ಸನ್‌ರೈಸರ್ಸ್ ಹೈದರಾಬಾದ್– ಚೆನ್ನೈ ಸೂಪರ್ ಕಿಂಗ್ಸ್. ಆರಂಭ: ರಾತ್ರಿ. 7.30. **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಮುಂಬೈ ಇಂಡಿಯನ್ಸ್‌ಗೆ ಮೊದಲ ಗೆಲುವು

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ಈ ಬಾರಿಯ ಐಪಿಎಲ್‌ನಲ್ಲಿ ಅಂತೂ ಇಂತೂ ಜಯದ ಖಾತೆ ತೆರೆಯಿತು.

ಶನಿವಾರ ರಾತ್ರಿ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ತಂಡವು ಸೂರ್ಯಕುಮಾರ್ ಯಾದವ್ (51; 39ಎ, 5ಬೌಂಡರಿ, 2ಸಿಕ್ಸರ್) ಮತ್ತು ತಿಲಕ್ ವರ್ಮಾ (35; 30ಎ) ಅವರ ಅಮೋಘ ಬ್ಯಾಟಿಂಗ್ ಬಲದಿಂದ 5 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು.

ರೋಹಿತ್ ಬಳಗವು ಕಳೆದ 8 ಪಂದ್ಯ ಗಳಲ್ಲಿ ಸೋತಿತ್ತು. ಈ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಯಲ್ಸ್ ತಂಡವು ಬಟ್ಲರ್ (67; 52ಎ, 5ಬೌಂಡರಿ, 4ಸಿಕ್ಸರ್) ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 158 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮುಂಬೈ ತಂಡವು 19.2 ಓವರ್‌ಗಳಲ್ಲಿ 5 ಕ್ಕೆ 161 ರನ್ ಗಳಿಸಿತು. ಮುಂಬೈನ ರೋಹಿತ್ ಈ ಪಂದ್ಯದಲ್ಲಿಯೂ ಬ್ಯಾಟಿಂಗ್ ಲಯ ಕಂಡುಕೊಳ್ಳಲಿಲ್ಲ. ಇಶಾನ್ ಕಿಶನ್ ಕೂಡ 26 ರನ್ ಮಾತ್ರ ಗಳಿಸಿದರು. ಕೊನೆಯ ಓವರ್‌ನವರೆಗೂ ಮುಂಬೈ ತಂಡಕ್ಕೆ ರಾಜಸ್ಥಾನ ಬೌಲರ್‌ಗಳು ತಡೆಯೊಡ್ಡುವ ಪ್ರಯತ್ನ ಮಾಡಿದರು. 20ನೇ ಓವರ್‌ನ ಮೊದಲ ಎಸೆತದಲ್ಲಿ ವಿಜಯದ ಬೌಂಡರಿ ಹೊಡೆಯುವ ಪ್ರಯತ್ನದಲ್ಲಿ ಪೊಲಾರ್ಡ್ ಅವರು ಮಿಚೆಲ್‌ಗೆ ಕ್ಯಾಚಿತ್ತರು. ಇದರಿಂದಾದ ಆತಂಕವನ್ನು ಡೆನಿಯಲ್ ಸ್ಯಾಮ್ಸ್ ಸಿಕ್ಸರ್ ಹೊಡೆದು ನಿವಾರಿಸಿರು.

ಸೂರ್ಯಕುಮಾರ್

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 6ಕ್ಕೆ 158 (ಜೋಸ್ ಬಟ್ಲರ್ 67, ದೇವದತ್ತ ಪಡಿಕ್ಕಲ್ 15, ಸಂಜು ಸ್ಯಾಮ್ಸನ್ 16, ಡೆರಿಲ್ ಮಿಚೆಲ್ 17, ಆರ್. ಅಶ್ವಿನ್ 21, ಹೃತಿಕ್ ಶೋಕೀನ್ 47ಕ್ಕೆ2, ರಿಲೀ ಮೆರಿಡ್ತ್ 24ಕ್ಕೆ2) ಮುಂಬೈ ಇಂಡಿಯನ್ಸ್: 19.2 ಓವರ್‌ಗಳಲ್ಲಿ 5ಕ್ಕೆ161 (ಸೂರ್ಯಕುಮಾರ್ ಯಾದವ್ 51, ತಿಲಕ್ ವರ್ಮಾ 35, ಟಿಮ್ ಡೇವಿಡ್ ಔಟಾಗದೆ 20, ಟ್ರೆಂಟ್ ಬೌಲ್ಟ್ 26ಕ್ಕೆ1, ಪ್ರಸಿದ್ಧ ಕೃಷ್ಣ 29ಕ್ಕೆ1) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 5 ವಿಕೆಟ್ ಜಯ.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	9	8	1	0	0	16	0.377
ರಾಜಸ್ಥಾನ	9	6	3	0	0	12	0.450
ಲಖನೌ	9	6	3	0	0	12	0.408
ಹೈದರಾಬಾದ್	8	5	3	0	0	10	0.600
ಬೆಂಗಳೂರು	10	5	5	0	0	10	-0.558
ಡೆಲ್ಲಿ	8	4	4	0	0	8	0.695
ಪಂಜಾಬ್	9	4	5	0	0	8	-0.470
ಕೋಲ್ಕತ್ತ	9	3	6	0	0	6	-0.006
ಚೆನ್ನೈ	8	2	6	0	0	4	-0.538
ಮುಂಬೈ	9	1	8	0	0	2	-0.836

*ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket